ವಾರ್ಷಿಕ ಚಂದಾ ರೂ.25/-

# ಮಾಸಿಕ ಜನಪದ

ಸಂಪುಟ-07 • ಸಂಚಿಕೆ-02 • ನವೆಂಬರ್ 2023




## ಚೆಲುವ ಕನ್ನಡ ನಾಡಿಗೆ
## ಸುವರ್ಣ ಮಹೋತ್ಸವ



Downloaded From:www.kpscvaani.com



ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರು ಅಕ್ಟೋಬರ್ 15 ರಂದು ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವನ್ನು ಉದ್ಘಾಟಿಸುತ್ತಿರುವುದು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಅಕ್ಟೋಬರ್ 24 ರ ವಿಜಯದಶಮಿಯಂದು ಅಂಬಾರಿಯಲ್ಲಿನ ಚಾಮುಂಡೇಶ್ವರಿ ದೇವಿಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾದೀಶರಾದ ಪ್ರಸನ್ನ ಬಿ. ವರಲೆ, ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ಸಚಿವರುಗಳಾದ ಶಿವರಾಜ್ ತಂಗಡಗಿ, ಡಾ. ಎಚ್.ಸಿ. ಮಹದೇವಪ್ಪ, ಮೈಸೂರಿನ ರಾಜವಂಶಸ್ಥರಾದ ಯದುವೀರ್, ಮೈಸೂರಿನ ಮೇಯರ್ ಶಿವಕುಮಾರ್ ಉಪಸ್ಥಿತರಿದ್ದರು.

Downloaded From:www.kpscvaani.com




ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-02 • ನವೆಂಬರ್ 2023



**06** ಚೆಲುವ ಕನ್ನಡ ನಾಡಿಗೆ ಸುವರ್ಣ ಮಹೋತ್ಸವ
• ಡಾ. ಆರ್.ಶಂಕರಪ್ಪ

**10** ಸುವರ್ಣ ಸಂಭ್ರಮದ ಅರ್ಥಪೂರ್ಣ ಆಚರಣೆಗೆ ಸಕಲ ಸಿದ್ಧತೆ
• ಕೆ.ಬಿ. ಕಿರಣ್ ಸಿಂಗ್

**13** ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಹಲವು ಹೋರಾಟಗಾರರ ಪಾತ್ರ
• ಉಷಾ ಎಸ್

**16** ಮಕ್ಕಳಿಗಾಗಿ ಕನ್ನಡ ಸಾಹಿತ್ಯ
• ಕೆ.ಎಸ್. ಸೋಮೇಶ್ವರ

**18** ಗರಗ ಕ್ಷೇತ್ರೀಯ ಸೇವಾ ಸಂಘಕ್ಕೆ 2023 ನೇ ಸಾಲಿನ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ

**20** ರಾಜ್ಯದಾದ್ಯಂತ ಏಕ ಕಾಲಕ್ಕೆ ಜನತಾ ದರ್ಶನ
• ಬಿ. ಜಿ. ಪೂರ್ಣಿಮ

**22** ಹೊಯ್ಸಳ ದೇವಾಲಯಗಳಿಗೆ ಯುನೆಸ್ಕೊ ಮಾನ್ಯತೆಯ ಗರಿಮೆ
• ದಿನೇಶ ನಾಯಕ್





**25** ಅಂಧಕಾರವನ್ನು ಹೋಗಲಾಡಿಸುವ ಹಬ್ಬವೇ ದೀಪಾವಳಿ
• ವೆಂಕಟೇಶ ಕೆ. ಜನಾದ್ರಿ

**28** ಬಾಲಕಾರ್ಮಿಕರ ರಕ್ಷಣಾ ಕಾರ್ಯಪಡೆಯ ಕಾರ್ಯವೈಖರಿ
• ಸಂಧ್ಯಾ ಸೊರಬ

**30** ರಾಜ್ಯದಲ್ಲಿ 'ಆರೋಗ್ಯ ಮಿತ್ರ' ಯೋಜನೆ ಆರಂಭ
• ಡಾ. ವರ ಪ್ರಸಾದ್ ರಾವ್ ಪಿ.ವಿ

**32** ದಸರಾ ವಸ್ತು ಪ್ರದರ್ಶನದಲ್ಲಿ ಪಂಚ ಗ್ಯಾರಂಟಿಗಳ ದರ್ಬಾರ್
• ಅಶೋಕ್ ಕುಮಾರ್. ಡಿ





**34** ವಿಶ್ವಕರ್ಮ ಜನಾಂಗದವರಿಗಾಗಿ ವಿವಿಧ ಯೋಜನೆಗಳು
• ಪಿ. ಕೌಸಲ್ಯ

**36** ಆನ್‌ಲೈನ್ ವಂಚನೆ ಬಗ್ಗೆ ಇರಲಿ ಎಚ್ಚರ
• ಉಮೇಶ್ ಕೊಲಿಗೆರೆ

**41** ಹಿರಿ ಗುಣದ ಕಿರುಕಾಳು ಸಾಮೆ
• ಆರ್. ಎಸ್. ಪಾಟೀಲ

**42** ಬರದಲ್ಲಿ ಕೈಹಿಡಿದ ಅಣಬೆ ಬೆಳೆ
• -ನವೀನ್ ಕುಮಾರ್ ಎಂ. ಕ್ಯಾಲನೂರ

**44** ಶಾಂತಲೆಯಂತೆ ಕಾಡುವ ನೀಲವೇಣಿ: ಹುಲಿಕೆರೆಯ ಐತಿಹಾಸಿಕ ಕಲ್ಯಾಣಿ
• ಪ್ರಸಾದ್ ಶೆಣೈ

**46** ಹಲಸಿ: ಕದಂಬರ ಶಿಲ್ಪಸಂಪದ
• ಪ್ರಹ್ಲಾದ ಪರ್ವತಿ

**48** ಮೂರು ಕೋಟಿ ದಾಟಿದ ಡಿಜಿಟಲ್ ಗ್ರಂಥಾಲಯ ನೊಂದಣಿ
• ಎನ್. ನಾಗರತ್ನಮ್ಮ

**50** ಪದಬಂಧ-48



ಪ್ರಧಾನ ಸಂಪಾದಕರು
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಪಲ್ಲವಿ ಹೊನ್ನಾಪುರ (ಹೆ.ಪ್ರ)
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50



ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಅಪ್ಪಟ ಗಾಂಧಿವಾದಿ ಬೆಳಗಾವಿಯ ಶಿವಾಜಿ ಕಾಗ್ನೇಕರ್ ಕುರಿತು ಡಾ. ಎಸ್.ಬಿ. ಬಸೆಟ್ಟಿ ಅವರ ಲೇಖನ ತುಂಬಾ ಸಂದರ್ಭೋಚಿತವಾಗಿತ್ತು. ಗಾಂಧಿಯವರ ವಿಚಾರಗಳನ್ನು ಸ್ವತಃ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ. ಎಲೆಮರೆಯ ಕಾಯಿಯಂತೆ ಇರುವ ಇಂತಹ ವ್ಯಕ್ತಿಗಳು ಇಂದಿನ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ.

**–ವೀರೇಂದ್ರಕುಮಾರ ಪಾಟೀಲ, ಮುದ್ದೇಬಿಹಾಳ**

* * *

'ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ' ಯ ಈ ಸಂದರ್ಭದಲ್ಲಿ ಆರ್.ಎಸ್.ಪಾಟೀಲರ ಸಿರಿಧಾನ್ಯ ಕುರಿತ ಲೇಖನ ಸಕಾಲಿಕವಾಗಿದೆ. ಸಿರಿಧಾನ್ಯಗಳಲ್ಲಿ ಹೇರಳವಾಗಿ ಆರೋಗ್ಯಕ್ಕೆ ಪೂರಕವಾದ ಪೋಷಕಾಂಶಗಳಿರುವುದು ಎಲ್ಲರೂ ತಿಳಿಯಬೇಕಾದ ಅಂಶ. ಈಗಿನ ಕೆಟ್ಟದಾದ ಜೀವನಶೈಲಿ ಮತ್ತು ಫಾಸ್ಟ್ ಫುಡ್‌ಗಳ ಸೇವನೆಯಿಂದ ಆರೋಗ್ಯ ಹಾಳು ಮಾಡಿಕೊಳ್ಳುತ್ತಿರುವುದು ಸಾಮಾನ್ಯವಾಗಿದೆ. ಇದಕ್ಕೆ ಬೆಂಬಲವಾಗಿ ಸಿರಿಧಾನ್ಯಗಳು ನಿಂತಿವೆ ಎಂಬುದನ್ನು ನಾವು ಅರಿಯೋಣ, ಬಳಸೋಣ ಮತ್ತು ಬೆಳೆಸೋಣ.

**–ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

* * *

ಅಕ್ಟೋಬರ್ ಸಂಚಿಕೆಯಲ್ಲಿ ಮೂಡಿ ಬಂದಿರುವ ಲೇಖನಗಳು ಓದುಗರಿಗೆ ಕಣ್ತೆರೆಸುವಂತಹ ಲೇಖನಗಳ ಮಾಲೆಯಾಗಿವೆ. ಎಲೆಮರೆಯ ಸುಮವಾಗಿ ಕಂಪುಸೂಸುತ್ತಾ ಪುರಸ್ಕಾರಗಳಿಗಾಗಿ ಹಂಬಲಿಸದೆ ಸಮಾಜಮುಖಿಯಾಗಿರುವ ಅಪ್ಪಟ ಗಾಂಧಿವಾದಿ ಬೆಳಗಾವಿಯ ಶಿವಾಜಿ ಕಾಗ್ನೇಕರರ ಲೇಖನವು ಮನಮುಟ್ಟುವಂತಿದೆ. 'ಮತ್ತೆ ಮರು ಜೀವ ಪಡೆದ ಆಲದ ಮರ' ಶಶಿಧರ ಅಂಗಡಿಯವರ ಲೇಖನವು ಸಿಂಧನೂರಿನ ವನಸಿರಿ ಮಿತ್ರರ ಕಾರ್ಯವೈಖರಿಗೆ ಜೀವಂತ ಸಾಕ್ಷಿಯಾಗಿದೆ. ಇಂತಹ ಲೇಖನಗಳು ಮತ್ತು ಪದಬಂಧವು ವಾರ್ತಾ ಜನಪದಕ್ಕೆ ಮುತ್ತುಗಳ ಮಾಲೆಯಂತೆ ನಳನಳಿಸುವಲ್ಲಿ ಪತ್ರಿಕೆಯು ಯಶಸ್ವಿಯಾಗಿದೆ.

**–ರಾಮಲಿಂಗಯ್ಯ ಶಿದ್ದಯ್ಯ ಸ್ವಾಮಿ ಹಿರೇಮಠ, ಕುಕನೂರು**

* * *

ವಾರ್ತಾ ಜನಪದ ಸಂಚಿಕೆಯ ಪ್ರಧಾನ ಸಂಪಾದಕರಾದ ಹೇಮಂತ್ ಎಂ. ನಿಂಬಾಳ್ಕರ್ ಅವರು ಪತ್ರಿ ಸಂಚಿಕೆಯಲ್ಲಿ ಸರ್ಕಾರದ ಯೋಜನೆಗಳ ಪರಿಚಯ ಮಾಡಿಸುವ ಜೊತೆಗೆ 'ಗೃಹಲಕ್ಷ್ಮಿ' ಯೋಜನೆಯನ್ನು ಮಾದರಿಯಾಗಿಟ್ಟುಕೊಂಡು ತಮಿಳುನಾಡು ಸರ್ಕಾರವು ಇತ್ತೀಚೆಗಷ್ಟೇ ಮಹಿಳೆಯರಿಗೆ ತಲಾ ಮಾಸಿಕ 1000 ರೂ ನೀಡುವ ಯೋಜನೆಗೆ ಚಾಲನೆ ನೀಡಿರುವುದು ಯೋಜನೆಯ ಯಶಸ್ಸಿಗೆ ಸಾಕ್ಷಿಯಾಗಿದೆ ಎಂಬ ಸುದ್ದಿಯನ್ನು ನಾಡಿನ ಜನತೆಗೆ ತಿಳಿಸಿಕೊಟ್ಟಿದ್ದಾರೆ.

'ಅರಮನೆ ನಗರಿಯಲ್ಲಿ ಗೃಹಲಕ್ಷ್ಮಿ ಯೋಜನೆಗೆ ವಿದ್ಯುಕ್ತ ಚಾಲನೆ ನೀಡಿದ ಸರ್ಕಾರ', 'ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಚೇತೋಹಾರಿಯಾದ ಕ್ಷೀರಭಾಗ್ಯ', 'ಮತ್ತೆ ಮರುಜೀವ ಪಡೆದ ಆಲದ ಮರ' ಲೇಖನಗಳನ್ನು ಬರೆದಿರುವ ಲೇಖಕರಿಗೆ ಅಭಿನಂದನೆಗಳು.

**–ಎಸ್. ಮಹಾದೇವಶೆಟ್ಟಿ, ಸೋಸಲೇಗ್ರಾಮ**




* * *

ಅಕ್ಟೋಬರ್ ತಿಂಗಳಿನ 'ವಾರ್ತಾ ಜನಪದ'ದಲ್ಲಿ ಪ್ರಕಟವಾದ ಕರ್ನಾಟಕ ಸರ್ಕಾರದ ನಾಲ್ಕನೆಯ ಗ್ಯಾರಂಟಿ ಯೋಜನೆಯಾದ 'ಗೃಹಲಕ್ಷ್ಮಿ' ಯೋಜನೆಯನ್ನು ಅನಾವರಣಗೊಳಿಸಿದ ಮುಖಪುಟದ ಚಿತ್ರ ಚಿತ್ತಾಕರ್ಷಕವಾಗಿತ್ತು. ಮನವನ್ನು ಮುದಗೊಳಿಸಿ ಹೃದಯದಲ್ಲಿ ಹರ್ಷದ ಹೊನಲನ್ನು ಹರಿಸಿತು. ಸಂಪಾದಕೀಯ ಲೇಖನ ದೇಶದಲ್ಲಿಯೇ ವಿನೂತನ ವಿಶಿಷ್ಟವಾದ ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನ ಉಳಿದೆಲ್ಲಾ ರಾಜ್ಯಗಳಿಗೆ ಮಾದರಿಯಾಗಿದೆಯೆಂಬುದನ್ನು ಆಧಾರ ಸಮೇತ ತಿಳಿಸಲು ಸಮರ್ಥವಾಯಿತು.

ಅರಮನೆ ನಗರಿಯಲ್ಲಿ 'ಗೃಹಲಕ್ಷ್ಮಿ' ಯೋಜನೆಗೆ ವಿದ್ಯುಕ್ತ ಚಾಲನೆ ನೀಡಿದ ಸರ್ಕಾರ' ಎಂಬ ಲೇಖನ ಮಾಹಿತಿ ಪೂರ್ಣವಾಗಿತ್ತು. ಹಾಗೂ ಮೈಸೂರಿನ ಮಹಾರಾಜ ಕಾಲೇಜಿನ ಮೈದಾನದಲ್ಲಿ ಜರುಗಿದ ಗೃಹಲಕ್ಷ್ಮಿ ಯೋಜನೆ ಚಾಲನೆಯ ಸಮಾರಂಭದ ಸುಂದರ ಸನ್ನಿವೇಶ ಕಣ್ಣಿಗೆ ಕಟ್ಟುವಂತಿತ್ತು.

ಮುಖ್ಯಮಂತ್ರಿಗಳ ಅಧಿಕೃತ ವಾಟ್ಸಾಪ್ ಚಾನೆಲ್ ಎಂಬ ವರದಿ ಸ್ವಾಗತಾರ್ಹವಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸದಾ ಕಾಲ ನಾಡಿನ ಜನರ ಸಂಪರ್ಕದಲ್ಲಿದ್ದು, ಅವರ ಸಮಸ್ಯೆಗೆ ಸ್ಪಂದಿಸಲು ಸನ್ನದ್ಧರಾಗಿದ್ದಾರೆಂದು ತಿಳಿಸಲು ಸಹಕಾರಿಯಾಯಿತು. ಒಟ್ಟಾರೆ ಈ ಸಂಚಿಕೆ ಸಂಗ್ರಹ ಯೋಗ್ಯವೆನಿಸಿತು.

**–ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

ಸೂರ್ಯನ ಅಧ್ಯಯನಕ್ಕಾಗಿ ಬಾಹ್ಯಾಕಾಶಕ್ಕೆ ಆದಿತ್ಯ ಎಂಬ ನೌಕೆಯನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ಉಡಾವಣೆ ಮಾಡಿರುವ ಕುರಿತು 'ದೈತ್ಯನ ಅರಿಯಲು ಇನ್ನೊಬ್ಬ ಆದಿತ್ಯ' ಎಂಬ ಶ್ರೀರ್ಷಿಕೆಯಡಿ ಪ್ರಕಟವಾಗಿರುವ ಲೇಖನವು ವಿಜ್ಞಾನ ಅರಿಯದ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಲೇಖಕ ಗುರುರಾಜ್ ಎಸ್ ದಾವಣಗೆರೆ ಅವರು ನೌಕೆ ಕಾರ್ಯನಿರ್ವಹಿಸುವ ವಿಧಾನಗಳನ್ನು ಓದುಗರಿಗೆ ನೀಡಿದ್ದಾರೆ. ಇಂತಹ ಲೇಖನಗಳಿಂದ ಓದುಗರ ಜ್ಞಾನ ಹೆಚ್ಚಲಿದೆ. ಹಾಗಾಗಿ ಇಂತಹ ಲೇಖನಗಳನ್ನು ಪ್ರಕಟಿಸಿದಕ್ಕೆ ಸಂಪಾದಕ ವಿಭಾಗಕ್ಕೆ ಅಭಿನಂದನೆಗಳು.

**–ಲೋಕೇಶ್, ತುಮಕೂರು**

'ವಾರ್ತಾ ಜನಪದ' ಮಾಸಿಕ ಈಗ **www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

ನಾಡಹಬ್ಬ ದಸರಾದ ಸಾಂಪ್ರದಾಯಿಕ ಹಾಗೂ ಅರ್ಥಪೂರ್ಣ ಆಚರಣೆ ಬರಗಾಲದ ನಡುವೆಯೂ ಜನರ ಸಂಭ್ರಮಕ್ಕೆ ಕಾರಣವಾಯಿತು. ನಾಡದೇವತೆ ಚಾಮುಂಡೇಶ್ವರಿ ನಾಡಿನ ಸಂಕಷ್ಟಗಳ ನಿವಾರಣೆ ಮಾಡಲಿ ಎಂದು ಆಶಿಸುತ್ತೇನೆ.

ನಾಡಹಬ್ಬದ ಸಂಭ್ರಮ ಮುಗಿಯುತ್ತಿದ್ದಂತೆ ನವೆಂಬರ್ 1 ಕ್ಕೆ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣ ಮಾಡಿ 50 ವರ್ಷ ತುಂಬಲಿದೆ. ಈ ಹಿನ್ನೆಯಲ್ಲಿ ಸುವರ್ಣ ಸಂಭ್ರಮಾಚರಣೆಯನ್ನು ನವೆಂಬರ್ 1 ರಿಂದ 2024ರ ನವೆಂಬರ್ 1 ರವರೆಗೆ ಒಂದು ವರ್ಷಗಳ ಕಾಲ ರಾಜ್ಯ ಸರ್ಕಾರವು 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಘೋಷವಾಕ್ಯದಡಿ ಕರ್ನಾಟಕ ಸಂಭ್ರಮವನ್ನು ಆಚರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕನ್ನಡ ನಾಡಿನ ಸಮೃದ್ಧಿ, ಸಂಸ್ಕೃತಿ ಮತ್ತು ಪ್ರಾದೇಶಿಕ ಭವ್ಯತೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಅರ್ಥಪೂರ್ಣ ಮತ್ತು ಸಂಭ್ರಮದ ಕಾರ್ಯಕ್ರಮಗಳನ್ನು ನಾಡಿನಾದ್ಯಂತ ಹಮ್ಮಿಕೊಳ್ಳಲು ಸರ್ಕಾರವು ಸಿದ್ಧತೆಯನ್ನು ನಡೆಸಿದೆ. ಅಕ್ಟೋಬರ್ 17 ರಂದು ಕರ್ನಾಟಕ ಸಂಭ್ರಮ-50 ರ ಲಾಂಛನವನ್ನು ಮುಖ್ಯಮಂತ್ರಿ ಅವರು ವಿಧಾನಸೌಧದಲ್ಲಿ ಬಿಡುಗಡೆ ಮಾಡಿದ್ದಾರೆ. ಈ ಸುವರ್ಣ ಸಂಭ್ರಮಾಚರಣೆಯ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ನಮ್ಮ ಪತ್ರಿಕೆಗೆ ಸಂದರ್ಶನ ನೀಡಿದ್ದಾರೆ.

ಕನ್ನಡ ಭಾಷೆಯನ್ನು ಬೆಳೆಸುವಲ್ಲಿ ಆದಿ ಕವಿಗಳಾದ ಪಂಪ, ರನ್ನ ರಿಂದ ಹಿಡಿದು ಸಮಸ್ತ ಕವಿ ಮತ್ತು ಸಾಹಿತಿಗಳ ಪಾತ್ರ ಪ್ರಮುಖವಾದುದು. ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಡೆದ ಚಳುವಳಿಗಳಲ್ಲಿ ಹೋರಾಟ ಮಾಡಿದವರನ್ನು ನಾವೆಲ್ಲರೂ ಈ ಸಂದರ್ಭದಲ್ಲಿ ಸ್ಮರಿಸಬೇಕು. ಆಲೂರು ವೆಂಕಟರಾಯರು ನಮ್ಮ ಕನ್ನಡ ಚಳುವಳಿಯ ಪಿತಾಮಹ ಎನಿಸಿದವರು. ಅವರ ನೇತೃತ್ವದಲ್ಲಿ ಬಹಳಷ್ಟು ಜನರು ಕೈಜೋಡಿಸಿದರು.

ಕನ್ನಡ ಭಾಷೆಗೆ ಪ್ರಾಮುಖ್ಯತೆ ಕೊಡಿಸುವ ನಿಟ್ಟಿನಲ್ಲಿ ಸಾಹಿತಿ ಡಾ. ವಿ.ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ 'ಗೋಕಾಕ್ ಚಳುವಳಿ'ಯಲ್ಲಿ ಕನ್ನಡ ನಾಡಿನ ಸಾಹಿತಿಗಳು, ವಿವಿಧ ಕ್ಷೇತ್ರದ ಮೇಧಾವಿಗಳು ಸೇರಿದಂತೆ ಪ್ರತಿಯೊಬ್ಬ ಕನ್ನಡಿಗ ನಾಗರಿಕನೂ ಭಾಗಿಯಾಗಿದ್ದರು. ಈ ದಿನಗಳಲ್ಲಿ ಕೂಡ ವಿವಿಧ ಸಂಘಟನೆಗಳು ಮತ್ತು ಸಂಸ್ಥೆಗಳು ಕನ್ನಡದ ಅವಶ್ಯಕತೆ ಮತ್ತು ಹಿರಿಮೆಯನ್ನು ಸದಾ ಜಾಗೃತವಾಗಿಡುವುದರಲ್ಲಿ ಶ್ರಮಿಸುತ್ತಿರುವುದರೊಂದಿಗೆ ಕನ್ನಡ ನಾಡಿನ ಸಂಸ್ಕೃತಿಯನ್ನು ಎಲ್ಲರೂ ಸದಾ ಕಾಲ ಮನದಟ್ಟು ಮಾಡಿಕೊಳ್ಳುವಂತೆ ಮಾಡುತ್ತಿರುವುದು ಶ್ಲಾಘನೀಯವಾದುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವಾಗಲೂ ನಾಗರಿಕರ ಸಮಸ್ಯೆಗಳನ್ನು ಬಗೆಹರಿಸುವ ಕುರಿತು ಚಿಂತನೆ ನಡೆಸುತ್ತಿರುತ್ತಾರೆ. ಹಾಗಾಗಿಯೇ ಅವರು ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜನತಾ ದರ್ಶನ ನಡೆಸಲು ಸೂಚಿಸಿದರು.

ಅವರ ನಿರ್ದೇಶನದಂತೆ ಸೆಪ್ಟೆಂಬರ್ 25 ರಂದು ರಾಜ್ಯದಾದ್ಯಂತ ಏಕ ಕಾಲಕ್ಕೆ 29 ಜಿಲ್ಲೆಗಳಲ್ಲಿ ಜನತಾ ದರ್ಶನ ನಡೆಸಿದ್ದು ರಾಜ್ಯದ ಇತಿಹಾಸದಲ್ಲೇ ಮೊದಲು. ಈ ಜನತಾ ದರ್ಶನದಲ್ಲಿ ಮೌಖಿಕ ಅಹವಾಲುಗಳನ್ನು ಹೊರತುಪಡಿಸಿ, ಒಟ್ಟು 15,992 ಅಹವಾಲುಗಳನ್ನು ಸ್ವೀಕರಿಸಲಾಯಿತು. ಸ್ವೀಕರಿಸಿದ ಬಹುಪಾಲು ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರವನ್ನು ಒದಗಿಸಿದರಿಂದ ಸಾರ್ವಜನಿಕರು ಹರ್ಷವನ್ನು ವ್ಯಕ್ತಪಡಿಸಿದ್ದಾರೆ. ಈ ಜನತಾ ದರ್ಶನದಲ್ಲಿ ಆಡಳಿತ ಪಕ್ಷದ ಜನಪ್ರತಿನಿಧಿಗಳಲ್ಲದೆ, ಇತರೆ ಪಕ್ಷದ ಜನಪ್ರತಿನಿಧಿಗಳು ಭಾಗಿಯಾಗಿದ್ದು ವಿಶೇಷವಾಗಿತ್ತು.

ದೀಪಾವಳಿ ಆಚರಣೆಯಲ್ಲಿ ಹಚ್ಚುವ ಪಟಾಕಿಯಿಂದ ಪರಿಸರ ಹಾಳಾಗುವುದಲ್ಲದೆ ಮಕ್ಕಳ ಕಣ್ಣಿಗೂ ಹಾನಿಯಾಗುತ್ತದೆ. ಇದು ಅವರಿಗೆ ಶಾಶ್ವತ ಅಂಧತ್ವವನ್ನು ಉಂಟು ಮಾಡಬಹುದು. ಆದ್ದರಿಂದ ಪಟಾಕಿ ಸಿಡಿಸುವ ಬದಲು ಅಸಮಾನತೆಯ ಕತ್ತಲೆಯನ್ನು ಹೋಗಲಾಡಿಸುವ ದೀಪವನ್ನು ಹಚ್ಚುವ ಮೂಲಕ ಎಲ್ಲರೂ ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವವನ್ನು ಆಚರಿಸೋಣ.

**ಓದುಗರೆಲ್ಲರಿಗೂ ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು,**

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From:www.kpscvaani.com

# ಚೆಲುವ ಕನ್ನಡ ನಾಡಿಗೆ
# ಸುವರ್ಣ ಮಹೋತ್ಸವ




**ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಸಂದರ್ಭ. ಅರಸು ಅವರ ಎಡಭಾಗದಲ್ಲಿ ಅಂದು ರಾಜ್ಯಪಾಲರಾಗಿದ್ದ ಮೋಹನ್ ಲಾಲ್ ಸುಖಾಡಿಯ ಅವರು ಉಪಸ್ಥಿತರಿದ್ದಾರೆ.**

ಡಾ. ಆರ್. ಶಂಕರಪ್ಪ

ನವೆಂಬರ್ 1ಕ್ಕೆ ಚೆಲುವ ಕನ್ನಡ ನಾಡಿಗೆ ಸುವರ್ಣ ಮಹೋತ್ಸವ, ಅಂದರೆ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷಗಳಾಯಿತು. ಆದರೆ ಅದಕ್ಕಿಂತ ಮೊದಲು ಮೈಸೂರು ರಾಜ್ಯ ಎಂದು ಕರೆಯಲಾಗುತ್ತಿತ್ತು. ಮೈಸೂರು ರಾಜ್ಯ ಬ್ರಿಟೀಷರ ಕಾಲದಲ್ಲಿ 1399 ರಿಂದ 1947ರವರೆಗೆ ರಾಜರ ಆಳ್ವಿಕೆಗೆ ಒಳಪಟ್ಟಿತ್ತು. 1947 ರಲ್ಲಿ ಭಾರತ ಸ್ವಾತಂತ್ರ್ಯ ಪಡೆದ ಮೇಲೆ 24/10/1947 ರಂದು ಭಾರತದಲ್ಲಿ ವಿಲೀನಗೊಳಿಸಲಾಯಿತು.

ನಂತರ 1956ರಲ್ಲಿ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು (4 ಭಾಗಗಳನ್ನು) ಮೈಸೂರು ಸಂಸ್ಥಾನದೊಂದಿಗೆ ವಿಲೀನಗೊಳಿಸಿದ ಪ್ರಕ್ರಿಯೆ ಮತ್ತು ಮೈಸೂರು ರಾಜ್ಯ ಎಂದು ಹೆಸರಿಸಲ್ಪಟ್ಟವು. ಈ ಹಿಂದೆ ಕನ್ನಡ ಭಾಷೆ ಮತ್ತು ಆ ಮೂಲಕ ರೂಪುಗೊಳ್ಳುವ ಸಂಸ್ಕೃತಿಯನ್ನು ಉಳಿಸಲು ಕನ್ನಡಿಗರೇ ಹೆಚ್ಚು ವಾಸಿಸುವ ಪ್ರದೇಶಗಳನ್ನು ಒಂದೇ ಆಡಳಿತದ ವ್ಯಾಪ್ತಿಗೆ ತರುವ ಅಗತ್ಯ ಇತ್ತು. ಅದಕ್ಕಾಗಿ ಅವಶ್ಯಕ ವಾತಾವರಣಗಳು ನಿರ್ಮಾಣವಾದವು. ಇದರ ಇತಿಹಾಸ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ, ಕರ್ನಾಟಕ ಸಭಾ ಸ್ಥಾಪನೆ, ಮೈಸೂರು ಏಕೀಕರಣ ಚಳುವಳಿ, ಜೆ.ವಿ.ಪಿ. ಸಮಿತಿ ಸ್ಥಾಪನೆ, ರಾಜ್ಯ ಪುನರ್ವಿಂಗಡಣಾ ಆಯೋಗ ರಚನೆ, ಮಹಾಜನ್ ಆಯೋಗದ ವರದಿ, ವಿಶಾಲ ಮೈಸೂರು ರಾಜ್ಯದ ಉದ್ಘಾಟನೆ ಇತ್ಯಾದಿಗಳು.



Downloaded From:www.kpscvaani.com



**ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದಂದು ಹಂಪಿಯಲ್ಲಿ ಜನರು ರಾಜ್ಯೋತ್ಸವ ಆಚರಣೆ ಮಾಡುತ್ತಿರುವುದು.**

## ವಿಶಾಲ ಮೈಸೂರು ರಾಜ್ಯದ ಉದ್ಘಾಟನೆ

1956 ನವೆಂಬರ್ 1 ರಂದು ನಡೆದ ಸಮಾರಂಭದಲ್ಲಿ ವಿಶಾಲ ಮೈಸೂರು ರಾಜ್ಯವನ್ನು ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು. ಅಂದೇ ಹೊಸ ರಾಜ್ಯದ ರಾಜ್ಯಪಾಲರಾಗಿ ಜಯಚಾಮರಾಜ ಒಡೆಯರ್ ಮುಖ್ಯಮಂತ್ರಿಯಾಗಿ ಎಸ್.ನಿಜಲಿಂಗಪ್ಪ ಅಧಿಕಾರ ಸ್ವೀಕರಿಸಿದರು. ಅದೇ ದಿನ ಹಂಪೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಕುಲ ಪುರೋಹಿತರೆಂದೇ ಖ್ಯಾತರಾದ ಆಲೂರು ವೆಂಕಟರಾಯರ ನೇತೃತ್ವದಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

**ಮೈಸೂರಿನ ಒಡೆಯರ ಕಾಲಾವಧಿ: 1399– 1947**

ಯದುರಾಯ(ವಿಜಯ) ಮತ್ತು ಕೃಷ್ಣರಾಯ ಎಂಬ ಇಬ್ಬರು ಸಹೋದರರು ಸಾಮ್ರಾಜ್ಯ ಸ್ಥಾಪಿಸಿದರು. ಯದುರಾಯ ಮೊದಲಿನ ಒಡೆಯರ್. ಮೊದಲಿಗೆ ಇವರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು. ವಿಜಯನಗರ ಸಾಮ್ರಾಜ್ಯ ಪತನದೊಂದಿಗೆ ಈ ಸಾಮ್ರಾಜ್ಯ ಸ್ವತಂತ್ರವಾಯಿತು. 17ನೇ ಶತಮಾನದಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸಿದರು. ಮೊದಲ ಕಂಠೀರವ ನರಸರಾಜ ಒಡೆಯರ್ ಮತ್ತು ಚಿಕ್ಕದೇವರಾಜ ಒಡೆಯರ್ ಆಳ್ವಿಕೆಯಲ್ಲಿ ದಕ್ಷಿಣ ಕರ್ನಾಟಕವನ್ನು ವ್ಯಾಪಿಸಿಕೊಂಡರು. ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಮೈಸೂರು ರಾಜ್ಯವು ಉಚ್ಛ್ರಾಯ ಸ್ಥಾನವನ್ನು ಕಂಡಿತು. ಆಗ ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು. ಅವರ ಕಾಲದಲ್ಲಿ ಕನ್ನಂಬಾಡಿ ಅಣೆಕಟ್ಟು, ಭದ್ರಾವತಿ ಉಕ್ಕು ಕಾರ್ಖಾನೆ, ಮೈಸೂರು ವಿವಿ ಸ್ಥಾಪನೆಗೊಂಡವು. ಮೈಸೂರು ಕೈಗಾರಿಕೆ, ನೀರಾವರಿಯಲ್ಲಿ ಆಧುನಿಕವಾಯಿತು. ಚಿಕ್ಕದೇವರಾಜರ ಆಳ್ವಿಕೆಯಲ್ಲೂ ಅನೇಕ ಸುಧಾರಣೆಗಳಾದವು. ಮಿರ್ಜಾ ಇಸ್ಮಾಯಿಲ್, ಪೂರ್ಣಯ್ಯ ದಿವಾನರಾಗಿದ್ದರು. ಮೈಸೂರು ಸಾಮ್ರಾಜ್ಯದಲ್ಲಿ ಕನ್ನಡ ಸಾಹಿತ್ಯ ಹಾಗೂ ಕರ್ನಾಟಕ ಸಂಗೀತಗಳು ತುಂಬಾ ಬೆಳವಣಿಗೆ ಕಂಡವು. ಲಕ್ಷ್ಮೀಶ ಮತ್ತು ಸರ್ವಜ್ಞರು ತಮ್ಮ ಛಾಪನ್ನು ಮೂಡಿಸಿದರು. ಮುಮ್ಮಡಿ ಕೃಷ್ಣರಾಜ, ಒಂಬತ್ತನೇ ಚಾಮರಾಜರು ಸ್ವತಃ ವಿದ್ವಾಂಸರಾಗಿದ್ದರು.

**ಮೈಸೂರು ಚಲೋ ಮೆಲುಕು**

1947ರ ಆಗಸ್ಟ್ 15ರಂದು ಭಾರತವು ಬ್ರಿಟೀಷರಿಂದ ಮುಕ್ತವಾಗಿ ಸ್ವಾತಂತ್ರ್ಯ


Downloaded From:www.kpscvaani.com




ಪಡೆದ ಮೇಲೂ ಮೈಸೂರು ಸಂಸ್ಥಾನದಲ್ಲಿ ಭಾರತದ ಸ್ವಾತಂತ್ರ್ಯ ಸಂಭ್ರಮಾಚರಣೆಯನ್ನು ನಿಶ್ಶಬ್ದಗೊಳಿಸಲಾಯಿತು. ಮೈಸೂರು ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಸೇರಲು ನಿರಾಕರಿಸಿತು. ಸಂಪೂರ್ಣ ಜವಾಬ್ದಾರಿಯುತ ಸರ್ಕಾರವನ್ನು ಸ್ಥಾಪಿಸಲೇಬೇಕೆಂಬ ಕಾಂಗ್ರೆಸ್ ಒತ್ತಾಯಕ್ಕೆ ಮೈಸೂರು ಸಂಸ್ಥಾನವು ಮಣಿಯಲಿಲ್ಲ. ಆಗ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು 1947ರ ಆಗಸ್ಟ್ 20ರಂದು ಮಹಾರಾಜರ ಸರ್ಕಾರವನ್ನು ಅಲುಗಾಡಿಸಲು ನಿರ್ಧರಿಸಿ 'ಚಲೋ ಮೈಸೂರು' ಹೋರಾಟವನ್ನು ಘೋಷಿಸಿತು. ಪ್ರಜಾ ಪಕ್ಷ ಸ್ಥಾಪಕರಾದ ಕೆ.ಸಿ. ರೆಡ್ಡಿ ನೇತೃತ್ವದಲ್ಲಿ 1947ರ ಸೆಪ್ಟೆಂಬರ್ 1ರಂದು ಚಲೋ ಮೈಸೂರು ಎಂಬ ಚಳವಳಿಯು ಪ್ರಾರಂಭವಾಯಿತು.

ಮೈಸೂರಿನ ಎಲ್ಲಾ ಒಂಬತ್ತು ಜಿಲ್ಲೆಗಳ ಜನರು ಮತ್ತು ರಾಜ್ಯದ ಹೊರಗಿನ ಬೆಂಬಲಿಗರು ಮೈಸೂರಿನ ಕಡೆಗೆ ಮೆರವಣಿಗೆ ಪ್ರಾರಂಭಿಸಿದರು. ಇದರ ಮುಂದುವರಿದ ಭಾಗವಾಗಿ ಬಾಣಾವರದ ರಾಮಸ್ವಾಮಿ ಅವರು ಐದು ದೀಪಗಳ ವೃತ್ತ ಅಂದರೆ ಇಂದಿನ ರಾಮಸ್ವಾಮಿ ವೃತ್ತದ ಬಳಿ 1947ರ ಸೆಪ್ಟೆಂಬರ್ 13 ರಂದು ಪ್ರಾಣತ್ಯಾಗ ಮಾಡಬೇಕಾಯಿತು.

ಲಾಠಿ ಚಾರ್ಜ್ ಮಾಡಿದರೂ ವಿದ್ಯಾರ್ಥಿಗಳು ಚದುರದ ಕಾರಣ ಅಂದಿನ ಜಿಲ್ಲಾಧಿಕಾರಿ ನಾಗರಾಜ ರಾವ್ ಅವರು ನೀಡಿದ ಗೋಲಿಬಾರ್ ಆದೇಶವನ್ನು ಪೊಲೀಸರು ನಿರಾಕರಿಸಿದರು. ಹೀಗಾಗಿ ಸ್ವತಃ ರಾವ್ ಅವರು ರಿವಾಲ್ವರ್‌ನಿಂದ ಗುಂಡನ್ನು ಹಾರಿಸಿಯೇಬಿಟ್ಟರು. ಹಾರ್ಡ್‌ವಿಕ್ ಶಾಲೆಯ ವಿದ್ಯಾರ್ಥಿಯಾಗಿದ್ದ ರಾಮಸ್ವಾಮಿ ಅವರು ಮಧ್ಯಾಹ್ನ ಸುಮಾರು 1.30ರ ಸಮಯದಲ್ಲಿ ಸ್ಥಳದಲ್ಲೇ ಅಸುನೀಗಿದರು. ಹೀಗಾಗಿ ಈಗ




ಅಂದು ಸಚಿವರಾಗಿದ್ದ ಸಿದ್ದರಾಮಯ್ಯ ಅವರು ಕನ್ನಡ ಆಡಳಿತ ಭಾಷಾ ಕಾವಲು ಸಮಿತಿ ಉದ್ಘಾಟನಾ ಸಮಾರಂಭದಲ್ಲಿ ಭಾಷಣ ಮಾಡುತ್ತಿರುವುದು. ಅಂದಿನ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ, ಸಚಿವರಾಗಿದ್ದ ಎಂ.ಪಿ.ಪ್ರಕಾಶ್, ರಾಚಯ್ಯ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.


Downloaded From:www.kpscvaani.com

ಈ ವೃತ್ತವನ್ನು ರಾಮಸ್ವಾಮಿ ವೃತ್ತವೆಂದು ಕರೆಯುತ್ತಾರೆ. ದಿವಾನ್ ಅರ್ಕಾಟ್ ರಾಮಸ್ವಾಮಿಯವರು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ಮೊದಲ ಅಧ್ಯಕ್ಷರಾಗಿಯೂ ಮತ್ತು ರಾಜನೀತಿಯಲ್ಲಿ ಚಾಣಾಕ್ಷರಾಗಿದ್ದರೂ ಮಹಾರಾಜರಿಗೆ ಸರಿಯಾಗಿ ಸಲಹೆ ನೀಡಲಿಲ್ಲ.

ಕೊನೆಗೆ ಜಯಚಾಮರಾಜ ಒಡೆಯರ್ ಅವರು ಇನ್ನಷ್ಟು ಸಾವುನೋವುಗಳು ತೀವ್ರವಾಗದಿರಲು ಮೈಸೂರು ಸಂಸ್ಥಾನದ ವಿಲೀನಕ್ಕೆ ಒಪ್ಪಿಗೆ ನೀಡಿದರು. ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ರೆಡ್ಡಿ ಅವರು ಸರ್ಕಾರದೊಂದಿಗೆ ದಿನಾಂಕ 13.10.1947 ರಂದು ಒಪ್ಪಂದಕ್ಕೆ ಸಹಿ ಹಾಕಿದರು. ಸಾಂವಿಧಾನಿಕ ಸಭೆಯ ನಿರ್ಣಯಗಳು ಅಂಗೀಕಾರವಾಗುವವರೆಗೆ ಮಧ್ಯಂತರ ಸರ್ಕಾರವನ್ನು ರಚಿಸಲು ಮಹಾರಾಜರು ಒಪ್ಪಿಕೊಂಡರು.

ವಿಜಯದ ಸಂಕೇತವೆಂದು ನಂಬಲಾದ ವಿಜಯದಶಮಿ ಹಬ್ಬವು 1947ರ ಅಕ್ಟೋಬರ್ 24ರಂದು ಇದ್ದ ಕಾರಣ ಈ ಹಿನ್ನೆಲೆಯಲ್ಲಿ 24–10–1947ರಂದು ಮೈಸೂರು ಸಂಸ್ಥಾನವನ್ನು ವಿಲೀನಗೊಳಿಸಲಾಯಿತು. ಅದೇ ದಿನದಂದು 'ಮೈಸೂರು ರಾಜ್ಯದ' ಹೊಸ ಮಂತ್ರಿಮಂಡಲವನ್ನೂ ರಚಿಸಲಾಯಿತು. 25–10–1947 ರಂದು ಕೆ.ಸಿ.ರೆಡ್ಡಿ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಪ್ರತಿ ವರ್ಷವು ಮೈಸೂರಿನ ಸುಬ್ಬರಾಯನ ಕೆರೆ ಆವರಣದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಘವು ಚಲೋ ಮೈಸೂರು ದಿನಾಚರಣೆಯನ್ನು ವಿಜೃಭಣೆಯಿಂದ ಆಚರಿಸಿಕೊಂಡು ಬರುತ್ತಿದೆ.

**ಸುವರ್ಣ ರಾಜ್ಯೋತ್ಸವ**

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 01/11/2023ಕ್ಕೆ ಐವತ್ತು ವರ್ಷಗಳಾಯಿತು. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಕೀರ್ತಿ ಮಾಜಿ ಮುಖ್ಯಮಂತ್ರಿಗಳು ಧೀನದಲಿತರ ರುವಾರಿ, ಕರುನಾಡಿನ ಕರುಣಾಮಯಿ ದೇವರಾಜ ಅರಸ್‌ರವರಿಗೆ ಸಲ್ಲುತ್ತದೆ. ಭಾರತ 15/08/1947ರಂದು ಸ್ವಾತಂತ್ರ್ಯ ಪಡೆದು 1956ರಲ್ಲಿ ಕರ್ನಾಟಕ ಏಕೀಕರಣವಾದರೂ 1973ರ ತನಕ ಯಾರಿಗೂ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲು ಇಚ್ಛಾಶಕ್ತಿ ಇರಲಿಲ್ಲ. ಆದರೆ ಮಾನ್ಯ ದೇವರಾಜ ಅರಸರು 20/03/1973ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ನಾಡಿನ ಜನತೆಯ ಅಭಿವೃದ್ಧಿಗಾಗಿ ಅನೇಕ ಜನಪರ ಕಾರ್ಯಗಳು ಮತ್ತು ಕಾನೂನುಗಳನ್ನು ಜಾರಿಗೆ ತಂದರು. ಅವುಗಳಲ್ಲಿ ಪ್ರಮುಖವಾದದ್ದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ್ದು.


ನೂರಾರು ಕಾಲದ ಲಕ್ಷಾಂತರ ಜನರ ಭಾವನೆಗಳ ಕನಸು ಫಲ್ಲವಿಸಿ ಹೂವಾಗಿ ನೆನಪಿನ ಫಲವಾಗಿ ಕೈಸೇರಿದ ದಿನ 1973ರ ನವೆಂಬರ್ ಒಂದು. ಅರಸು ಅವರು ಕೈಗೊಂಡ ಯೋಜನೆಗಳಿಂದ ಎಲ್ಲಾ ವರ್ಗಗಳ ಜನರ ಪ್ರೀತಿ ಗೌರವಗಳನ್ನು ಗಳಿಸುವ ಮೂಲಕ ಜನಪ್ರಿಯ ಜನನಾಯಕರಾದರು. ಈ ಅದ್ಭುತ ಸಾಧನೆಯಿಂದ ಅವರು ಕನ್ನಡಿಗರ ಹೃದಯದಲ್ಲಿ ನಿಂತರು. ತಮ್ಮ ಧಮನಿ (ನಾಡಿ) ಯಲ್ಲಿ ಹರಿಯುತ್ತಿದ್ದ ಕವಿ ಮಂಗರಸರ ನಾಡಪ್ರೇಮವನ್ನು ಕನ್ನಡ ಮೆನಿಪ್ಪಾ ನಾಡು ಚೆಲ್ವಾಯ್ತು ಎಂಬ ಮಾತನ್ನು ಎದೆತೆರೆದು ತೋರಿಸಿದರು.

ಕರ್ನಾಟಕದ ಚೈತನ್ಯ ಭಾಷೆ ಕನ್ನಡ, ಅದು ಜನತೆಯ ಜೀವನಾಡಿ. ನುಡಿಬೆಳೆದರೆ ನಾಡು ಬೆಳೆದಂತೆ ಜನಸಾಮಾನ್ಯರ ಉತ್ಕರ್ಷಕ್ಕಾಗಿ ಜನಕ್ಕೆ ತಿಳಿಯುವ ಭಾಷೆಯೇ ಆಡಳಿತ ಭಾಷೆಯಾಗಬೇಕೆಂಬ ಹೆಬ್ಬಯಕೆ ಅವರಿಗಿತ್ತು. ಕನ್ನಡವನ್ನು ಕನ್ನಡತನವನ್ನು ಬೆಳೆಸಿ ಮೆರೆಸುವ ಸಂಕಲ್ಪ ಅವರದ್ದು. ರಾಜ್ಯದ ಎಲ್ಲಾ ಮಟ್ಟದಲ್ಲಿ ಆಡಳಿತ ಭಾಷೆಯಾಗುವಂತೆ ಕನ್ನಡ ಬಳಕೆಯ ಘೋಷಣೆ ಮಾಡಿದರು. ಅದಕ್ಕಾಗಿ ಅಗಾಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮುಕ್ತ ಮನಸ್ಸಿನಿಂದ ಅನುದಾನ ನೀಡಿದರು. ಸಾಹಿತ್ಯ ಪರಿಷತ್ತು ಮತ್ತು ಸಾಹಿತ್ಯ ಅಕಾಡೆಮಿಗಳಿಗೆ ಅರಸು ದಶಕ ಎಂದರೆ 1972 ರಲ್ಲಿ ಅವರು ಮುಖ್ಯಮಂತ್ರಿ ಆದಾಗಿನಿಂದ 1980 ರ ವರೆಗೂ ಅರಸು ದಶಕ ಎನ್ನುತ್ತಾರೆ.

ಈ ಸಮಯದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಅವರು ಉತ್ತಮ ಅವಕಾಶಗಳನ್ನು ಕೊಟ್ಟಿದ್ದರಿಂದ ಆ ಕಾಲವನ್ನು ಸುವರ್ಣ ಕಾಲ ಎನ್ನುತ್ತಾರೆ. ಇನ್ನು ಅವರ ಕಾಲದಲ್ಲೇ ಕವಿ ಸಾಹಿತಿಗಳಿಗೆ ಮಾಶಾಸನ ಗೌರವದ ಮನ್ನಣೆಯೂ ಜಾರಿಗೆ ಬಂತು. ಈ ಕಾಲದಲ್ಲಿ ಸಾಹಿತ್ಯ ಪರಿಷತ್ತು ತನ್ನ ಚಟುವಟಿಕೆಯ ಕಾರ್ಯ ಕ್ಷೇತ್ರವನ್ನು ಪಟ್ಟಣದಿಂದ ಹಳ್ಳಿಯವರೆಗೆ ವಿಸ್ತರಿಸಿಕೊಂಡಿತು. ಈ ಸಂದರ್ಭದಲ್ಲಿ ಅರಸುರವರು ಘೋಷಿಸಿದ ಘೋಷವಾಣಿ "ನಾನು ಮುಖ್ಯಮಂತ್ರಿಯಾಗಿರುವವರೆಗೂ ಬೆಳಗಾವಿಯನ್ನು ಬಿಟ್ಟುಕೊಡಲಾರೆ" ಎಂಬ ಧೀರವಾಣಿ. ಕಾಸರಗೂಡನ್ನು ಕರ್ನಾಟಕದಿಂದ ಕಳಚಲು ಬಿಡಲಾರೆ ಎಂಬ ಅಚಲತೆ. ಕೃಷ್ಣ, ಕಾವೇರಿ ನದಿ ಜಲದ ಬಗ್ಗೆ ಕನ್ನಡಿಗರ ಔದಾರ್ಯವನ್ನು ಯಾರೂ ದುರುಪಯೋಗ ಪಡಿಸಿಕೊಳ್ಳಲು ಬಿಡೆವು ಎಂಬ ಅವರ ದೃಢನಿಲುವು ಇವರೊಬ್ಬ ಸಮರ್ಥ ಜನನಾಯಕ ಎಂದು ಜನ ಒಪ್ಪಿಕೊಳ್ಳಲು ಕಾರಣವಾದವು. ಹೀಗಾಗಿ ಅರಸುರವರು ಜನರ ಹೃದಯ ಸಿಂಹಾಸನದಲ್ಲಿ ಸ್ಥಾನವನ್ನು ಹೊಂದುವುದು ಮಾತ್ರವಲ್ಲದೆ ಕರ್ನಾಟಕದ ಇತಿಹಾಸದಲ್ಲಿ ಅಜರಾಮರರಾದರು.

ಹುಯಿಲಗೋಳ ನಾರಾಯಣರಾಯರು 67 ವರ್ಷಗಳ ಹಿಂದೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂದು ಹಾಡಿರುವಂತೆ ದೇವರಾಜ ಅರಸು ಅವರ ಕಾಲದಲ್ಲಿ ಮೈಸೂರು ರಾಜ್ಯವು ಕರ್ನಾಟಕ ರಾಜ್ಯವಾಗಿ ಉದಯವಾಯಿತು. ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ನವೆಂಬರ್ 1 ರಿಂದ 2024 ರ ನವೆಂಬರ್ 1 ರವರೆಗೆ ವರ್ಷವಿಡೀ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಹೆಸರಿನಲ್ಲಿ 'ಕರ್ನಾಟಕ ಸುವರ್ಣ ಸಂಭ್ರಮ' ಆಚರಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕರ್ನಾಟಕದ ದೇಶೀ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ■


Downloaded From:www.kpscvaani.com



# ಸುವರ್ಣ ಸಂಭ್ರಮದ ಅರ್ಥಪೂರ್ಣ ಆಚರಣೆಗೆ ಸಕಲ ಸಿದ್ಧತೆ

**ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣಗೊಂಡು 50 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು "ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ" ಎಂಬ ಹೆಸರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ನವೆಂಬರ್ 1 –2023 ರಿಂದ 1 ನವೆಂಬರ್ 2024 ರವರೆಗೆ ಕರ್ನಾಟಕ ಸಂಭ್ರಮ ಆಚರಿಸಲು ಸಿದ್ಧತೆಯನ್ನು ನಡೆಸಿದೆ. ಸರ್ಕಾರವು ಅಕ್ಟೋಬರ್ 17 ರಂದು ಕರ್ನಾಟಕ ಸಂಭ್ರಮ ಆಚರಣೆಯ ಲಾಂಛನವನ್ನು ಕೂಡ ಬಿಡುಗಡೆ ಮಾಡಿತು. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರ ಸಂದರ್ಶನವನ್ನು ವಾರ್ತಾ ಜನಪದ ನಡೆಸಿದೆ.**

ಕೆ.ಬಿ. ಕಿರಣ್ ಸಿಂಗ್

**ಮೊದಲಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ತಮ್ಮ ಈ ನಾಲ್ಕು ತಿಂಗಳ ಅನುಭವ ಹಂಚಿಕೊಳ್ಳುವಿರಾ ?**

ನಾನು ಈ ಹಿಂದೆ ಕೃಷಿ ಮಾರುಕಟ್ಟೆ, ಸಣ್ಣ ನೀರಾವರಿ ಹಾಗೂ ಸಣ್ಣ ಕೈಗಾರಿಕೆ ಇಲಾಖೆಗಳ ಸಚಿವನಾಗಿ ಕೆಲಸ ಮಾಡಿದ್ದೆ. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿ ಮತ್ತು ಮಹತ್ವ ಈ ಇಲಾಖೆಯ ನಿರ್ವಹಣೆ ವಹಿಸಿಕೊಂಡಾಗಿನಿಂದ ಅರ್ಥವಾಗಿವೆ. ಇದೊಂದು ಅತ್ಯಂತ ಮಹತ್ವದ ಇಲಾಖೆ ಹಾಗೂ ಅತ್ಯಂತ ಸೂಕ್ಷ್ಮವಾದ ಇಲಾಖೆಯೂ ಹೌದು. ಸಾಹಿತಿಗಳು ಮತ್ತು ಕಲಾವಿದರುಗಳ ಜೊತೆಗಿನ ಒಡನಾಟ ನಮ್ಮ ಬೌದ್ಧಿಕತೆಯನ್ನು ವಿಸ್ತರಿಸುವಲ್ಲಿ ನೆರವಾಗುತ್ತದೆ. ನಾಡಿನ ಕಲೆ ಮತ್ತು ಸಂಸ್ಕೃತಿ ಹಾಗೂ ಸಾಹಿತ್ಯದ ಮಹತ್ವ ಮತ್ತು ಅವುಗಳನ್ನು ಬೆಳೆಸುವ ನಿಟ್ಟಿನಲ್ಲಿ ನಾವು ಅಗಾಧವಾದ ಕೆಲಸ ಮಾಡಲು ಇಲ್ಲಿ ಅವಕಾಶವಿದೆ. ಈ ನಾಲ್ಕು ತಿಂಗಳುಗಳಲ್ಲಿ  ನಾನು ನಾಲ್ಕು ಕಂದಾಯ ವಿಭಾಗಳಲ್ಲಿ ಅಂದರೆ, ಬೆಂಗಳೂರು, ಮೈಸೂರು, ಧಾರವಾಡ (ಬೆಳಗಾವಿ) ಹಾಗೂ ಕಲಬುರಗಿಗಳಿಗೆ ಬೇಟಿ ನೀಡಿ ಆಯಾ ವಿಭಾಗದ ವ್ಯಾಪ್ತಿಗೆ ಬರುವ ಸಾಹಿತಿಗಳು ಮತ್ತು ಕಲಾವಿದರುಗಳ ಜೊತೆ ಸಮಾಲೋಚನೆ ನಡೆಸಿದ್ದೇನೆ. ಮಹಾಮಹಿಮರ ಜಯಂತಿಗಳ ಆಚರಣೆಯಲ್ಲಿ ಪಾಲ್ಗೊಂಡಿದ್ದೇನೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅವಶ್ಯವಿರುವ ಸಂಗತಿಗಳನ್ನು  ಚರ್ಚಿಸಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗಿದ್ದೇನೆ. ಒಟ್ಟಾರೆ ಈ ಇಲಾಖೆ



Downloaded From:www.kpscvaani.com

ನನಗೆ ತುಂಬಾ ಮಹತ್ವದ ಇಲಾಖೆಯಾಗಿ ಕಂಡಿದೆ ಮತ್ತು ಇದನ್ನು ಸಮರ್ಥವಾಗಿ ನಿಭಾಯಿಸುವ ಆತ್ಮವಿಶ್ವಾಸವೂ ನನಗಿದೆ.

**ನೀವು ಮಂತ್ರಿ ಆದ ಬಳಿಕ ಇಲಾಖೆಯಲ್ಲಿ ಹಮ್ಮಿಕೊಂಡಿರುವ ಹೊಸ ಯೋಜನೆಗಳ ಬಗ್ಗೆ ತಿಳಿಸುವಿರಾ.**

ರಾಮನಗರದಲ್ಲಿರುವ ಜಾನಪದ ಲೋಕದ ಹಾಗೆ ಕೊಪ್ಪಳದಲ್ಲಿ ಕೂಡ ಅದೇ ಮಾದರಿಯಲ್ಲಿ ಜಾನಪದ ಲೋಕ ನಿರ್ಮಿಸಲು ಉದ್ದೇಶಿಸಲಾಗಿದೆ. ಖ್ಯಾತ ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಹೆಸರಿನಲ್ಲಿ ಸ್ಥಾಪಿಸಿರುವ ಪ್ರತಿಷ್ಠಾನದ ಮೂಲಕ ಅವರ ಸಾಹಿತ್ಯ ಮತ್ತು ಚಿಂತನೆಗಳನ್ನು ಯುವಜನಾಂಗಕ್ಕೆ ಪರಿಚಯಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಬಂಜಾರ ಸಮುದಾಯದ ಸಾಂಸ್ಕೃತಿಕ ಮತ್ತು ಜಾನಪದ ಕಲೆಗಳನ್ನು ಕಾಪಾಡಲು ಅಗತ್ಯವಾದ ಯೋಜನೆ ರೂಪಿಸಲಾಗುವುದು. ಹಾಗೆಯೇ ಬುಡಕಟ್ಟು ಸಮುದಾಯದ ಕಲಾ ಪ್ರತಿಭೆಗಳನ್ನು ಪ್ರದರ್ಶಿಸಲು ಯೋಜನೆ ರೂಪಿಸಲು ಉದ್ದೇಶಿಲಾಗಿದೆ. ಎಂ.ಎಂ. ಕಲಬುರ್ಗಿ ಅವರ ಮನೆಯನ್ನು ಉತ್ಕೃಷ್ಟ ಮಟ್ಟದ ಸ್ಮಾರಕವನ್ನಾಗಿ ಮಾಡಲು ಉದ್ದೇಶಿಸಲಾಗಿದೆ.

**ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣವಾಗಿ 50 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಇಲಾಖೆವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುವ 'ಹೆಸರಾಯಿತು ಕರ್ನಾಟಕ, ಉಸಿರಾಯಿತು ಕನ್ನಡ' ಕಾರ್ಯಕ್ರಮಗಳು ಹೇಗಿರುತ್ತದೆ ?**

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷಗಳು ಪೂರ್ಣಗೊಂಡಿದೆ. ಇದು ಒಂದು ಐತಿಹಾಸಿಕ ಮಹತ್ವದ ಸಂದರ್ಭ. ಇದನ್ನು ಸ್ಮರಣೀಯವಾಗಿಸಲು ಅಭೂತಪೂರ್ವ ಕಾರ್ಯಕ್ರಮಗಳನ್ನು ಆಯೋಜಿಸಲು ನಮ್ಮ ಸರ್ಕಾರ ಮುಂದಾಗಿದೆ. ಈ ಸಂದರ್ಭದಲ್ಲಿ ನಾನು ಮಂತ್ರಿಯಾಗಿರುವುದು ಹಾಗೂ ಈ ಕಾರ್ಯಕ್ರಮವನ್ನು ಆಯೋಜಿಸಲು ನನಗೆ ಅವಕಾಶ ಸಿಕ್ಕಿರುವುದು ನನ್ನ ಸುದೈವ. 1973ರಲ್ಲಿ ಕರ್ನಾಟಕ ನಾಮಕರಣದ ಸಂದರ್ಭದಲ್ಲಿ ಹಂಪಿಯ ವಿರೂಪಾಕ್ಷ ದೇವಸ್ಥಾನದಿಂದ ಗದುಗಿನ ವೀರನಾರಾಯಣ ದೇವಾಲಯದವರೆಗೆ ಕನ್ನಡ ಜ್ಯೋತಿ ಮೆರವಣಿಗೆಯಾಗಿತ್ತು. ಅದೇ ರೀತಿ ಈಗಲೂ ಕಾರ್ಯಕ್ರಮ ಆಯೋಜಿಸಲಾಗುವುದು.

ಈ ಸಂದರ್ಭದಲ್ಲಿ ಒಂದು ವಿಶೇಷ ಲಾಂಛನವನ್ನು ರೂಪಿಸಿ ಬಿಡುಗಡೆ ಮಾಡಲಾಗಿದೆ. ಅದನ್ನು ಸರ್ಕಾರದ ಎಲ್ಲ ಪತ್ರ ವ್ಯವಹಾರಗಳಲ್ಲಿ ಬಳಸುವಂತೆ ಕೋರಲಾಗಿದೆ. ಅದರ ಜೊತೆಗೆ ಸುಪ್ರಭಾತದ ಬದಲು ಮನೆಮನೆಗಳಲ್ಲಿ ನಾಡಗೀತೆ, ವಿಶೇಷ ರಂಗೋಲಿ, ಮನೆಮನೆಗಳಲ್ಲಿ ಕನ್ನಡ ಜ್ಯೋತಿ, ಗಾಳಿಪಟ ಉತ್ಸವ, ವೈಭವದ ಕರ್ನಾಟಕ ಪಾರಂಪರಿಕ ರಥಯಾತ್ರೆ, ಜನಪದ ಕಲಾವೈಭವ, ದೇಸಿಕ್ರೀಡೆಗಳ ಸೊಗಡು, ಕನ್ನಡ ನಾಡಿನ ಶ್ರೇಷ್ಠ ಕವಿಗಳ ಐದು ಕನ್ನಡ ಗೀತೆಗಳ ಗಾಯನ, ಸುವರ್ಣ ಕರ್ನಾಟಕ ಸಂಭ್ರಮದ ಸ್ಮರಣಾರ್ಥ ಕರ್ನಾಟಕ ಪಾಕ್ (ನಂದಿನಿ ವತಿಯಿಂದ ವಿಶೇಷ ಸ್ವೀಟ್), ವಿಶೇಷ ಅಂಚೆ ಚೀಟಿ ಬಿಡುಗಡೆ, ವಿಶೇಷ ನಾಣ್ಯ ಬಿಡುಗಡೆ, ಕರ್ನಾಟಕ ಶಾಶ್ವತ ನಿಧಿ ಮುಂತಾದ ಯೋಜನೆಗಳನ್ನು ರೂಪಿಸಿದ್ದೇವೆ. ಐಟಿ-ಬಿಟಿ ಉದ್ಯೋಗಿಗಳು ಕರ್ನಾಟಕ ಸಂಭ್ರಮದ ಭಾಗವಾಗುವ ಬಗ್ಗೆಯೂ ಯೋಜನೆ ರೂಪಿಸಿದ್ದೇವೆ. ಈ ಕಾರ್ಯಕ್ರಮಗಳು ಈ ವರ್ಷದ ನವೆಂಬರ್ 01 ರಿಂದ 2024ರ ನವೆಂಬರ್ 01ರವರೆಗೆ ಒಂದು ವರ್ಷ ನಡೆಯಲಿದೆ. ಸುರ್ವಣ ಸಂಭ್ರಮದ ಆಚರಣೆಗೆ ಇಲಾಖೆಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

**ದೇಶೀಯ ಸಂಸ್ಕೃತಿಯನ್ನು ಉಳಿಸಲು ಇಲಾಖೆಯಿಂದ ಹಮ್ಮಿಕೊಂಡಿರುವ ಯೋಜನೆಗಳೇನು?**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಅನೇಕ ಅಕಾಡೆಮಿಗಳು ಕಾರ್ಯನಿರ್ವಹಿಸುತ್ತಿವೆ. ವಿಶೇಷವಾಗಿ ಜಾನಪದ ಅಕಾಡೆಮಿ, ಲಲಿತಕಲಾ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿ ಮತ್ತು ಲಂಬಾಣಿ ಸಂಸ್ಕೃತಿ ಭಾಷಾ





Downloaded From:www.kpscvaani.com




ಅಕಾಡೆಮಿ ಮುಂತಾದ ಅಕಾಡೆಮಿಗಳ ಮೂಲಕ ರಚನಾತ್ಮಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುವುದು. ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲತಃ ಕನ್ನಡದ ನೆಲದ ಸಂಸ್ಕೃತಿ ಮತ್ತು ಕಲಾವಿದರ ಪ್ರೋತ್ಸಾಹಕ್ಕಾಗಿಯೇ ರೂಪುಗೊಂಡಿದೆ. ಇಲಾಖೆಯು ಈ ದೃಷ್ಟಿ ಕೋನ ಇರಿಸಿಕೊಂಡೇ ಎಲ್ಲ ಯೋಜನೆಗಳನ್ನೂ ರೂಪಿಸುತ್ತಿದೆ.

**ಆಡಳಿತದಲ್ಲಿ ಕನ್ನಡ ಅನುಷ್ಠಾನ ನೂರಕ್ಕೆ ನೂರು ಆಗಿದೆಯೇ ?**

ಆಡಳಿತದಲ್ಲಿ ಕನ್ನಡ ನೂರಕ್ಕೆ ನೂರರಷ್ಟು ಬಳಕೆಯಾಗಬೇಕು ಎಂಬುದು ನಿರ್ವಿವಾದ. ನಮ್ಮ ಸರ್ಕಾರದ ಆಶಯವೂ ಅದೇ ಆಗಿದೆ. ಆದರೆ ಅದು ಸಂಪೂರ್ಣವಾಗಿ ಆಗಿದೆ ಎಂದು ಹೇಳಲಾರೆ. ಆದರೆ ಆ ನಿಟ್ಟಿನಲ್ಲಿ ನಮ್ಮ ದೃಢ ಹೆಜ್ಜೆಗಳನ್ನು ಇಡಲಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಕನ್ನಡ ಅನುಷ್ಠಾನಕ್ಕೆ ಬೇಕಾದ ಎಲ್ಲಾ ಕ್ರಮಗಳನ್ನು ನಾವು ಖಂಡಿತವಾಗಿಯೂ ಕೈಗೊಳ್ಳುತ್ತೇವೆ. ಮುಖ್ಯವಾಗಿ ಆ ದಿಸೆಯಲ್ಲಿ ಸಮಗ್ರ ಕನ್ನಡ ಅಭಿವೃದ್ಧಿ ವಿದೇಯಕಕ್ಕೆ ಅಗತ್ಯವಾಗಿ ಬೇಕಾಗಿರುವ ನಿಯಮಗಳನ್ನು (ಆಕ್ಟ್) ರೂಪಿಸಲು ಈಗಾಗಲೇ ಹಲವು ಸಭೆ ನಡೆಸಲಾಗಿದೆ. ಅದರ ಜೊತೆಗೆ ಜಾಗೃತದಳ ಸಹ ರಚಿಸಲು ಉದ್ದೇಶಿಸಿದ್ದೇವೆ. ಇದು ಮುಂದಿನ ದಿನಗಳಲ್ಲಿ ಕನ್ನಡ ಭಾಷಾ ಬಳಕೆಯನ್ನು ಕಾನೂನಾತ್ಮಕವಾಗಿ ಬಲಗೊಳಿಸಲು ನೆರವಾಗುತ್ತದೆ.

**ನಿಮ್ಮ ಆಡಳಿತದ ಅವಧಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗಬಹುದೆ ?**

ಖಂಡಿತವಾಗಿಯೂ ಹೌದು. ಈಗಾಗಲೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಬಹುಮಾನವನ್ನು ನೀಡುವ ಯೋಜನೆ ಜಾರಿಯಲ್ಲಿದೆ. ಇದನ್ನು ಮತ್ತಷ್ಟು ವಿಸ್ತರಿಸಲು ಮತ್ತು ಬಲಗೊಳಿಸಲು ಅಗತ್ಯ ಕಾರ್ಯಕ್ರಮ ರೂಪಿಸುವಂತೆ ಸೂಚಿಸಲಾಗಿದೆ.

**ಗಡಿ ಭಾಗದಲ್ಲಿ ಕನ್ನಡ ಭಾಷೆಯ ಉಳಿವಿಗೆ ಇಲಾಖೆಯಿಂದ ಹಮ್ಮಿಕೊಂಡಿರುವ ಯೋಜನೆಗಳೇನು?**

ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಳಿದೆಲ್ಲ ಪ್ರಾಧಿಕಾರಗಳಿಗಿಂತ ಹೆಚ್ಚಿನ ಅನುದಾನ ಒದಗಿಸಲಾಗುತ್ತಿದೆ. ಗಡಿಭಾಗಗಳಲ್ಲಿ ಶಾಲಾ ಅಭಿವೃದ್ಧಿಗೆ ಈ ಪ್ರಾಧಿಕಾರದ ಮೂಲಕ ನೆರವು ನೀಡಲಾಗುತ್ತಿದೆ. ಅಲ್ಲದೆ ಗಡಿಭಾಗದ ಕನ್ನಡಿಗರ ಯಾವುದೇ ಬೇಡಿಕೆ ಇರಲಿ ಅದರ ಬಗ್ಗೆ ನಮ್ಮ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತದೆ.

**ವಿಧಾನಸೌಧ ಬಳಿ ತಾಯಿ ಭುವನೇಶ್ವರಿ ಪ್ರತಿಮೆ ಹಾಗೂ ಮೈಸೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ದೇವರಾಜ ಅರಸು ಅವರ ಪತ್ರಿಮೆಗಳ ವಿನ್ಯಾಸ ಹೇಗಿರುತ್ತದೆ? ಮತ್ತು ಪ್ರತಿಮೆಗಳನ್ನು ಎಂದು ಸ್ಥಾಪಿಸಲಾಗುವುದು ?**

ಸುವರ್ಣ ಸಂಭ್ರಮ ಕಾರ್ಯಕ್ರಮದ ಅಂಗವಾಗಿ ಮುಂದಿನ ನವೆಂಬರ್ 01ರ ಒಳಗೆ ತಾಯಿ ಭುವನೇಶ್ವರಿಯ ಪ್ರತಿಮೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. 25 ಅಡಿ ಎತ್ತರದ ಈ ಪ್ರತಿಮೆ ಕಂಚಿನಿಂದ ನಿರ್ಮಾಣವಾಗುತ್ತದೆ. ಈ ಸಂಬಂಧ ಈಗಾಗಲೇ ಶಿಲ್ಪಿಗಳೊಂದಿಗೆ ಸಮಾಲೋಚನಾ ಸಭೆಗಳನ್ನೂ ನಡೆಸಲಾಗಿದೆ. ಪ್ರತಿಮೆ ಎಲ್ಲಿ ಸ್ಥಾಪಿಸಬೇಕು ಎಂಬ ಬಗ್ಗೆ ಮೂರ್ನಾಲ್ಕು ಸ್ಥಳಗಳನ್ನು ಗುರುತಿಸಲಾಗಿದೆ. ಅಂತಿಮವಾಗಿ ಮುಖ್ಯಮಂತ್ರಿಗಳು ಸೂಚಿಸುವ ಸ್ಥಳದಲ್ಲಿ ಈ ಪ್ರತಿಮೆಯನ್ನು ಸ್ಥಾಪಿಸಲಾಗುವುದು. ಹಾಗೆಯೇ ದೇವರಾಜ ಅರಸು ಅವರ ಪ್ರತಿಮೆಯನ್ನು ಮೈಸೂರು ನಗರದ ಪ್ರಮುಖ ವೃತ್ತದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಸಂಬಂಧವೂ ಸಹ ಸಮಾಲೋಚನಾ ಸಭೆ ನಡೆದಿದೆ.

**ನಮ್ಮ ಸಾಹಿತ್ಯ, ಪರಿಸರ, ಜನಪದ ಕಲೆಗಳನ್ನು ಉಳಿಸಿ ಯುವಪೀಳಿಗೆಯವರಿಗೆ ಪರಿಚಯಿಸಲು ಏನೆಲ್ಲಾ ಕ್ರಮವಹಿಸಲಾಗಿದೆ ?**

ನಮ್ಮ ಯುವ ಪೀಳಿಗೆಗೆ ಸಾಹಿತ್ಯ, ಪರಿಸರ, ಜನಪದ ಕಲೆಗಳನ್ನು ಉಳಿಸಲು ಹಾಗೂ ಸಂಸ್ಕೃತಿಯ ಪರಿಚಯ ಮಾಡಿಸಲು ಇಲಾಖೆಯು ಅನೇಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮುಖ್ಯವಾಗಿ ಇಂದಿನ ಯುವಪೀಳಿಗೆಯು ಹೆಚ್ಚು ಅವಲಂಭಿಸುವ ಸಾಮಾಜಿಕ ಜಾಲತಾಣಗಳ ಮೂಲಕ ಇದರ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುತ್ತಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಇರುವ ಕಣಜ ಜಾಲತಾಣದಲ್ಲಿ ಇವುಗಳ ಬಗ್ಗೆ ಸಮಗ್ರ ಮಾಹಿತಿ ಅಡಕವಾಗಿದೆ. ಇದಲ್ಲದೆ ಎಲ್ಲ ಅಕಾಡೆಮಿ, ಪ್ರಾಧಿಕಾರಗಳು ತಮ್ಮ ವೆಬ್‌ಸೈಟ್‌ಗಳ ಮೂಲಕ ಯುವಜನರನ್ನು ಸೆಳೆಯಲು ಪ್ರಯತ್ನಿಸುತ್ತಿದೆ. ಇನ್ನು ಮುಂದೆ ನಿಯಮಿತವಾಗಿ ಸ್ಥಳೀಯ ಯುವ ಪೀಳಿಗೆಯನ್ನು ಒಳಗೊಂಡು ಕಾರ್ಯಕ್ರಮಗಳನ್ನು ರೂಪಿಸಲು ಸೂಚಿಸಿದ್ದೇವೆ. ಹೊಸ ಪೀಳಿಗೆಯಲ್ಲಿ ಈ ಕಲಾ ಜಾಗೃತಿ ಮೂಡಿಸಲು ವಿವಿಧ ಅಕಾಡೆಮಿಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತರಿಗೆ ಕಲಾ ಶಿಬಿರಗಳು ಹಾಗೂ ಕಾರ್ಯಾಗಾರಗಳನ್ನು ನಡೆಸಲು ಸೂಚಿಸಿದ್ದೇವೆ.

**ಒಟ್ಟಾರೆ ಈ ಇಲಾಖೆಯ ಬಗ್ಗೆ ನಿಮ್ಮ ಅನಿಸಿಕೆ ಏನು?**

ಇದು ನಿಜವಾಗಿಯೂ ಅತ್ಯಂತ ಮಹತ್ವದ ಇಲಾಖೆ. ಬೇರೆಲ್ಲ ಇಲಾಖೆಗಳಿಗಿಂತ ಭಿನ್ನವಾದದ್ದು. ಇಲ್ಲಿ ಮಾಡುವ ಕೆಲಸ ನಮಗೆ ಆತ್ಮ ತೃಪ್ತಿ ತಂದುಕೊಡುತ್ತದೆ. ಕನ್ನಡ ನೆಲ-ಜಲ-ಭಾಷೆ ಮತ್ತು ಸಂಸ್ಕೃತಿಗೆ ನಮ್ಮಿಂದಲೂ ಒಂದು ಸಣ್ಣ ಅಳಿಲು ಸೇವೆ ಈ ಇಲಾಖೆಯ ಮೂಲಕ ಸಲ್ಲಿಸಲು ಸಾಧ್ಯವಾಗುತ್ತದೆ ಎಂಬ ನಂಬಿಕೆ ನನ್ನದು. ಹಾಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ವಹಣೆ ನನಗೆ ನಿಜಕ್ಕೂ ಸಂತೋಷ ಕೊಟ್ಟಿದೆ. ■



Downloaded From:www.kpscvaani.com



## ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಯಲ್ಲಿ
# ಹಲವು ಹೋರಾಟಗಾರರ ಪಾತ್ರ







**ನಮ್ಮ ನಾಡಿನ ಭಾಷೆ ಮತ್ತು ಸಂಸ್ಕೃತಿಯ ಹಿರಿಮೆಯನ್ನು ಉಳಿಸಿ ಬೆಳೆಸುವಲ್ಲಿ ಹಲವು ಹೋರಾಟಗಾರರು ಪ್ರಮುಖ ಪಾತ್ರವಹಿಸಿದ್ದಾರೆ.**

ಉಷಾ ಎಸ್

**ಕ**ನ್ನಡ ಭಾಷೆ ನಮ್ಮ ಮಾತೃ ಭಾಷೆ. ಇದರ ಸಂಸ್ಕೃತಿಗೆ ಸಾವಿರಾರು ವರುಷಗಳ ಇತಿಹಾಸವಿದೆ. ಪಂಪ, ರನ್ನ ಇವರುಗಳಿಂದ ಮೊದಲಾಗಿ ಅನೇಕ ಕವಿ ಪುಂಗವರು ಈ ಭಾಷೆಯ ಹಿರಿಮೆಯನ್ನು ಪದಗಳ ಮೂಲಕ ತೆರೆದಿಟ್ಟಿದ್ದಾರೆ. ಇದು ಆಯಾ ಕಾಲದ ಸಂಸ್ಕೃತಿಯನ್ನು ಕೂಡ ಹೇಳುತ್ತದೆ. ಇವರುಗಳೇ ಅಲ್ಲದೇ, ನಮ್ಮ ಶರಣರ ವಚನಗಳು, ದಾಸರ ಪದಗಳು, ಜನಪದ ಹಾಡುಗಳು ಇವೆಲ್ಲವು ಭಾಷೆಯನ್ನು ಬೆಳೆಸುವುದೇ ಅಲ್ಲದೇ ನಮ್ಮ ನಾಡಿನ ಸಂಸ್ಕೃತಿಯ ಹಿರಿಮೆಯನ್ನು ಮುಂದಿನ ಜನಾಂಗಕ್ಕೆ ಎತ್ತಿ ತೋರಿಸುತ್ತದೆ. ಈ ರೀತಿ ಭಾಷೆ ಮತ್ತು ಸಾಮಾಜಿಕ ಅನುಬಂಧಗಳ ಬೆಳವಣಿಗೆಯಲ್ಲಿ ಹಲವಾರು ಮಹಿಳೆಯರ ಪಾತ್ರವೂ ಹಿರಿದಾಗಿದೆ.

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂದು ಹೇಳಿದವರು ಹುಯಿಲಗೋಳ ನಾರಾಯಣರಾಯರು. ನಮ್ಮ ಭಾಷೆ ಮತ್ತು ನಮ್ಮ ಜನಗಳ ಆಚಾರ ವಿಚಾರ ಅಂದಿನ ಮೈಸೂರು ರಾಜ್ಯದ ಸುತ್ತಮುತ್ತಲಲ್ಲಿ ಹಂಚಿ ಹೋಗಿದ್ದಿತು. 1956 ರಲ್ಲಿ ಭಾಷಾವರು ಪ್ರಾಂತ ರಚನೆಯಾದ ನಂತರ ಮುಂಬೈ, ಹೈದರಾಬಾದ್ ಕರ್ನಾಟಕ ಮತ್ತು ಕೇರಳದ ಗಡಿ ಭಾಗದ ಹಲವು ಪ್ರಾಂತಗಳು ಒಟ್ಟಾಗಿ ಕರ್ನಾಟಕ ರಾಜ್ಯವಾಯಿತು. ಇದೊಂದು ಹಲವು ಹೋರಾಟಗಾರರ ಸಾಧನೆ.

'ನಾ ಆಡುವ ನುಡಿಯೇ ಕನ್ನಡ ನುಡಿ' ಎಂಬಂತೆ ಕನ್ನಡ ಮಾತನಾಡುವವರು ಮತ್ತು ಅವರ ಸಾಮಾಜಿಕ ಜೀವನವನ್ನು ಒಂದಾಗಿ ನೋಡುವ ಪ್ರಯತ್ನದಲ್ಲಿ ಇದು ಮೊದಲ ಹೆಜ್ಜೆ. ಅಸಂಖ್ಯ ಹೋರಾಟಗಾರರ ಪರಿಶ್ರಮಕ್ಕೆ ಸಿಕ್ಕ ಬಹುಮಾನ ಇದು. ಕರ್ನಾಟಕ ಇದೆ ಎಂದವರು ಒಬ್ಬ ಆಂಗ್ಲ ಪಂಡಿತ ಜೆ.ಎಫ್.ಫ್ಲೀಟ್. ಇವರ ಗ್ರಂಥಗಳನ್ನು ಓದಿ ಸ್ಫೂರ್ತಿ ಪಡೆದವರು ಆಲೂರು ವೆಂಕಟರಾಯರು. ಆಲೂರು ವೆಂಕಟರಾಯರನ್ನು ನಮ್ಮ ಕನ್ನಡ ಚಳುವಳಿಯ ಪಿತಾಮಹ ಎನ್ನಬಹುದಾಗಿದೆ. ಇವರ ಜೊತೆಗೆ ಕೈಗೂಡಿಸಿ ಅಹರ್ನಿಶಿ ಹೋರಾಟ ಮಾಡಿದವರು ಅಸಂಖ್ಯ. ಒಂದು ರೀತಿಯಲ್ಲಿ ಹೇಳ ಬೇಕೆಂದರೆ ಈ ಪ್ರತಿಯೊಬ್ಬ ವ್ಯಕ್ತಿಯೂ ಅಥವಾ ಕಥೆ, ಕವನ, ಕಾದಂಬರಿ ಬರೆಯುವವರೆಲ್ಲರೂ ಒಂದೊಂದು ರೀತಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಂಚಾಲಕರೇ ಎನ್ನಬಹುದು.


Downloaded From:www.kpscvaani.com



ಧಾರವಾಡದ ಬೇಂದ್ರೆಯವರಿರಲಿ, ಕುಪ್ಪಳ್ಳಿಯ ಪುಟ್ಟಪ್ಪನವರಿರಲಿ, ದಕ್ಷಿಣ ಕನ್ನಡದ ಶಿವರಾಮ ಕಾರಂತ, ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು, ಕೆ.ಎಸ್. ನರಸಿಂಹ ಸ್ವಾಮಿ ಅಥವಾ ಕೆ.ಎಸ್. ನಿಸಾರ್ ಅಹಮದ್, ಬೆಳೆಗೆರೆ ಜಾನಕಮ್ಮ, ಗಿರಿಬಾಲೆ, ಅನುಪಮ ನಿರಂಜನ, ತ್ರಿವೇಣಿ ಇವರೆಲ್ಲ ಮಾಡಿದ್ದು ಕನ್ನಡ ಭಾಷೆಯ ಸೊಗಡು ಮತ್ತದರ ಕಂಪನ್ನು ಜನಗಳಿಗೆ ಸುಲಭ ರೀತಿಯಲ್ಲಿ ಪರಿಚಯಿಸಿ ಬೆಳೆಸುತ್ತ ಹೋದವರು. ಜೋಗದ ಸಿರಿ ಬೆಳಕಿನಲ್ಲಿ.........., ಸಹ್ಯಾದ್ರಿಯ ಮಡಿಲಲ್ಲಿ ಕನ್ನಡ ಭಾಷೆ ಮತ್ತು ನಾಡಿನ ಪ್ರಕೃತಿಯನ್ನು ಪರಿಚಯಿಸಿ ನಿತ್ಯೋತ್ಸವ ಮಾಡಿದವರು ಇಂತಹವರೇ. ಅವರ ರೀತಿ ಬೇರೆಯಾದರೂ, ಗುರಿ ಒಂದೇ. ಅದು ಭಾಷೆಯ ಬೆಳವಣಿಗೆ ಮತ್ತು ನಮ್ಮತನದ ಪರಿಚಯ. ಈ ನಮ್ಮ ಭಾಷೆಯ ಬೆಳವಣಿಗೆಗೆ ಅಂದು ಹಲವು ಯುರೋಪಿಯನ್ನರೂ ಕಾರಣರಾಗಿದ್ದಾರೆ. ಇಂದಿನ ವಿವಿಧ ಕನ್ನಡ-ಕನ್ನಡ ನಿಘಂಟುಗಳಿಗೆ ಮಾತೃ ಸಮಾನ ಜರ್ಮನಿಯ ರೆವರೆಂಡ್ ಫರ್ಡಿನಾಂಡ್ ಕಿಟ್ಟೆಲ್‌ರವರ ನಿಘಂಟು. ಅದೇ ರೀತಿ ಹರ್ಮನ್ ಮೋಗ್ಲಿಂಗ್‌ರವರು ಬೆಳೆಸಿದ ಕನ್ನಡ ದಿನ ಪತ್ರಿಕೆ. ಇನ್ನು ಬಿ.ಎಲ್.ರೈಸ್ ರವರಂತೂ ಕನ್ನಡದ ಶಾಸನಗಳ ಆಗರವನ್ನೇ ಭೇದಿಸಿ ಅದರಲ್ಲಿ ದಾಖಲಾಗಿದ್ದ ನಮ್ಮ ವಿವಿಧ ಸಂಸ್ಕೃತಿಯ ಪರಿಚಯ ಇಂದಿನವರಿಗೆ ದೊರೆಯುವಂತೆ ಮಾಡಿದರು.

ನಮ್ಮ ಭಾಷೆಗೆ, ನಮ್ಮ ಸಂಸ್ಕೃತಿಗೆ ಇರುವ ಸೊಗಡನ್ನು ಕನ್ನಡದಲ್ಲೇ ಹೇಳುತ್ತಾ, ಇವರೆಲ್ಲ ಒಬ್ಬೊಬ್ಬ ವ್ಯಕ್ತಿಯಾದರೂ ಅವರೆಲ್ಲ ಒಂದೊಂದು ಸಾಂಸ್ಥಿಕ ಸಂಘಟನೆ ಎನ್ನುವಂತೆ ಕನ್ನಡ ತನವನ್ನು ಉಳಿಸಿ ಬೆಳೆಸಿದ್ದಾರೆ.

ನಮ್ಮ ಭಾಷೆಯ ಸಿರಿತನವನ್ನು ಒಂದು ವ್ಯವಸ್ಥಿತವಾಗಿ ಬೆಳೆಸಲು ಅಂದಿನ ಮೈಸೂರು ಅರಸರು ಹುಟ್ಟು ಹಾಕಿದ್ದು ಕನ್ನಡ ಸಾಹಿತ್ಯ ಪರಿಷತ್. ಇದರ ಚಟುವಟಿಕೆಗೆ ನೂರು ವರ್ಷಕ್ಕೂ ಮಿಗಿಲಾದ ಇತಿಹಾಸವಿದೆ. ಕನ್ನಡ ಭಾಷೆಯ ಸರ್ವಾಂಗೀಣ ಬೆಳವಣಿಗೆಗೆ ಇದು ಬೆನ್ನೆಲುಬಾಗಿದೆ. ಪ್ರತಿ ವರ್ಷ ಇವರು ಹಮ್ಮಿಕೊಳ್ಳುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಭಾಷೆಯ ಹಲವು ಪ್ರಕಾರಗಳನ್ನು ಪರಿಚಯಿಸುವ ವಿಚಾರ ಸಂಕಿರಣಗಳು ನಡೆಯುತ್ತದೆ. ಇಲ್ಲಿ ನಮ್ಮ ಭಾಷೆಯ ಬೆಳವಣಿಗೆ, ಅದರಲ್ಲಿನ ಮಹಿಳಾ ಸಾಹಿತ್ಯ, ಶಿಶು ಸಾಹಿತ್ಯ, ವೈದ್ಯ ಮತ್ತು ವಿಜ್ಞಾನ ಸಾಹಿತ್ಯ ಎಲ್ಲದರ ವಿಮರ್ಶೆ ಮತ್ತು ಅವುಗಳು ಕಾಲಕಾಲಕ್ಕೆ ಬೆಳೆಯಲು ಬೇಕಾದ ಬದಲಾವಣೆಗಳನ್ನೂ ಸೂಚಿಸುತ್ತದೆ. ಇದರದೇ ಅಂಗ ಸಂಸ್ಥೆಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕೆಲಸ ಮಾಡುತ್ತಿದೆ. ಇದೇ ರೀತಿ ಕೆಲಸ ಮಾಡುತ್ತಿರುವುದು ಕೆಲವು ವರ್ಷಗಳ ಹಿಂದೆ ಸಜ್ಜುಗೊಂಡ ಹಂಪಿ ಕನ್ನಡ ವಿಶ್ವ ವಿದ್ಯಾಲಯ. ಇಲ್ಲಿ ಭಾಷಾ ಬೆಳವಣಿಗೆಗೆ ಅನೇಕ ಕಾರ್ಯಕ್ರಮಗಳಿವೆ. ಇದೇ ದಾರಿಯಲ್ಲಿನ ಇನ್ನೊಂದು ಸಂಸ್ಥೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ. ಜೊತೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ.

ಸರಿ ಸುಮಾರು 1960-61 ರಲ್ಲಿ ಕೇಂದ್ರ ಸರಕಾರದ ಹಿಂದಿ ಭಾಷೆಯ ಕಡ್ಡಾಯ ಪ್ರತಿಭಟಿಸಿ ರಾಜ್ಯಾದ್ಯಂತ ವಿದ್ಯಾರ್ಥಿ ಸಂಘಟನೆಗಳು ಶಾಂತಿಯುತ ಚಳುವಳಿಯನ್ನು ಧೀರ್ಘಕಾಲ ನಡೆಸಿದ ಪರಿಣಾಮ ಅದಕ್ಕೆ ತಾತ್ಕಾಲಿಕ ತಡೆ ಸಿಗುವಂತಾಯಿತು. ಮುಂದೆ ಎಂಭತ್ತರ ದಶಕದಲ್ಲಿ ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ಕುರಿತಂತೆ ದೊಡ್ಡ ಆಂದೋಲನವೇ ನಡೆಯಿತು. ಅದರ ಸಾಧಕ ಭಾಧಕಗಳನ್ನು ವಿಮರ್ಶಿಸಲು ಸರಕಾರ ಹಿರಿಯ ಸಾಹಿತಿ ವಿನಾಯಕ ಕೃಷ್ಣ ಗೋಕಾಕ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿತು. ಅದರ ಕನ್ನಡ ಪರ ತೀರ್ಪಿನ ಅನುಷ್ಠಾನಕ್ಕೆ ಒಂದು ದೊಡ್ಡ ಚಳುವಳಿಯೇ ನಡೆಯಿತು. ಇದಕ್ಕೆ ರಾಜ್ಯದ ಪ್ರತಿಯೊಬ್ಬ ನಾಗರಿಕನೂ ಸಹ ಭಾಗಿಯಾಗಿದ್ದ. ಅದಲ್ಲದೇ, ನಾಡಿನ ವಿವಿಧ ರಂಗಗಳ ಪ್ರಮುಖರು ಇದರಲ್ಲಿ ಸಕ್ರಿಯವಾಗಿ ಸ್ಪಂದಿಸಿದರು. ಇದು "ಗೋಕಾಕ್ ಚಳುವಳಿ" ಎಂದೇ ಜನಜನಿತ. ಕನ್ನಡದ ಮೇರು ನಟ ಡಾ. ರಾಜಕುಮಾರ್ ಮೊದಲಾಗಿ ಇಡೀ ಚಿತ್ರರಂಗವೇ ಅಲ್ಲದೇ ನಾಡಿನ ಸಾಹಿತಿಗಳು, ಶಿಕ್ಷಣ ತಜ್ಞರು ಎಲ್ಲರೂ ವಿ. ಕೃ. ಗೋಕಾಕ್ ವರದಿ ಜಾರಿಗಾಗಿ ಕೈ ಜೋಡಿಸಿದ್ದರು. ಮುಂದೆ ಕನ್ನಡಿಗರಿಗೆ ಇಲ್ಲಿಯೇ ಉದ್ಯೋಗಕ್ಕೆ ಆದ್ಯತೆ ಕೊಡುವ ವಿಚಾರ ಬಂದಾಗ ರಚಿತವಾದ ಡಾ. ಸರೋಜಿನಿ ಮಹಿಷಿ ವರದಿ ಕೂಡ ಜನ ಬೆಂಬಲಗಳಿಸಿ ಸರಕಾರದ ಉದ್ಯೋಗ ನೀತಿಯಲ್ಲಿ ಹಲವು ಬದಲಾವಣೆಗಳನ್ನು ಕಂಡಿದೆ. ಅದಲ್ಲದೇ, ಸರಕಾರಿ ಇಲಾಖೆಗಳಲ್ಲಿ ಕನ್ನಡ ಬಳಕೆ ಕೂಡ ಸಾಕಷ್ಟು ಆಗುತ್ತಿದೆ.

ನಮ್ಮಲ್ಲಿ ಕನ್ನಡ ಪರ ಹೋರಾಟವೆಂದರೆ ಮೊದಲು ನೆನಪಿಗೆ ಬರುವುದು ವಾಟಾಳ್ ನಾಗರಾಜ ರವರು. ಇವರು ರಾಜ್ಯದ ಯಾವುದೇ ಭಾಗದಲ್ಲಾದರೂ ಸರಿಯೇ ಕನ್ನಡ ಪರ ಸಂಘಟನೆಗೆ ಮುಂಚೂಣಿಯಲ್ಲಿರುತ್ತಿದ್ದರು. ಅನೇಕ ಬಾರಿ ಇಲ್ಲಿನ ಕನ್ನಡಿಗರ





Downloaded From:www.kpscvaani.com



ಡಾ.ರಾಜ್‌ಕುಮಾರ್ ಮತ್ತು ಕವಿ ಚನ್ನವೀರ ಕಣವಿ ಅವರು ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿರುವುದು

ಸಮಸ್ಯೆಗಳನ್ನು ಕೇಂದ್ರಕ್ಕೆ ಒತ್ತಿ ಹೇಳುವ ಪ್ರಯತ್ನದಲ್ಲಿ ಇವರು ದೆಹಲಿಯಲ್ಲೇ ಪ್ರತಿಭಟನೆ ನಡೆಸಿದ ಉದಾಹರಣೆಗಳಿವೆ. ಇವರ ಈ ತೆರನ ಯಾವುದೇ ಚಳುವಳಿ ಇದ್ದರೂ ಅದಕ್ಕೆ ಸಾರ್ವಜನಿಕರ ಬೆಂಬಲ ಇದ್ದೇ ಇರುತ್ತಿತ್ತು. ಮುಂದೆ ಇದೇ ರೀತಿಯಲ್ಲಿ ಹಲವಾರು ಕನ್ನಡ ಪರ ಸಂಘಟನೆಗಳು ಬಹು ದೊಡ್ಡದಾಗಿ ಬೆಳೆದು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪರ ಜಾಗೃತಿ ಮೂಡಿಸುತ್ತಿದೆ. ಅದಲ್ಲದೇ, ಇಲ್ಲಿ ನೆಲೆಸಿರುವ ಶೈಕ್ಷಣಿಕವಾಗಿ ಮುಂದಿರುವ ಹೊರ ರಾಜ್ಯದ ನಾಗರಿಕರಿಗೆ ಕನ್ನಡ ಭಾಷೆ ಕಲಿಸುವ ಪ್ರಯತ್ನಗಳೂ ಕೆಲವು ಸಂಘಟನೆಗಳಿಂದ ಆಗುತ್ತಿದೆ. ಈ ರೀತಿಯ ಸಂಘಟನೆಗಳ ಅವಿರತ ಪ್ರಯತ್ನದಿಂದಾಗಿ ನಮ್ಮ ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಸಾರ್ವಜನಿಕ ಪ್ರದೇಶಗಳಲ್ಲಿನ ವಾಣಿಜ್ಯ ಸಂಸ್ಥೆಗಳ ನಾಮ ಫಲಕ ಕನ್ನಡದಲ್ಲೇ ರಾರಾಜಿಸುತ್ತಿದೆ. ಆದರೂ ಸರಕಾರಿ ಬ್ಯಾಂಕ್‌ಗಳಲ್ಲಿನ ಹಲವು ಅರ್ಜಿಗಳಲ್ಲಿ ಕನ್ನಡ ಸ್ವಲ್ಪ ಹಿಂದೆ ಇರುವಂತೆ ಕಾಣುತ್ತದೆ.


ಹೀಗೆ, ಅಸಂಖ್ಯ ಮಂದಿಯ ಜೊತೆಗೆ ಹಲವಾರು ಸಂಘಟನೆಗಳು ಮತ್ತು ಸಂಸ್ಥೆಗಳು ಕನ್ನಡದ ಅವಶ್ಯಕತೆ ಮತ್ತು ಹಿರಿಮೆಯನ್ನು ಸದಾ ಜಾಗೃತವಾಗಿಡುವುದಲ್ಲದೇ ಈ ನಾಡಿನ ಅಪಾರ ಸಂಸ್ಕೃತಿಯನ್ನು ಎಲ್ಲರೂ ಸದಾ ಕಾಲ ಮನದಟ್ಟು ಮಾಡಿಕೊಳ್ಳುವಂತೆ ಮಾಡುತ್ತಿದೆ, ಇದು ಇನ್ನಷ್ಟು ಬೆಳೆಯಲು ಇನ್ನೂ ಹೆಚ್ಚಿನ ಸಾಂಸ್ಥಿಕ ಒತ್ತಾಸೆಯ ಅಗತ್ಯವಿದೆ. ಇದಕ್ಕೆ ಕನ್ನಡ ಸಾಹಿತ್ಯ ಪರಿಷತ್, ಹಂಪಿ ವಿಶ್ವ ವಿದ್ಯಾಲಯ, ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇನ್ನಷ್ಟು ಕೆಲಸ ಮಾಡುವ ಅವಶ್ಯಕತೆ ಇದೆ ಅನಿಸುತ್ತದೆ. ಸಧ್ಯದಲ್ಲಿ ಅವುಗಳು ಒಂದು ಪರಿಧಿಯೊಳಗೆ ಮಾತ್ರ ಕೆಲಸ ಮಾಡುತ್ತಿವೆ. ನಮ್ಮಲ್ಲಿನ ಅನೇಕ ಕನ್ನಡ ಸಂಘಟನೆಗಳ ಸಮಾಜ ಮುಖೀ ಗುರಿಯನ್ನು ಬಳಸಿಕೊಂಡು ಕೆಲಸ ಮಾಡಬಹುದಾಗಿದೆ. ಏಕೆಂದರೆ, ಈ ಸಂಘಟನೆಗಳಲ್ಲಿ ಹೆಚ್ಚಾಗಿ ಯುವ ಜನತೆಯ ಬೆಂಬಲ ಇರುತ್ತದೆ.


ಈ ದೊಡ್ಡ ಸಂಸ್ಥೆಗಳು ರಾಜ್ಯಾದ್ಯಂತ ಶಾಲಾ ಮಟ್ಟದಲ್ಲಿ ಮಕ್ಕಳ ಕನ್ನಡ ಭಾಷಾ ಕಲಿಕೆಗೆ ಇನ್ನಷ್ಟು ಕಾರ್ಯಕ್ರಮಗಳನ್ನು ಅಳವಡಿಸಬಹುದು. ಉದಾಹರಣೆಗೆ, ಪ್ರತಿ ಶಾಲೆಯಲ್ಲೂ ಪಠ್ಯೇತರ ಚಟುವಟಿಕೆ ಎಂಬಂತೆ ವಾರದಲ್ಲಿ ಎರಡು ದಿನವಾದರೂ ಮಕ್ಕಳಿಂದ ಕನ್ನಡದ ಉತ್ತಮ ಕಥೆಗಳು, ಪ್ರಮುಖ ಸಾಮಾಜಿಕ ವಿಷಯ ಕುರಿತ ಹಿರಿಯ ಬರಹಗಾರರ ಬರಹಗಳನ್ನು ಓದಿಸುವುದೇ ಅಲ್ಲದೇ ನಮ್ಮ ನಾಡಿನ ವಿವಿಧ ಬಾಗಗಳ ಸಂಸ್ಕೃತಿಯನ್ನು ಮನದಟ್ಟು ಮಾಡಲು ಅವರಿಗೆ ಸೂಕ್ತ ವಿಷಯಗಳನ್ನು ಕೊಟ್ಟು ಪ್ರಬಂಧ ರಚನೆ ಇಂತಹವುಗಳನ್ನು ಮಾಡಬಹುದಾಗಿದೆ. ಅವುಗಳನ್ನು ಶಾಲಾ ಪತ್ರಿಕೆಗಳಲ್ಲಿ ಪ್ರಕಟಿಸಿ ಅವರಿಗೆ ಉತ್ತೇಜನ ನೀಡಬಹುದಾಗಿದೆ. ಈ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಕನ್ನಡ ಸಂಘಟನೆಗಳ ಉತ್ಸಾಹಿ ಯುವ ಜನತೆಯನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದಾಗಿದೆ.


ಇಲ್ಲಿ ಒಂದು ವಿಷಯ ಹೇಳಬೇಕು. ಒಂದೆರಡು ತಿಂಗಳ ಹಿಂದೆ ಪತ್ರಿಕೆಗಳಲ್ಲಿ ಓದಿದಂತೆ ಕಳೆದ ಒಂದೂವರೆ ವರ್ಷಕ್ಕೂ ಮಿಗಿಲಾಗಿ ಶಾಲೆಗಳು ತೆರೆಯದಿರುವುದು ಮತ್ತು ಆನ್ ಲೈನ್ ತರಗತಿಗಳ ಮೂಲಕ ಮೊಬೈಲ್ ಬಳಕೆ ಮಕ್ಕಳ ಬರವಣಿಗೆಯನ್ನೇ ಕುಂಠಿತ ಗೊಳಿಸಿದೆಯಂತೆ. ಇದು ಮತ್ತೆ ಮಕ್ಕಳು ಬಾಹ್ಯ ತರಗತಿಗಳಿಗೆ ಬಂದಾಗಿನಿಂದ ತಿಳಿಯುತ್ತಿದೆ. ಇಲ್ಲಿ ಮತ್ತೆ ಶಿಕ್ಷಕರಿಗೇ ಹೆಚ್ಚಿನ ಒತ್ತಡ ಎಂದು ಬೇರೆ ಹೇಳ ಬೇಕಿಲ್ಲ. ಅದೇ ರೀತಿ ಪತ್ರಿಕಾ ವರದಿ ಹೇಳುವಂತೆ ಮಕ್ಕಳಿಗೆ ಬರವಣಿಗೆ ಕಲಿಸಲು ಈಗಾಗಲೇ ಸಣ್ಣ ರೀತಿಯಲ್ಲಿ ಟ್ಯುಟೋರಿಯಲ್‌ಗಳು ಆರಂಭವಾಗಿವೆ. ಈ ಪ್ರಯತ್ನ ಒಳ್ಳೆಯದೇ ಅನಿಸಿದರೂ ತಕ್ಷಣದಲ್ಲಿ ಅದಕ್ಕೆ ತಗುಲುವ ವೆಚ್ಚ ಖರ್ಚು ಭರಿಸುವ ಹೊರೆ ಪಾಲಕರಿಗೇ ತಾನೇ ? ಕೆಲವು ವರ್ಷಗಳ ಹಿಂದೆ ಒಬ್ಬ ಶಿಕ್ಷಕರು ಅನೇಕ ಸರಕಾರಿ ಶಾಲೆಗಳಿಗೆ ತೆರಳಿ ಒಂದು ನಿಯಮಿತ ಕಾರ್ಯ ಪಟ್ಟಿಯನ್ನು ಹಾಕಿಕೊಂಡು ಮಕ್ಕಳು ಕನ್ನಡದ ಬರವಣಿಗೆಯನ್ನು ಕಲಿತು ಬೆಳೆಯಲು ತರಗತಿಗಳನ್ನು ನಡಿಸಿ ಕೊಡುತ್ತಿದ್ದರು. ಇವರಂತವರ ಪ್ರಯತ್ನವಿದ್ದರೆ ಸಾಕು ನಮ್ಮ ಭಾಷಾ ಬೆಳವಣಿಗೆ ಸುಲಲಿತವಾಗಿ ಬೆಳೆಯುತ್ತದೆ. ■



Downloaded From:www.kpscvaani.com






# ಮಕ್ಕಳಿಗಾಗಿ ಕನ್ನಡ ಸಾಹಿತ್ಯ

**ಮಕ್ಕಳ ಜ್ಞಾನ ಸಂಪಾದನೆಗೆ ಪೂರಕವಾಗಿರುವ ಕನ್ನಡ ಸಾಹಿತ್ಯ ಬರಹಗಳನ್ನು ನೀಡಿರುವ ಬರಹಗಾರರನ್ನು ಈ ಲೇಖನವು ಸ್ಮರಿಸುತ್ತದೆ.**

ಕೆ.ಎಸ್. ಸೋಮೇಶ್ವರ

ದೇಶದೆಲ್ಲೆಡೆ ನವೆಂಬರ್ 14 ಒಂದು ಸ್ಮರಣೀಯ ದಿನ. ಆ ದಿನ ನಮ್ಮ ಮೊದಲ ಪ್ರಧಾನ ಮಂತ್ರಿಯಾಗಿದ್ದ ಜವಹರಲಾಲ್ ನೆಹರು ರವರ ಜನ್ಮದಿನ ಮತ್ತು ಅದನ್ನು ಅವರಿಗೆ ಅಪ್ಯಾಯಮಾನರಾಗಿದ್ದ 'ಮಕ್ಕಳ ದಿನಾಚರಣೆ' ಆಚರಿಸುವ ಮೂಲಕ ವ್ಯಕ್ತಪಡಿಸುತ್ತೇವೆ. ಈ ಸಮಯದಲ್ಲಿ ಮಕ್ಕಳಿಗಾಗಿ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ ಕನ್ನಡ ಬರಹಗಾರರನ್ನು ತಿಳಿಯುವ ಪ್ರಯತ್ನ ಇಲ್ಲಿದ್ದು, ಅವರ ಬರಹಗಳು ಮಕ್ಕಳ ಓದುವ ಹವ್ಯಾಸ ಮತ್ತು ಅದರಿಂದ ಜ್ಞಾನ ಸಂಪಾದನೆಗೆ ಪೂರಕವಾಗಿರುತ್ತವೆ.

ಮಕ್ಕಳಿಗಾಗಿ ಸಾಹಿತ್ಯವೆಂದರೆ ಅದು ಅವರ ವಯೋಮಾನಕ್ಕೆ ತಕ್ಕುದಾಗಿ ಅವರಿಗೆ ಕಥೆ, ಕವನ, ನಾಟಕಗಳ ಮೂಲಕ ಜ್ಞಾನ ಬೆಳೆಸುವುದೇ ಅಲ್ಲದೇ ಅವರುಗಳ ಕಲ್ಪನೆ ಗರಿಗೆದರುವಂತಿರಬೇಕು. ಹಲವಾರು ಮಕ್ಕಳ ಸಾಹಿತ್ಯದಲ್ಲಿ ನಮ್ಮ ಪರಿಸರದಲ್ಲಿ ಕಾಣುವ ಪ್ರಾಣಿ, ಪಕ್ಷಿ, ಗಿಡ ಮರಗಳು ಮತ್ತಿತರ ಅವರ ಸುತ್ತಲಿನ ನಿಸರ್ಗವನ್ನು ಕುರಿತದ್ದೇ ಹೆಚ್ಚಾಗಿರುತ್ತದೆ. ಇದರಲ್ಲಿ ಮೊದಲಿಗೆ ಬಂದವುಗಳಲ್ಲಿ ಕಥಾರೂಪಕವಾಗಿರುವುದೇ ಅಲ್ಲದೇ ಆಡು ಭಾಷೆ ಮತ್ತು ಪ್ರಾಸಕ್ಕೆ ಒತ್ತು ಕೊಡುವಂತಿರುವುದೇ ಅಗಿರುತ್ತಿತ್ತು.

ಸುಮಾರು 13 ನೇ ಶತಮಾನದಲ್ಲಿ ಜರ್ಮನಿಯ ಕಥೆಗಾರರು ರಾಜ, ರಾಣಿ, ವಿದೂಷಕ, ರಾಕ್ಷಸ ಅಲ್ಲದೇ ಅನೇಕ ವೀರರ ಬಗೆಗಿನ ಕಥೆಗಳನ್ನು ಮಕ್ಕಳಿಗೆ ಹೇಳುತ್ತಾ, ಅವರುಗಳ ಕಲ್ಪನಾ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನ ಮಾಡಿದ್ದರು. ನಮ್ಮಲ್ಲಿನ ಪಂಚತಂತ್ರದ ಕಥೆಗಳು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಇದರಲ್ಲಿ ಪ್ರಮುಖವಾಗಿ ಕಥೆಯನ್ನು ಹೇಳುವುದು ಮಕ್ಕಳಿಗೆ ನಿಸರ್ಗದಲ್ಲಿ ನಿತ್ಯ ಕಾಣ ಬರುವ ಕಾಡು, ಪ್ರಾಣಿ, ಪಕ್ಷಿಗಳು. ಇದು ಮಕ್ಕಳಿಗೆ ತಮ್ಮ ಪರಿಸರ ಪ್ರಕೃತಿಗಳೊಂದಿಗೆ ಬೆಸೆಯುವ ಸಂವಹನದಲ್ಲಿ ಸಹಾಯವಾಗುತ್ತದೆ.

ಇದೇ ರೀತಿಯಲ್ಲಿ ಲ್ಯಾಟಿನ್ ಭಾಷೆಯಲ್ಲಿ ರಚಿತವಾದ ಅನೇಕ ಕಥಾ ರೂಪಕಗಳಲ್ಲಿನ ಕೇಂದ್ರ ಬಿಂದು ಮಕ್ಕಳೇ ಆಗಿದ್ದಾರೆ. ಇದು ಬ್ರಿಟನ್ ನಲ್ಲಿ ಸಾಕಷ್ಟು ಬದಲಾವಣೆಗಳೊಂದಿಗೆ ಪ್ರಕಟವಾಗ ತೊಡಗಿತು, ಇಲ್ಲಿಯೂ ಸಹ ಮಕ್ಕಳಿಗೆ ನೀತಿ ಪಾಠ, ಸಾಹಸ ಗಾಥೆ, ಪ್ರವಾಸ ಇವುಗಳ ತಿಳುವಳಿಕೆ ಮುಖ್ಯವಾಗಿತ್ತು. A Child's delight together with English, Banyan books of Boys & Girls ಇಲ್ಲಿ ಕೆಲ ಉದಾಹರಣೆಗಳು. ಇದೇ ರೀತಿ 18 ನೇ ಶತಮಾನದಲ್ಲಿನ ಐಸಾಕ್ ವ್ಯಾಟ್ ರ Divine & Moral songs for children, ಜೊನಾಥನ್ ಸ್ವಿಫ್ಟ್ ರವರ ಗಲೀವರನ ಕಥೆಗಳು, ಅರೇಬಿಯನ್ ನೈಟ್ಸ್, ಸಿಂಡ್ರೆಲಾ ಇವುಗಳೆಲ್ಲ ಕಲ್ಪನಾತೀತ ನೈಜತೆಯಲ್ಲಿ ಮಕ್ಕಳಿಗೆ ಅತ್ಯಂತ ಹತ್ತಿರವಾದವಾಗಿವೆ. ಅಲ್ಲಾವುದ್ದೀನ್ ಅದ್ಭುತ ದೀಪ, ಟಾರ್ಜನ್‌ನ ಸಾಹಸಗಳು ಜಂಗಲ್ ಬುಕ್ ಇವುಗಳು ಈಗಲೂ ಎಳೆಯರ ಮನಸ್ಸಿನಿಂದ ತೆಗೆದು ಹಾಕಲಾಗದಂತಹವಾಗಿವೆ.

ಭಾರತೀಯ ಸಾಹಿತ್ಯದಲ್ಲಿ ಇಂತಹ ಕಥೆಗಳ ರಚನೆಗೆ ಮೂಲ ನಮ್ಮ ಜನಪದ. ಇಲ್ಲಿಯೂ ನೀತಿ ಕಥೆಗಳಿಗೇ ಪ್ರಾಧಾನ್ಯ. ಅಜ್ಜಿಯ ಕಥೆಗಳಲ್ಲಿ ಪ್ರಮುಖ ಪಾತ್ರಗಳೆಂದರೆ ರಾಜ, ರಾಣಿ, ಮಂತ್ರಿ, ವಿದೂಷಕ ಇವರೆಲ್ಲ ಮಕ್ಕಳ ಮನ ನಾಟುವಂತಹ ಪಾತ್ರಗಳಾಗಿವೆ.

ನಮ್ಮ ಇತರೆ ಭಾಷೆಗಳಲ್ಲಿರುವಂತೆ ಕನ್ನಡದಲ್ಲೂ ಸಮೃದ್ಧ ಬಾಲ ಸಾಹಿತ್ಯಕ್ಕೆ ಮೂಲ ಜನಪದ. ಪುರಾಣ ಕಥೆಗಳ ನಿರೂಪಣೆ, ಅನೇಕ ಆಟಗಳನ್ನು ಆಡುವಾಗ ಹಾಡುವ ಪ್ರಾಸಬದ್ಧ ಹಾಡುಗಳು, ಕೋಲಾಟ ಇವೆಲ್ಲ ಮಕ್ಕಳ ಮನೋ ವಿಕಾಸಕ್ಕೆ ಬುನಾದಿ ಹಾಕುವಂತಹುದಾಗಿದೆ. ಮಳೆ ಹಾಡುಗಳು, ಅವಲಕ್ಕಿ, ಪವಲಕ್ಕಿ ಕಾಂಚಾಣ ಮಿಣಿ ಮಿಣಿ.........., ಕಣ್ಣಾ ಮುಚ್ಚೆ ಕಾಡೇ ಗೂಡೇ ಇವು ನಮ್ಮ ಮಕ್ಕಳ ಸಾಹಿತ್ಯ ಭಂಡಾರದ ಕೆಲ ತುಣುಕುಗಳು ಮಾತ್ರ. ಪಂಚತಂತ್ರದ ಕಥೆಗಳೇ ಅಲ್ಲದೇ ಅನೇಕ ಶೂರಾಗ್ರಣಿಗಳ ಕಥಾನಕ ಇವೆಲ್ಲ ಸಾರ್ವತ್ರಿಕ ಮಕ್ಕಳ ಸಾಹಿತ್ಯ.

ಮುದ್ರಣ ತಂತ್ರಜ್ಞಾನ ಪ್ರಚಲಿತವಾದ ನಂತರ ಹಲವಾರು ಕಥೆಗಳು ಕನ್ನಡದಲ್ಲಿ ಸರಳ ಪದಗಳು ಮತ್ತು ಪ್ರಾಸಬದ್ಧ ರಚನೆಯಿಂದ ಪುಸ್ತಕ ರೂಪದಲ್ಲಿ ಸಿಗುವಂತಾಯಿತು. ಇದರಲ್ಲಿ ಮೊದಲನೆಯದೆಂದು ಹೇಳ ಬೇಕೆಂದರೆ ಸಿ. ವಾಸುದೇವಯ್ಯನವರ ಬಾಲ ಬೋಧೆ-1, ಬಾಲ ಬೋಧೆ- 2. ಇದರಲ್ಲಿನ ಭಾಷಾ ಪ್ರಯೋಗ ಮಕ್ಕಳಲ್ಲಿನ ಓದುವ ಆಸಕ್ತಿ ಬೆಳೆಸುವುದಾಗಿದೆ.

ಎಲೆ ಬೆಕ್ಕೇ ರೂಪಿನಿಂದಲಿ ಹುಲಿ ಜಾತಿಗೆ ಸೇರಿದೆನೆಂದು ಗರ್ವಿಸಬೇಡ...ಒಲುಮೆಯು ನಿನ್ನೊಳಗಿಹುದೇ, ಇಲಿಗಳ ಹಿಡಿಯುವುದೊಳಗಾಯಿತು, ನಿನ್ನಯ



Downloaded From:www.kpscvaani.com

ಸಾಹಸ. ಇಲ್ಲಿ ಬೆಕ್ಕಿನ ಜಾತಿಯನ್ನು ಪರಿಚಯಿಸುವುದೇ ಅಲ್ಲದೇ ಅದು ಹುಲಿಗಿಂತ ಹೇಗೆ ಭಿನ್ನ ಎಂಬುದನ್ನು ತಿಳಿಸುತ್ತದೆ. ಇದೇ ರೀತಿ ಹಲವಾರು ಕಥೆಗಳು ಪ್ರಾಸಬದ್ಧ, ಸರಳ ಪದಗಳಿಂದ ಕೂಡಿದ್ದು ಅವು ಬರಿಯ ಓದಲೇ ಅಲ್ಲದೇ ಹಾಡಲೂ ಬಹುದಾಗಿದೆ.

ಗೋವಿನ ಕಥೆಯ ಧರಣಿ ಮಂಡಲ ಮಧ್ಯದೊಳಗೆ....... ಒಂದು ಸರಳ ಸಾಮಾಜಿಕ ನೀತಿಯನ್ನು ಹೇಳಿದರೆ, ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ ನೀನಾರಿಗಾದೆಯೋ ಎಲೆ ಮಾನವ ಎಂಬ ಪದ್ಯ ಮನುಷ್ಯರು ಹೇಗಿರಬೇಕು ಎಂಬುದನ್ನು ಸುಂದರ, ಸರಳ ಪದಗಳ ಮೂಲಕ ಹೇಳುತ್ತದೆ.

ಕನ್ನಡದಲ್ಲಿನ ಮಕ್ಕಳ ಸಾಹಿತ್ಯಕ್ಕೆ ಒಂದು ಮೈಲಿಗಲ್ಲು ಎಂದರೆ ಪಂಜೆ ಮಂಗೇಶರಾಯರ ರಚನೆಗಳು ಎಂದು ಹೇಳಬಹುದು. ಅವರೊಳಗಿದ್ದ ಒಬ್ಬ ಶಿಕ್ಷಕ ಅವರಿಗೆ ಮಕ್ಕಳ ಮನಸ್ಸಿನ ಆಳ, ವಿರಾಳಗಳನ್ನು ಗುರುತಿಸಲು ಸುಲಭವಾಗಿತ್ತು. ಹೀಗಾಗಿ ಇವರ ಕಾಣಿಕೆಗಳು ಮಕ್ಕಳಿಗೆ ಬೆಲೆ ಬಾಳುವ ಮುತ್ತು ಮಣಿಗಳೇ. ಇವರು ತಮ್ಮ ರಚನೆಗಳನ್ನು ಮಂಗಳೂರಿನ ಬಾಲ ಸಾಹಿತ್ಯ ಮಂಡಲಿ ಮುಖಾಂತರ ಪ್ರಕಟ ಮಾಡುತ್ತಿದ್ದರು. ನಾಗರ ಹಾವೇ, ಹಾವೊಳು ಹೂವೆ....., ಅವರ ರಚನೆಯ ಪದ್ಯ. ಇದೇ ರೀತಿ ಮಕ್ಕಳ ಓದಿಗೆ ಅಪ್ಯಾಯಮಾನವಾಗಿದ್ದ ರಚನೆಗಳು ಇನ್ನೊಬ್ಬ ಶಿಕ್ಷಕ ಎಂ.ಎನ್. ಕಾಮತ್‌ರವರ ಕಥೆ, ನಾಟಕಗಳು. ಬಂದ ಬಂದ ಸಣ್ ತಮ್ಮಣ್ಣ, ನಂಗೊತ್ತಿಲ್ಲಪ್ಪ, ಹೂವಿನ ಹಾಸಿಗೆ, ಕಳ್ಳ-ಮಳ್ಳ-ಸುಳ್ಳ, ವಾತಾಪಿ ಇವುಗಳು ಇವರ ಕಥೆ ಮತ್ತು ನಾಟಕಗಳಿಗೆ ಉದಾಹರಣೆಗಳಾಗಿವೆ.

ಜಿ.ಪಿ.ರಾಜರತ್ನಂ ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಒಂದು ಅನರ್ಘ್ಯ ರತ್ನವೇ ಸರಿ. ಮಕ್ಕಳ ಸಾಹಿತ್ಯ ಹೇಗಿರಬೇಕು ಎಂಬುದಕ್ಕೆ ಇವರ ಅಸಂಖ್ಯ ರಚನೆಗಳೇ ಎಲ್ಲ ಕಾಲಕ್ಕೂ ಸಲ್ಲುವ ಉದಾಹರಣೆ. ತುತ್ತೂರಿ, ಕಡ್ಲೆಪುರಿ, ಚುಟುಕ, ಕಲ್ಲು ಸಕ್ಕರೆ, ತುಂಟ ಗಣಪ, ಮುದ್ದು ಕೃಷ್ಣ, ರಸ ಕವಳ, ಕೆಂಚಾಲು, ಪುಟಾಣಿ ಇವುಗಳೇ ಅಲ್ಲದೇ ಕನ್ನಡದಲ್ಲಿ ಪಂಚ ತಂತ್ರದ ಕಥೆಗಳು, ಭಾಸನ ಮಹಾಭಾರತ, ಆಲಿವರ್ ಟ್ವಿಸ್ಟ್ ಒಂದಷ್ಟು ಹೆಸರಿಸುವಂತಹವಾಗಿವೆ.

ಕನ್ನಡದಲ್ಲಿ ಡಾ.ಶಿವರಾಮ ಕಾರಂತರ ಕೊಡುಗೆಗೆ ಅವರದೇ ಆದ ಶೈಲಿ ಇದೆ. ಇವರು ಮಕ್ಕಳಿಗೆ ತಮ್ಮ ಸಾಹಿತ್ಯದ ಮೂಲಕ ಹೊಸ ಪ್ರಪಂಚವನ್ನೇ ಕಾಣಿಸುವ ಪ್ರಯತ್ನ ಮಾಡಿದರು. ಇವರ ಬಾಲ ಪ್ರಪಂಚ ಮಕ್ಕಳಿಗಾಗಿ ವಿರಚಿತ ವಿಶ್ವಕೋಶ. ಇದರಲ್ಲಿನ "ಅದ್ಭುತ ಜಗತ್ತು" ವಿಜ್ಞಾನದ ವಿಸ್ಮಯಗಳ ಸರಳ ಪರಿಚಯ ಮಾಡಿಕೊಟ್ಟರೆ "ವಿಚಿತ್ರ ಖಗೋಳ" ನಮ್ಮ ಭೂ ಮಂಡಲವನ್ನು ಪರಿಚಯಿಸುತ್ತದೆ. ಇವರೂ ಸಹ ಅನೇಕ ಸಣ್ಣ ಕಥೆಗಳು, ಪದ್ಯಗಳ ಮೂಲಕ ಮಕ್ಕಳ ಓದಿಗೆ ಕಾಣಿಕೆ ನೀಡಿದ್ದಾರೆ. ವಿಜ್ಞಾನ ಪ್ರಪಂಚ (4 ಸಂಪುಟ) ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗ ದರ್ಶಕವಾಗಿದೆ.

ಕುವೆಂಪುರವರ ಕಿಂದರಿ ಜೋಗಿ ರಚನೆ ಎಲ್ಲ ಕಾಲಕ್ಕೂ ಮಕ್ಕಳಿಗೆ ಆಸಕ್ತಿ ಮೂಡಿಸುವಂತಹುದು. ನಮ್ಮ ಗೋಪಾಲ ಮುಂತಾದ ಇವರ ನಾಟಕಗಳು ಎಳೇ ವಯೋಮಾನದವರಿಗೆ ಹತ್ತಿರವಾಗುವಂತಹವಾಗಿದೆ. ನಾ. ಕಸ್ತೂರಿಯವರ ಪಾತಾಳದಲ್ಲಿ ಪಾಪಚ್ಚಿ, ಎಲ್. ಗುಂಡಪ್ಪನವರ ಚಿಟ್ಟಾರಿ, ಕಾವ್ಯಾನಂದರ ತುಪ್ಪ ರೊಟ್ಟಿ ಗೇ, ರಾಘವರ ಹೂವಾಡಿಗಿತ್ತಿ, ಎಂ.ಎಸ್. ಪುಟ್ಟಣ್ಣನವರ ನೀತಿ ಚಿಂತಾಮಣಿ, ಎಸ್.ಜಿ. ನರಸಿಂಹಾಚಾರ್ಯರವರ ದಿಲೀಪ ಚರಿತ್ರೆ ಕನ್ನಡದಲ್ಲಿ ಮಕ್ಕಳ ಓದಿಗೆ ಉತ್ತಮ ಆಕರವಾಗಬಲ್ಲ ರಚನೆಗಳು. ಮಕ್ಕಳ ಸಾಹಿತ್ಯಕ್ಕೆ ಪಳಕಳ ಸೀತಾರಾಮ ಭಟ್ಟ, ಸಿ.ಸು. ಸಂಗಮೇಶ, ಕಂಚ್ಯಾಣಿ ಶರಣಪ್ಪ ಇವರುಗಳ ಕೊಡುಗೆಯೂ ಅತ್ಯಮೂಲ್ಯವಾಗಿವೆ.

ಮಹಿಳಾ ಲೇಖಕಿಯರ ಬಗ್ಗೆ ಹೇಳುವಾಗ ಅವರ ಸಂಖ್ಯೆ ಕಡಿಮೆ ಎಂದೇ ಹೇಳ ಬೇಕು. ಅನುಪಮಾ ನಿರಂಜನ್‌ರವರ ದಿನಕ್ಕೊಂದು ಕಥೆ, ಬಿ.ಎಸ್. ರುಕ್ಕಮ್ಮನವರ ವಿಜ್ಞಾನದ ಸಣ್ಣ ಕಥೆಗಳು ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿದೆ.

ಮಕ್ಕಳಿಗಾಗಿ ಸಾಹಿತ್ಯವನ್ನು ಪರಿಚಯಿಸಿ ಬೆಳೆಸುವಲ್ಲಿ ನಮ್ಮ ದಿನ ಪತ್ರಿಕೆಗಳು, ವಾರ ಪತ್ರಿಕೆಗಳ ಕೊಡುಗೆ ಉತ್ತಮವಾಗಿದೆ. ವಾರದಲ್ಲಿ ಒಂದು ಪುಟ ಅವರಿಗಾಗಿಯೇ ಮೀಸಲಿಡುವುದೇ ಅಲ್ಲದೇ ಅವರ ರಚನೆಗಳನ್ನೂ ಮುದ್ರಿಸುವುದರಿಂದ ಅವರಿಗೆ ಒಳ್ಳೆಯ ಉತ್ತೇಜನ ನೀಡುತ್ತದೆ. ಇದೇ ರೀತಿಯಲ್ಲಿ ಚಂದಮಾಮಾ, ಬಾಲ ಮಿತ್ರ, ಚುಟುಕ, ಚಂಪಕ ಈ ಪತ್ರಿಕೆಗಳೂ ಸಹ ಮಕ್ಕಳ ಓದಿಗೆ ಪೂರಕ ರಚನೆಗಳನ್ನು ಹೊಂದಿರುತ್ತಿದ್ದವು. ರಾಜ್ಯ ವಿಜ್ಞಾನ ಪರಿಷತ್ತು ಪ್ರಕಟಿಸುತ್ತಿರುವ ಮಾಸ ಪತ್ರಿಕೆ 'ಬಾಲ ವಿಜ್ಞಾನ' ಶಾಲಾ ಮಕ್ಕಳಿಗೆ ಕನ್ನಡ ಭಾಷೆಯ ಮೂಲಕ ವಿಜ್ಞಾನದಲ್ಲಿನ ಹೊಸ ವಿಚಾರಗಳನ್ನು ತಿಳಿಸುವಲ್ಲಿ ಸಹಾಯಕವಾಗಿದೆ.

ಇನ್ನು ಮಕ್ಕಳಿಗೆ ಕಥೆ ಹೇಳುವ ಕೆಲಸವನ್ನು ಕೆಲವು ಆಸಕ್ತ ಗುಂಪುಗಳವರು ಮಾಡುತ್ತಿದ್ದಾರೆ. ಅವರ ಉದ್ದೇಶ, ಮಕ್ಕಳಿಗೆ ಮುಖಾಮುಖಿ ಕಥೆ ಹೇಳುವುದು. ಅದು ಮಕ್ಕಳಿಗೆ ಭಾಷೆಯ ತಿಳುವಳಿಕೆ ಮತ್ತು ಜ್ಞಾನವನ್ನು ಬೆಳೆಸುವಲ್ಲಿ ಸಹಾಯಕವಾಗುತ್ತದೆ. ಇದು ಪ್ರತಿ ಶಾಲೆಯಲ್ಲೂ ಆಗಬೇಕಾಗಿರುವ ಕೆಲಸ ಎನಿಸುತ್ತದೆ. ಮಕ್ಕಳಿಗೆ ಕನ್ನಡದಲ್ಲಿ ಕಥೆ ಹೇಳುವುದೇ ಅಲ್ಲದೇ ಅವರ ವಯೋಮಾನಕ್ಕೆ ಅನುಗುಣವಾಗಿ ವಿವಿಧ ವಿಷಯಗಳ ಕುರಿತು ಸಣ್ಣ ಪ್ರಬಂಧ ಬರೆಸುವುದು. ಕಥೆಗಳನ್ನು ಅವರಿಂದಲೇ ಓದಿಸುವುದು ಇವೆಲ್ಲಾ ಕನ್ನಡ ಬಾಷೆಯ ಕಲಿಕೆಗೆ ಹೆಚ್ಚು ಒತ್ತು ಕೊಟ್ಟಂತಾಗುತ್ತದೆ. ಅದಲ್ಲದೇ, ಅವರು ಪಠ್ಯ ಪುಸ್ತಕದ ಆಚೆಗೂ ವಿಷಯ ಸಂಗ್ರಹಣೆ ಮಾಡಲು ಸಹಾಯಕವಾಗುತ್ತದೆ.

ಈಗ ದೃಶ್ಯ ಮಾಧ್ಯಮಗಳ ಒತ್ತಡ ಹೆಚ್ಚಿನದೇ ಆಗಿರುತ್ತದೆ. ಆದರೆ ಇಲ್ಲಿ ಮಕ್ಕಳಿಗಾಗಿನ ಕೊಡುಗೆ ಬಹಳ ಕಡಿಮೆಯೆನ್ನಬಹುದು. ಇದು ಕನ್ನಡವೂ ಸೇರಿದಂತೆ ಎಲ್ಲ ಭಾಷಾ ಕಾರ್ಯಯಕ್ರಮಗಳಿಗೂ ಅನ್ವಯವಾಗುತ್ತದೆ. ಕೆಲವು ಕಾರ್ಟೂನ್‌ಗಳ ಭಾಷಾಂತರದ ಪ್ರಯತ್ನ ಹೊರತುಪಡಿಸಿ ಅವರುಗಳಿಗಾಗಿ ಯಾವುದೇ ಕ್ರಿಯಾತ್ಮಕ ಕಾರ್ಯಾಕ್ರಮವೂ ತಯಾರಾಗುತ್ತಿಲ್ಲ ಎಂಬುದು ವಿಷಾದನೀಯ. ಅನೇಕ ರಿಯಾಲಿಟಿ ಷೋಗಳಲ್ಲಿ ಮಕ್ಕಳನ್ನು ಸೇರಿಸಿಕೊಂಡಿದ್ದರೂ ಅಲ್ಲಿ ಅವರುಗಳ ನೈಜ ಬೆಳವಣಿಗೆ ಬದಲಿಗೆ ಅವರು ಅಲ್ಲಿ ಗೆಲ್ಲದಿದ್ದರೆ ಆಗುವುದೇ ಇಲ್ಲ ಎಂಬ ಮನೋಭಾವ ಬಿತ್ತುತ್ತಾರೆ. ಈ ಬಗ್ಗೆ ಮಕ್ಕಳ ಪೋಷಕರು ಹೆಚ್ಚು ಚಿಂತನೆ ಮಾಡಬೇಕಾಗುತ್ತದೆ. ■


Downloaded From:www.kpscvaani.com






# ಗರಗ ಕ್ಷೇತ್ರೀಯ ಸೇವಾ ಸಂಘಕ್ಕೆ

## 2023ನೇ ಸಾಲಿನ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ

**ರಾಷ್ಟ್ರಧ್ವಜಕ್ಕೆ ಬೇಕಾಗುವ ಬಟ್ಟೆ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ದೇಶದ ಮೊದಲ ಖಾದಿ ಗ್ರಾಮೋದ್ಯೋಗ ಸಂಸ್ಥೆ ಎಂಬ ಹಿರಿಮೆ ಹೊಂದಿರುವ ಧಾರವಾಡ ಜಿಲ್ಲೆಯ ಗರಗ ಕ್ಷೇತ್ರೀಯ ಸೇವಾ ಸಂಘವು 2023ರ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಭಾಜನವಾಗಿದೆ.**

ರಾಜ್ಯ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸ್ಥಾಪಿಸಿರುವ ಐದು ಲಕ್ಷ ರೂಪಾಯಿ ನಗದನ್ನು ಒಳಗೊಂಡ ಪ್ರಶಸ್ತಿಗೆ ಸಾರ್ವಜನಿಕ ಜೀವನದಲ್ಲಿ ಮಹಾತ್ಮಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿಕೊಂಡು ಜೀವನ ನಡೆಸುತ್ತಿರುವ ಕನಿಷ್ಠ 60 ವರ್ಷಗಳಾಗಿರುವ ಅಥವಾ 25 ವರ್ಷಗಳು ತುಂಬಿರುವ ಸೇವಾ ಸಂಸ್ಥೆಗಳನ್ನು ಪರಿಗಣಿಸಲಾಗುತ್ತದೆ.

ಪ್ರಸಕ್ತ ಸಾಲಿಗೆ 18 ವ್ಯಕ್ತಿಗಳು ಹಾಗೂ 12 ಸಂಸ್ಥೆಗಳು ಈ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಯಾವುದೇ ಪ್ರಶಸ್ತಿಗೆ ಅರ್ಜಿ ಸಲ್ಲಿಸದೇ ತನ್ನ ಕಾಯಕವನ್ನು ನಡೆಸುತ್ತಿರುವ ಗರಗ ಕ್ಷೇತ್ರೀಯ ಸೇವಾ ಸಂಘವನ್ನು ಈ ಸಾಲಿನ ಮಹಾತ್ಮಗಾಂಧಿ ಸೇವಾ ಪ್ರಶಸ್ತಿಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾದ ಬಿ.ವೀರಪ್ಪ ಅವರ ನೇತೃತ್ವದ ಸಮಿತಿಯು ಒಮ್ಮತದಿಂದ ಆಯ್ಕೆ ಮಾಡಿತು.

1956 ರಲ್ಲಿ ಧಾರವಾಡ ತಾಲೂಕು ಸೇವಾ ಸಂಘವೆಂದು ಆರಂಭವಾದ ಈ ಸಂಘವು ನಿರಂತರವಾಗಿ ಖಾದಿ ಉತ್ಪನ್ನ ಮತ್ತು ಖಾದಿ ಮಾರಾಟವನ್ನು ಮಾಡುತ್ತಾ ಬಂದಿದೆ. 1989–90 ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದವರ ಆದೇಶದಂತೆ ಮಾತೃ ಸಂಘವನ್ನು ನಾಲ್ಕು ಸಣ್ಣ ಸಂಸ್ಥೆಗಳಾಗಿ ವಿಕೇಂದ್ರೀಕರಿಸಲಾಯಿತು. ಅದರಂತೆ ಮಾತೃಸಂಸ್ಥೆಯನ್ನು ಧಾರವಾಡ ತಾಲೂಕು ಸೇವಾ ಸಂಘ, ಗರಗ ಕ್ಷೇತ್ರಿಯ ಸೇವಾ ಸಂಘ, ಹೆಬ್ಬಳ್ಳಿ ಕ್ಷೇತ್ರೀಯ ಸೇವಾ ಸಂಘ ಮತ್ತು ಅಮ್ಮಿನಬಾವಿ ಕ್ಷೇತ್ರೀಯ ಸೇವಾ ಸಂಘವೆಂದು ನಾಮಕರಣಗೊಳಿಸಲಾಯಿತು.



Downloaded From:www.kpscvaani.com

ಧಾರವಾಡದಿಂದ 17 ಕಿ.ಮಿ.ದೂರದ ಗರಗ ಗ್ರಾಮದಲ್ಲಿರುವ ಗರಗ ಕ್ಷೇತ್ರೀಯ ಸೇವಾ ಸಂಘವು ಹಲವು ದಶಕಗಳಿಂದ ಖಾದಿ ಉತ್ಪನ್ನ ಮತ್ತು ಖಾದಿ ಮಾರಾಟ ಕಾರ್ಯದಲ್ಲಿ ತೊಡಗಿದ್ದು, ಇತ್ತೀಚೆಗೆ ಸಂಪೂರ್ಣ ರಾಷ್ಟ್ರಧ್ವಜ ತಯಾರಿಸುವ ಪರವಾನಗಿಯನ್ನು ಪಡೆದಿದೆ. ಉತ್ತರ ಕರ್ನಾಟಕದಾದ್ಯಂತ ಒಟ್ಟು 52 ಇಂತಹ ಘಟಕಗಳು ರಾಷ್ಟ್ರಧ್ವಜ ನಿರ್ಮಾಣದಲ್ಲಿ ತೊಡಗಿವೆ.

ಆರಂಭದಲ್ಲಿ ಗರಗ ಕ್ಷೇತ್ರೀಯ ಸೇವಾ ಸಂಘವು ಗರಗದಲ್ಲಿ ವಿಶೇಷವಾಗಿ 45",36" ಖಾದಿ ಮತ್ತು ಕೋಟಿಂಗ್ ಹನಿಕೂಂಬ್ ಟವೆಲ್‌ಗಳನ್ನು ಮಾಡುತ್ತಾ ತನ್ನ ವ್ಯಾಪ್ತಿಯನ್ನು ತಡಕೋಡ, ಖಾನಾಪುರ, ತೇಗೂರ, ಕೋಟೂರ, ಗುಳೇದಕೊಪ್ಪ, ಮಾದನಬಾವಿ, ಮುಗಳೀ ಮತ್ತು ಮಮ್ಮಿಗಟ್ಟಿ ಊರುಗಳಿಗೆ ವಿಸ್ತರಿಸಿದೆ. ಬಳಿಕ ಖಾದಿ ಆಯೋಗದ ಸಲಹೆಯಂತೆ ಗರಗ ಕ್ಷೇತ್ರೀಯ ಸಂಘವು ರಾಷ್ಟ್ರಧ್ವಜಕ್ಕೆ ಬೇಕಾಗುವ ಖಾದಿ ಬಟ್ಟೆ ತಯಾರಿಸುವ ಕಾರ್ಯ ನಡೆಸುತ್ತಾ ಬಂದಿದೆ. 1975 ರಿಂದ ರಾಷ್ಟ್ರಧ್ವಜದ ಬಟ್ಟೆ ನೇಯ್ಗೆಯ ಕೆಲಸವನ್ನು ಮಾಡುತ್ತಾ ಬಂದಿದೆ.

ಇದುವರೆಗೆ ಖಾದಿ ಗ್ರಾಮೋದ್ಯೋಗ ಆಯೋಗದ ಪ್ರಮಾಣಿತ ಗರಗ ಕೇಂದ್ರದಲ್ಲಿ ತಿರಂಗಾಕ್ಕೆ ಬಟ್ಟೆ ತಯಾರು ಮಾಡಿ ಮುಂಬೈನ ಖಾದಿ ಡೈಯರ್ ಆಂಡ್ ಪ್ರಿಂಟರ್‌ಗೆ ಬಣ್ಣಕ್ಕಾಗಿ ಕಳುಹಿಸಲಾಗುತ್ತಿತ್ತು. ಅಲ್ಲಿಂದ ವರ್ಣಮಯಗೊಂಡು ಸಿದ್ಧವಾಗುತ್ತಿದ್ದ ರಾಷ್ಟ್ರಧ್ವಜಗಳನ್ನು ಇಲ್ಲಿ ಮಾರಾಟ ಮಾಡಲಾಗುತ್ತಿತ್ತು. 2023 ರ ಜೂನ್ 3 ರಂದು ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ (ಬಿಐಎಸ್) 2:3 ಅಡಿ ತ್ರಿವರ್ಣ ಧ್ವಜ ತಯಾರಿಕೆಗೆ ಅನುಮತಿ ನೀಡಿದೆ. ಇದರಿಂದಾಗಿ  ಗರಗ ಕೇಂದ್ರದಲ್ಲಿಯೇ ನೂಲುವುದು, ನೇಯುವುದು, ಬಟ್ಟೆ ತಯಾರಿಕೆ ಜೊತೆಗೆ ಬಣ್ಣಗಳ ಮುದ್ರಣ ಮಾಡುವ ಕಾರ್ಯದೊಂದಿಗೆ ಸಂಪೂರ್ಣ ತಿರಂಗಾ ಧ್ವಜ ಇಲ್ಲಿಯೇ ರೂಪುಗೊಳ್ಳಲಿದೆ.

ಈ ಪ್ರಕಾರ ಸಂಸ್ಥೆಯು ನೇಯ್ಗೆಯಲ್ಲಿ ಐಎಸ್‌ಐ ಮಾರ್ಕಿನ ಬಟ್ಟೆಯನ್ನು ತಯಾರಿಸಿ 2003 ನೇ ಸಾಲಿನವರೆಗೆ ಮುಂಬಯಿ ಖಾದಿ ಗ್ರಾಮೋದ್ಯೋಗ ಸಂಘ ಬೊರಿವಿಲಿ ಇವರಿಗೆ ಪೂರೈಸುತ್ತಾ ಬಂದಿದೆ. ಆದರೆ 2003–04 ರಿಂದ ಮುಂಬಯಿ ಖಾದಿ ಗ್ರಾಮೋದ್ಯೋಗ ಸಂಘ ಬೊರಿವಿಲಿ ಇವರು ರಾಷ್ಟ್ರಧ್ವಜ ತಯಾರಿಸುವುದನ್ನು ನಿಲ್ಲಿಸಿದ್ದರಿಂದ, ಗರಗ ಕ್ಷೇತ್ರೀಯ ಸೇವಾ ಸಂಘದ ವತಿಯಿಂದಲೇ ಪೂರ್ಣ ಪ್ರಮಾಣದಲ್ಲಿ ರಾಷ್ಟ್ರಧ್ವಜ ನಿರ್ಮಾಣ ಕಾರ್ಯವನ್ನು ಆರಂಭಿಸಲಾಯಿತು. ಸಂಸ್ಥೆಯ ಖಾದಿ ಕೇಂದ್ರದ ವ್ಯವಸ್ಥಾಪಕ ಶಂಕರ ಎಮ್.ಕರಡಿಗುಡ್ಡ ಅವರ ಪ್ರಯತ್ನದ ಫಲವಾಗಿ ಸಂಸ್ಥೆಯು ಸದೃಢವಾಗಿ ಬೆಳೆಯಲು ಸಾಧ್ಯವಾಗಿದೆ.

> **ಕಳೆದ ಏಳು ದಶಕಗಳಿಂದ ರಾಷ್ಟ್ರಧ್ವಜದ ಬಟ್ಟೆ ತಯಾರಿಸುತ್ತಿರುವ ಖಾದಿ ಕೇಂದ್ರವು ಈ ಬಾರಿ ಪೂರ್ಣ ಪ್ರಮಾಣದ ರಾಷ್ಟ್ರಧ್ವಜ ತಯಾರಿಕೆಯ ಅವಕಾಶವನ್ನೂ ಪಡೆದಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ.**
>
> **ಮಾಹಾತ್ಮ ಗಾಂಧೀಜಿಯವರ ಗ್ರಾಮಾಭಿವೃದ್ಧಿ, ಗುಡಿಕೈಗಾರಿಕೆ ಮತ್ತು ಮಹಿಳಾ ಸಬಲೀಕರಣದ ಚಿಂತನೆಗಳನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಯಾಗಿರುವ ಗರಗ ಕ್ಷೇತ್ರೀಯ ಸೇವಾ ಸಂಘಕ್ಕೆ ಇನ್ನಷ್ಟು ಗೌರವ ಮತ್ತು ಮಾನ್ಯತೆ ಸಿಗಲಿ ಎಂದು ಹಾರೈಸುತ್ತೇನೆ.**
>
> **ಗರಗ ಕ್ಷೇತ್ರೀಯ ಸೇವಾ ಸಂಘದ ಎಲ್ಲ ಕಾರ್ಯಚಟುವಟಿಕೆಗಳಿಗೆ ರಾಜ್ಯ ಸರ್ಕಾರ ಸಂಪೂರ್ಣ ನೆರವು ಮತ್ತು ಸಹಕಾರ ನೀಡಲಿದೆ.**
>
> **–ಸಿದ್ದರಾಮಯ್ಯ, ಮುಖ್ಯಮಂತ್ರಿಗಳು**

ಸಂವಿಧಾನದ ಮಾರ್ಗಸೂಚಿ ಪ್ರಕಾರ ರಾಷ್ಟ್ರಧ್ವಜದ ಬಟ್ಟೆ ಕೈಮಗ್ಗದಿಂದ ನೇಯ್ದ ಬಟ್ಟೆಯೇ ಆಗಬೇಕು. ಕೈಗಳಿಂದ ಅಂದರೆ ಅಂಬರ ಚರಕಾದಲ್ಲಿ ತೆಗೆದ ನೂಲಿನಿಂದ ಬಟ್ಟೆ ತಯಾರಿಸುವುದು ಸವಾಲಿನ ಕೆಲಸ. ಧ್ವಜದ ಬಟ್ಟೆ ಅಂದರೆ ಬರಿ ಕಣ್ಣಿಗೆ ಕಾಣುವ ಸಾಧಾರಣ ಬಟ್ಟೆಯಾಗದೆ ಭಾರತೀಯ ಮಾನಕ ಬ್ಯೂರೋದ ಮಾನದಂಡ ಪ್ರಕಾರ ತಯಾರಿಸಬೇಕಾಗುತ್ತದೆ.  ಐ.ಎಸ್.ಐ ಸರ್ಟಿಫಿಕೇಟ್ ಪಡೆದ ರಾಷ್ಟ್ರಧ್ವಜದ ಖಾದಿ ಬಟ್ಟೆಯ ಒಂದು ಡೆಸಿ ಮೀಟರ್‌ನಲ್ಲಿ 175 ಹಾಸು ಎಳೆ ಹಾಗೂ 165 ಹೊಕ್ಕು ಎಳೆ ಇರಬೇಕು. 50:200 ಮಿ.ಮೀ ಗಾತ್ರದ ಈ ಬಟ್ಟೆ ಹಾಸುಬದಿಯಲ್ಲಿ 40 ಕಿಲೋ ತೂಕವನ್ನು, ಹೊಕ್ಕು ಬದಿಯಲ್ಲಿ 30ಕಿ.ಗ್ರಾಂ ತೂಕವನ್ನು ತಾಳಿಕೊಳ್ಳಬೇಕು. ಒಂದು ಚದರ ಮೀಟರ್ ಈ ಬಟ್ಟೆ  205 ಗ್ರಾಂ ತೂಕವಿರಬೇಕು ಎಂದು ನಿಯಮಾವಳಿ ರೂಪಿಸಲಾಗಿದೆ. ಬ್ಯೂರೋದ ಮಾನದಂಡಗಳಿಗೆ ತಕ್ಕಂತೆ ಇಲ್ಲದಿದ್ದರೆ ಅವುಗಳನ್ನು ತಿರಸ್ಕರಿಸಲಾಗುತ್ತದೆ.

ಹಲವು ಸವಾಲುಗಳ ನಡುವೆಯೂ ದೇಶದ ಎಲ್ಲಾ ರಾಜ್ಯಗಳಿಗೆ ಐಎಸ್‌ಐ ಗುರುತಿನ ಧ್ವಜಗಳನ್ನು ಸಂಸ್ಥೆಯ ಮೂಲಕ ಪೂರೈಕೆ ಮಾಡಲಾಗುತ್ತಿದ್ದು, ಸಂಸ್ಥೆಯಲ್ಲಿ ಸದ್ಯಕ್ಕೆ 250 ನೂಲುವ ಮಹಿಳೆಯರು, 50 ಜನ ನೇಕಾರರು ಅಲ್ಲದೆ 15 ಜನ ಖಾಯಂ ಕಾರ್ಯಕರ್ತರು ಕೆಲಸ ನಿರ್ವಹಿಸುತ್ತಿದ್ದಾರೆ.

ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಗರಗ ಕ್ಷೇತ್ರೀಯ ಸೇವಾ ಸಂಘದ ಅಧ್ಯಕ್ಷರಾದ ಬಸವಪ್ರಭು ಹೊಸಕೇರಿ ಅವರು ಪ್ರಶಸ್ತಿ ದೊರಕಿರುವುದು ನೂಲುವ ಮತ್ತು ನೇಯುವವರಿಗೆ ಸಂದ ಗೌರವವಾಗಿದೆ. ಹಾಗೆಯೇ ಖಾದಿಯನ್ನು ತುಂಡು ಬಟ್ಟೆಯಾಗಿ ನೋಡದೇ ತತ್ವವಾಗಿ ನೋಡುವ ಮೂಲಕ ಖಾದಿಯನ್ನು ಉಳಿಸಿ ಬೆಳೆಸಬೇಕು ಎಂದರು.

ಇದೇ ಸಂದರ್ಭದಲ್ಲಿ ಗರಗ ಕ್ಷೇತ್ರೀಯ ಸೇವಾ ಸಂಘದ ಪ್ರಮುಖರಾದ ಈಶ್ವರ ಇಟಗಿ, ರಾಜೇಶ ಕಳಸಗಾರ್ ಹಾಗೂ ಸಂಘದ ನೂಲುವ ಮಹಿಳೆಯರು ಮುಖ್ಯಮಂತ್ರಿಗಳನ್ನು ಸನ್ಮಾನಿಸಿ ಗೌರವಿಸಿದರು.

ಈ ಪ್ರಶಸ್ತಿ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾದ ಬಿ.ವೀರಪ್ಪ, ಸದಸ್ಯರಾದ ದಿನೇಶ್ ಅಮೀನ್‌ಮಟ್ಟು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಹಾಗೂ ಸಮಿತಿಯ ಸದಸ್ಯರೂ ಆದ ಧರಣಿದೇವಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಎನ್. ಜಯರಾಂ ಮತ್ತು ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್, ಜಂಟಿ ನಿರ್ದೇಶಕರುಗಳಾದ ಮಂಜುನಾಥ ಡಿ. ಡೊಳ್ಳಿನ, ಪಲ್ಲವಿ ಹೊನ್ನಾಪುರ ಅವರು ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು, ಗಣ್ಯರು ಮತ್ತು ಸಾಹಿತಿಗಳು ಉಪಸ್ಥಿತರಿದ್ದರು. ■


Downloaded From:www.kpscvaani.com





# ರಾಜ್ಯದಾದ್ಯಂತ ಏಕ ಕಾಲಕ್ಕೆ

# ಜನತಾ ದರ್ಶನ

**ಏಕ ಕಾಲಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸರ್ಕಾರವು ರಾಜ್ಯದಾದ್ಯಂತ ಜನತಾ ದರ್ಶನವನ್ನು ನಡೆಸಿದ್ದು ರಾಜ್ಯದ ಇತಿಹಾಸದಲ್ಲೇ ಮೊದಲು.**

ಬಿ.ಜಿ.ಪೂರ್ಣಿಮ

ಇತ್ತೀಚೆಗೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮಂಚಾಯ್ತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ನಡೆಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾ ಆಡಳಿತಕ್ಕೆ ಚುರುಕು ಮುಟ್ಟಿಸುವ ಸಲುವಾಗಿ ಏಕ ಕಾಲಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಜನತಾ ದರ್ಶನವನ್ನು ಮಾಡುವ ಮೂಲಕ ಸಾರ್ವಜನಿಕರಿಂದ ಅಹವಾಲನ್ನು ಸ್ವೀಕರಿಸುವಂತೆ ತಿಳಿಸಿದರು.

ಮುಖ್ಯಮಂತ್ರಿಗಳು ಯಾವುದೇ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜನರು ಜಾತಿ ಪ್ರಮಾಣಪತ್ರ, ಖಾತೆ ಬದಲಾವಣೆ, ಟ್ರಾನ್ಸ್ ಫಾರ್ಮರ್ ರಿಪೇರಿ, ವಿದ್ಯುತ್ ಕಂಬ ಅಳವಡಿಕೆಯಂತಹ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸಿಕೊಡುವಂತೆ ಮನವಿ ಮಾಡುತ್ತಿದ್ದರು. ಹಾಗಾಗಿ ಮುಖ್ಯಮಂತ್ರಿ ಅವರು ಸಾರ್ವಜನಿಕರ ಅಹವಾಲುಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಜನತಾ ದರ್ಶನ ಮಾಡುವ ನಿರ್ಧಾರವನ್ನು ಕೈಗೊಂಡರು.

ಮುಖ್ಯಮಂತ್ರಿಗಳ ಸೂಚನೆಯಂತೆ ಸೆಪ್ಟೆಂಬರ್ 25 ರಂದು ಗದಗ ಮತ್ತು ಬೆಳಗಾವಿ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದಾದ್ಯಂತ ಜನತಾ ದರ್ಶನವನ್ನು ನಡೆಸಲಾಯಿತು. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳೆಲ್ಲರೂ ಸಮನ್ವಯ ಸಾಧಿಸಿ, ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸುವ ಜೊತೆಗೆ ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರವನ್ನು ಒದಗಿಸಿದುದು ಜನತಾ ದರ್ಶನವು ಅರ್ಥಪೂರ್ಣ ಮತ್ತು ಫಲಪ್ರದವಾಯಿತು.

ಪ್ರತಿ ಜಿಲ್ಲೆಯಲ್ಲಿ ಜನತಾ ದರ್ಶನ ನಡೆಯುವ ಸ್ಥಳದ ಕುರಿತು ಸಾರ್ವಜನಿಕರಿಗೆ ಮಾಹಿತಿಯನ್ನು ಮೊದಲೇ ನೀಡಲಾಗಿತ್ತು. ಹಾಗಾಗಿ ಸಮಸ್ಯೆ ಹೊಂದಿದ್ದ ಸಾರ್ವಜನಿಕರು ಅಂದು ತಮ್ಮ ಅಹವಾಲು ಹಿಡಿದು ಬಂದಿದ್ದರು. ಬಹುಪಾಲು ಕಡೆಗಳಲ್ಲಿ ನಿಗದಿತ ಸ್ಥಳದಲ್ಲಿ ನಿಗದಿತ ಸಮಯಕ್ಕೆ ಸರಿಯಾಗಿ ಜನತಾ ದರ್ಶನವನ್ನು ಆರಂಭಿಸಲಾಯಿತು. ಆದಷ್ಟು ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲು ಪ್ರಥಮ ಆದ್ಯತೆಯನ್ನು ನೀಡಲಾಗಿತ್ತು. ಹಾಗಾಗಿ ಪ್ರಮುಖ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ಜನತಾ ದರ್ಶನದಲ್ಲಿ ಉಪಸ್ಥಿತರಿದ್ದರು.


ಕೆಲವು ಕಡೆ ತಾಂತ್ರಿಕ ಕಾರಣಗಳಿಂದ ಸಾರ್ವಜನಿಕರ ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರವನ್ನು ನೀಡಲು ಸಾಧ್ಯವಾಗಲಿಲ್ಲ. ಇಂತಹ ಅಹವಾಲುಗಳನ್ನು



Downloaded From:www.kpscvaani.com

## ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ

ಜನತಾ ದರ್ಶನದಲ್ಲಿ ಸಲ್ಲಿಕೆಯಾದ ಸಾರ್ವಜನಿಕರ ಕುಂದುಕೊರತೆ ಅಹವಾಲುಗಳನ್ನು ಈಗಾಗಲೇ ಚಾಲ್ತಿಯಲ್ಲಿರುವ 'ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ' (ಐಪಿಜಿಆರ್‌ಎಸ್-ಇಂಟೆಗ್ರೇಟೆಡ್ ಪಬ್ಲಿಕ್ ಗ್ರಿವಿಯೆನ್ಸ್ ರಿಡ್ರೆಸಲ್ ಸಿಸ್ಟಂ) ತಂತ್ರಾಂಶದಲ್ಲಿ ದಾಖಲಾಗುತ್ತದೆ. ಇಲ್ಲಿ ದಾಖಲಾದ ಅಹವಾಲುಗಳನ್ನು ಆಯಾ ಸಂಬಂಧಪಟ್ಟ ಇಲಾಖೆಗಳಿಗೆ ವಿಲೇವಾರಿ ಮಾಡಲಾಗುತ್ತದೆ. ಆಯಾ ಇಲಾಖೆಗಳು ಈ ಅಹವಾಲುಗಳನ್ನು ಕಾಳಜಿವಹಿಸಿ ಕಾಲಮಿತಿಯಲ್ಲಿ ಪರಿಹಾರ ಒದಗಿಸುತ್ತಾರೆ.




ಕಾಲ ಮಿತಿಯಲ್ಲಿ ಪರಿಹಾರ ಒದಗಿಸುವ ಮತ್ತು ಸಾರ್ವಜನಿಕರು ಕೋರಿದ ಅಹವಾಲಿನ ಸ್ಥಿತಿಗತಿಯನ್ನು ಮನವಿದಾರರಿಗೆ ಮನವರಿಕೆ ಮಾಡಿಸುವ ಜವಾಬ್ದಾರಿಯನ್ನು ಆಯಾ ಜಿಲ್ಲಾಡಳಿತಕ್ಕೆ ವಹಿಸಲಾಗಿತ್ತು. ಏಕ ಕಾಲಕ್ಕೆ ಎಲ್ಲಾ ಜಿಲ್ಲೆಗಳಲ್ಲೂ ನಡೆದ ಜನತಾ ದರ್ಶನದಲ್ಲಿ ಅಧಿಕಾರಿಗಳು ನೀಡಿದ ಸಮಾಧಾನಕರ ಸ್ಪಂದನೆಗೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಕೆಲವು ಜಿಲ್ಲೆಗಳಲ್ಲಿ ಮಧ್ಯಾಹ್ನದ ಊಟಕ್ಕೂ ತೆರಳದೆ ಅಧಿಕಾರಿಗಳು ಜನತಾ ದರ್ಶನದಲ್ಲೇ ಊಟ ಮಾಡುತ್ತಾ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಿದರು.

ಈ ಜನತಾ ದರ್ಶನವು ಅಚ್ಚುಕಟ್ಟಾಗಿ ಶಿಸ್ತುಬದ್ಧವಾಗಿ ನಡೆದುದಷ್ಟೇ ಅಲ್ಲದೆ ಎಲ್ಲಾ ಪಕ್ಷದ ಶಾಸಕರು ಮತ್ತು ಜನಪ್ರತಿನಿಧಿಗಳು ಭಾಗಿಯಾಗಿದ್ದುದು ವಿಶೇಷವಾಗಿತ್ತು. ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಎದುರಿಗೆ ಅತಿ ಹೆಚ್ಚು ಸಮಸ್ಯೆಗಳು ಮತ್ತು ಅಹವಾಲುಗಳು ಸಲ್ಲಿಕೆಯಾಯಿತು. ಉಳಿದಂತಹ ಅಹವಾಲುಗಳು ಜಿಲ್ಲಾಧಿಕಾರಿಗಳ ಮುಂದೆ ಸಲ್ಲಿಕೆಯಾದರೆ, ಜಿಲ್ಲಾ ರಕ್ಷಣಾಧಿಕಾರಿಗಳ ಮುಂದೆ ಕೆಲವೇ ಕೆಲವು ಜಿಲ್ಲೆಗಳಿಂದ ಅತಿ ಕಡಿಮೆ ಅಹವಾಲುಗಳು ಸಲ್ಲಿಕೆ ಆಯಿತು. ಇದು ಆಶ್ಚರ್ಯದ ಜೊತೆಗೆ ವಿಶ್ಲೇಷಣೆ ಮಾಡಬೇಕಾದ ಸಂಗತಿ. ಒಟ್ಟಾರೆ ಸ್ವೀಕರಿಸಲಾಗಿರುವ ಅಹವಾಲುಗಳಲ್ಲಿ ಕಂದಾಯ ಇಲಾಖೆಯೇ ಸಿಂಹಪಾಲನ್ನು ಪಡೆದಿತ್ತು.

### ರಾಜ್ಯದಾದ್ಯಂತ ಒಟ್ಟು 15,992 ಅಹವಾಲು ಸ್ವೀಕಾರ

**ರಾಜ್ಯದ 29 ಜಿಲ್ಲೆಗಳಲ್ಲಿ ನಡೆದ ಜನತಾ ದರ್ಶನದಲ್ಲಿ ಮೌಖಿಕ ದೂರನ್ನು ಹೊರತುಪಡಿಸಿ ಒಟ್ಟು 15,992 ಅಹವಾಲು ಮತ್ತು ಮನವಿಗಳು ಸ್ವೀಕೃತವಾಗಿತ್ತು. ಅದರಲ್ಲಿ ಹೆಚ್ಚು ಅಹವಾಲುಗಳು ಕಂದಾಯ ಇಲಾಖೆಗೆ ಸಂಬಂಧಿಸಿದಾಗಿದ್ದರೆ, ಗ್ರಾಮೀಣಾಭಿವೃದ್ಧಿ ಇಲಾಖೆಯು ಎರಡನೇ ಸ್ಥಾನವನ್ನು ಮತ್ತು ಮೂರನೇ ಸ್ಥಾನವನ್ನು ನಗರಾಭಿವೃದ್ಧಿ ಇಲಾಖೆ ಪಡೆದಿತ್ತು.**

ಹಾವೇರಿ ಜಿಲ್ಲೆಯಲ್ಲಿ 2027 ಅತಿ ಹೆಚ್ಚು ಅಹವಾಲುಗಳು ದಾಖಲಾಗಿದ್ದರೆ, ಅದರಲ್ಲಿ ಬೆಳೆ ಹಾನಿ ಪರಿಹಾರ ಕುರಿತು ಹೆಚ್ಚಿನ ಅರ್ಜಿಗಳು ಬಂದಿದ್ದವು. ವಿಜಯನಗರ ಜಿಲ್ಲೆಯು 1038 ಅಹವಾಲುಗಳನ್ನು ಸ್ವೀಕರಿಸಿ ಎರಡನೇ ಸ್ಥಾನವನ್ನು ಮತ್ತು 1000 ಅಹವಾಲುಗಳನ್ನು ಸ್ವೀಕರಿಸಿ ಗದಗ ಜಿಲ್ಲೆಯು ಮೂರನೇ ಸ್ಥಾನವನ್ನು ಪಡೆದುಕೊಂಡಿತ್ತು. ಅರ್ಜಿ ರೂಪದಲ್ಲಿ ಬಂದ ಅಹವಾಲುಗಳನ್ನು ದಾಖಲಿಸಿಕೊಳ್ಳುವ ಮತ್ತು ಸ್ಥಳದಲ್ಲೇ ಪರಿಹಾರಕ್ಕೆ ಪ್ರಯತ್ನಿಸುವ ಪ್ರಕ್ರಿಯೆ ಒಂದು ಕಡೆ ನಡೆದರೆ, ಮತ್ತೊಂದು ಕಡೆ ಅರ್ಜಿ ಇಲ್ಲದೆ ಮೌಖಿಕವಾಗಿ ದೂರು ಕೊಡಲು ಬಂದವರಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳೇ ದೂರನ್ನು ಬರೆದು ಅವರಿಗೆ ಓದಿ ಹೇಳಿ, ಅವರಿಂದ ಸಹಿ ಪಡೆದು ಅಹವಾಲನ್ನು ಸ್ವೀಕರಿಸಿ ಜನರಿಂದ ಮೆಚ್ಚುಗೆಯನ್ನು ಗಳಿಸಿದರು.

ರಾಜ್ಯದಾದ್ಯಂತ ಏಕ ಕಾಲಕ್ಕೆ ನಡೆಸಿದ ಜನತಾ ದರ್ಶನವು ಅಧಿಕಾರಿಗಳಿಗೂ ಮೊದಲ ಅನುಭವವಾಗಿತ್ತು. ಸರ್ಕಾರವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ರೀತಿಯ ಪ್ರತಿಕ್ರಿಯೆ ಸಾರ್ವಜನಿಕರಿಂದ ದೊರಕಿತು. ಹಾಗಾಗಿ ಮುಂದಿನ ಜನತಾ ದರ್ಶನದ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸುವ ಪ್ರಯತ್ನವನ್ನು ಮಾಡಲಾಗುವುದೆಂಬ ಅಭಿಪ್ರಾಯವು ಹಿರಿಯ ಅಧಿಕಾರಿಗಳಿಂದ ವ್ಯಕ್ತವಾಗಿದೆ.

ಇನ್ನು ರಾಜ್ಯದಾದ್ಯಂತ ಜಿಲ್ಲಾಮಟ್ಟದ ಜನತಾ ದರ್ಶನ ನಡೆದ ಬೆನ್ನಲ್ಲೇ ಪ್ರತಿ ಹದಿನೈದು ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಒಂದು ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಜನತಾ ದರ್ಶನವನ್ನು ನಡೆಸಬೇಕೆಂಬ ಆದೇಶವನ್ನು ಮುಖ್ಯಮಂತ್ರಿ ಅವರ ಸೂಚನೆ ಮೇರೆಗೆ ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು ಹೊರಡಿಸಿದ್ದಾರೆ. ಈ ಆದೇಶದಂತೆ ಎಲ್ಲಾ ಜಿಲ್ಲಾಧಿಕಾರಿಗಳು ಹದಿನೈದು ದಿನಗಳಿಗೊಮ್ಮೆ ಒಂದು ತಾಲ್ಲೂಕಿನಲ್ಲಿ ಜನತಾ ದರ್ಶನವನ್ನು ಅತ್ಯಂತ ಮುತುವರ್ಜಿಯಿಂದ ನಡೆಸುತ್ತಿದ್ದಾರೆ.

ಒಟ್ಟಿನಲ್ಲಿ ಸಾರ್ವಜನಿಕರು ಪದೇ ಪದೇ ಸಣ್ಣಪುಟ್ಟ ಕೆಲಸಗಳಿಗೂ ಸರ್ಕಾರಿ ಕಚೇರಿಗಳಿಗೆ, ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು, ಮುಖ್ಯಮಂತ್ರಿಗಳ ಬಳಿಗೆ ಅಲೆಯುವುದನ್ನು ತಪ್ಪಿಸು ಉದ್ದೇಶದಿಂದ ಏರ್ಪಡಿಸಲಾಗಿದ್ದ ಜನತಾ ದರ್ಶನವು ಮನೆ-ಮನಗಳನ್ನು ತಲುಪಿತು. ■



Downloaded From:www.kpscvaani.com

# ಹೊಯ್ಸಳ ದೇವಾಲಯಗಳಿಗೆ ಯುನೆಸ್ಕೊ ಮಾನ್ಯತೆಯ ಗರಿಮೆ

**ಹೊಯ್ಸಳ ದೇವಾಲಯಗಳಿಗೆ ಯುನೆಸ್ಕೊ ಮಾನ್ಯತೆ ದೊರಕಿರುವುದು ಸಾಂಸ್ಕೃತಿಕ ಪ್ರವಾಸೋದ್ಯಮಕ್ಕೆ ನವ ಚೈತನ್ಯ ನೀಡಿದೆ.**

ದಿನೇಶ ನಾಯಕ್

**ಹೊ**ಯ್ಸಳರ ಕಾಲದ ಮೂರು ದೇವಾಲಯಗಳು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡ ಬಳಿಕ ತನ್ನ ಸಮೃದ್ಧ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಗೆ ಹೆಸರಾಗಿರುವ ಕರ್ನಾಟಕದ ಹಿರಿಮೆ ಮತ್ತಷ್ಟು ಹೆಚ್ಚಿದೆ. ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆ (ಯುನೆಸ್ಕೊ) ಈ ಕುರಿತ ಅಧಿಕೃತ ಪ್ರಕಟಣೆಯನ್ನು ಸೆಪ್ಟೆಂಬರ್ 18, 2023 ರಂದು ಹೊರಡಿಸಿದೆ.

ದೇಶಾದ್ಯಂತ ಸಂಭ್ರಮ, ಸಡಗರಗಳಿಂದ ಆಚರಿಸುವ ಧಾರ್ಮಿಕ–ಸಾಂಸ್ಕೃತಿಕ ಪರ್ವ ವಿನಾಯಕ ಚತುರ್ಥಿಯಂದೇ ಈ ಪ್ರಕಟಣೆ ಹೊರಬಿದ್ದಿರುವುದು ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿತು.

ಹೊಯ್ಸಳ ವಾಸ್ತುಶಿಲ್ಪ ವೈಭವದ ಉಜ್ವಲ ಮಾದರಿಗಳೆನಿಸಿರುವ ಈ ಮೂರೂ ದೇವಾಲಯಗಳನ್ನು ಒಟ್ಟಾಗಿ 'ಹೊಯ್ಸಳರ ಧಾರ್ಮಿಕ ಪರಂಪರೆಯ ಸಮೂಹ' ಎಂದು ಯುನೆಸ್ಕೊ ಅಧಿಕೃತವಾಗಿ ಘೋಷಿಸಿದ್ದು, ಇದರಲ್ಲಿ ಹಾಸನ ಜಿಲ್ಲೆಯ ಬೇಲೂರಿನ ಚೆನ್ನಕೇಶವ ದೇವಾಲಯ, ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯ ಮತ್ತು ಮೈಸೂರು ಜಿಲ್ಲೆಯ ಸೋಮನಾಥಪುರದ ಕೇಶವ ದೇವಸ್ಥಾನ ಸೇರಿವೆ. ಇದರಿಂದ ರಾಜ್ಯದಲ್ಲಿ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಒಟ್ಟು ಸಂಖ್ಯೆ ನಾಲ್ಕಕ್ಕೇರಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣೆಯ (ಎ.ಎಸ್.ಐ.) ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿರುವ ಈ ದೇಗುಲಗಳನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ನಿರ್ಧಾರಕ್ಕೆ ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದ ಯುನೆಸ್ಕೊ ವಿಶ್ವ ಪರಂಪರೆ ಸಮಿತಿಯ 45 ನೇ ಅಧಿವೇಶದಲ್ಲಿ ಅಧಿಕೃತ ಸಮ್ಮತಿ ನೀಡಲಾಯಿತು.

ಈ ದೇವಾಲಯಗಳಲ್ಲಿ ಕಂಡುಬರುವ ಜೀವಕಳೆ ತುಂಬಿರುವ ಸುಂದರ ಶಿಲ್ಪಗಳು, ಕಲಾತ್ಮಕ ಕಲ್ಲಿನ ಕುಸುರಿ ಕೆಲಸ, ಪ್ರದಕ್ಷಿಣಾ ಪಥ, ವಿಶಾಲ ಶಿಲ್ಪಕಲಾ ಗ್ಯಾಲರಿ, ಬಹುಶ್ರೇಣಿಯ ಅಲಂಕಾರಿಕ ಪಟ್ಟಿಕೆಗಳು ಮತ್ತು ಸಳನ ಚರಿತ್ರೆಯನ್ನು ಸಾರಿ ಹೇಳುವ ಶಿಲ್ಪ ಈ ದೇವಾಲಯಗಳ ವೈಶಿಷ್ಟ್ಯತೆ. ಈ ದೇವಾಲಯಗಳ ಶಿಲ್ಪಕಲಾ ಪ್ರೌಢಿಮೆ ಹಿಂದೂ ದೇವಾಲಯ ನಿರ್ಮಾಣ ಶಾಸ್ತ್ರದ ಬೆಳವಣಿಗೆಯ ಒಂದು ಮಹತ್ವದ ಕಾಲಘಟ್ಟವನ್ನು ಪ್ರತಿನಿಧಿಸುತ್ತದೆ ಎಂದು ಯುನೆಸ್ಕೊ ಜಾಲತಾಣ ಉಲ್ಲೇಖಿಸಿದೆ.

ಕರ್ನಾಟಕದ ಈ ಹೆಮ್ಮೆಯ ಪಾರಂಪರಿಕ ತಾಣಗಳಿಗೆ ಯುನೆಸ್ಕೊ ಮಾನ್ಯತೆ ದೊರಕಿರುವ ಸಂಗತಿ ಎಲ್ಲೆಡೆ ಸಂತಸದ ಹೊನಲು ಸೃಷ್ಟಿಸಿದೆ. ಈ ಕುರಿತು ಹರ್ಷ ವ್ಯಕ್ತಪಡಿಸುತ್ತ ತಮ್ಮ ಟ್ವೀಟರ್ ಖಾತೆಯಲ್ಲಿ ಪ್ರತಿಕ್ರಿಯೆ ನೀಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರು “ಕಾಲಾತೀತ ಸೌಂದರ್ಯ ಮತ್ತು ಸೂಕ್ಷ್ಮ ಶಿಲಾ ಕೆತ್ತನೆ ಕಾರ್ಯಕ್ಕೆ





Downloaded From:www.kpscvaani.com

ಹೆಸರಾಗಿರುವ ಹೊಯ್ಸಳರ ದೇವಾಲಯಗಳು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನಮ್ಮ ಪೂರ್ವಿಕರ ಅಸಾಧಾರಣ ಕಲಾಕೌಶಲ್ಯದ ಪ್ರತೀಕಗಳೆನಿಸಿವೆ" ಎಂದು ಹೇಳಿದ್ದಾರೆ.

ಅದೇ ರೀತಿ ಈ ಕುರಿತು ಸಂತಸ ವ್ಯಕ್ತಪಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, "ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಕರುನಾಡಿನ ಹೊಯ್ಸಳರ ಕಾಲದ ದೇವಾಲಯಗಳು ಸೇರ್ಪಡೆಗೊಂಡಿರುವುದು ಖುಷಿಯ ಜೊತೆಗೆ ಹೆಮ್ಮೆಯ ಸಂಗತಿ ಕೂಡ. ನಾಡಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ವಿಶ್ವಮಟ್ಟದ ಮೂಲಸೌಲಭ್ಯ ಮತ್ತು ಸುರಕ್ಷತೆ ಒದಗಿಸಲು ನಮ್ಮ ಸರಕಾರ ಕಾರ್ಯಪ್ರವೃತ್ತವಾಗಿದೆ" ಎಂದಿದ್ದಾರೆ.

ಈ ನಿರ್ಧಾರವನ್ನು ಸ್ವಾಗತಿಸಿದ ರಾಜ್ಯ ಪ್ರವಾಸೋದ್ಯಮ ಸಚಿವರಾದ ಎಚ್. ಕೆ. ಪಾಟೀಲ್ ಅವರು ಈ ಪ್ರತಿಷ್ಠಿತ ಮಾನ್ಯತೆ ಸಿಗುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. 'ಕನ್ನಡ ನಾಡಿನ ಕಲೆ, ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ಈ ತಾಣಗಳಿಗೆ ವರ್ಷಗಳ ಹಿಂದೆಯೇ ಯುನೆಸ್ಕೊ ಮಾನ್ಯತೆ ಸಿಗಬೇಕಿತ್ತು. ಅದಕ್ಕಾಗಿ 2014ರಿಂದಲೇ ಪ್ರಯತ್ನ ನಡೆದಿತ್ತು" ಎಂದವರು ಹೇಳಿದ್ದಾರೆ.

**ಹೊಯ್ಸಳ ಸಾಮ್ರಾಜ್ಯ**

ಕ್ರಿ. ಶ. 10 ರಿಂದ 14ನೇ ಶತಮಾನದ ತನಕ ದಕ್ಷಿಣ ಭಾರತದ ಬಹುದೊಡ್ಡ ಪ್ರದೇಶದ ಮೇಲೆ ಆಳ್ವಿಕೆ ನಡೆಸಿದ್ದ ಹೊಯ್ಸಳ ಸಾಮ್ರಾಜ್ಯ ಭಾರತದ ಇತಿಹಾಸದಲ್ಲಿ ಕನ್ನಡಿಗರ ರಾಜಕೀಯ ಮತ್ತು ಸೈನ್ಯ ಶಕ್ತಿಯ ಪ್ರತೀಕವೆಂದೇ ಗುರುತಿಸಲ್ಪಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ವಾಸ್ತುಕಲೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಹೊಯ್ಸಳರ ಆಳ್ವಿಕೆಯ ಸಮಯ ಮಹತ್ವದ ಕಾಲಘಟ್ಟ. ಇಂದಿನ ದಿನಮಾನಗಳಲ್ಲಿ ಕೂಡ ಶಿಲ್ಪಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಅವರ ಗಮನಾರ್ಹ ಕೊಡುಗೆಯ ಕಾರಣಕ್ಕೆ ಹೊಯ್ಸಳರನ್ನು ಪ್ರಧಾನವಾಗಿ ಸ್ಮರಿಸಲಾಗುತ್ತದೆ. ಅವರ ಕಾಲಾವಧಿಯಲ್ಲಿ ವಿಕಸಿತಗೊಂಡ ಹೊಯ್ಸಳ ವಾಸ್ತುಶೈಲಿ ಸಮಗ್ರ ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ವಾಸ್ತು ವಿಜ್ಞಾನದ ಮೆರುಗನ್ನು ಹೆಚ್ಚಿಸಿತು.

**ವಿಶಿಷ್ಟ ವಾಸ್ತುಶೈಲಿ**

ಹಾಗೆ ನೋಡಿದರೆ, ಭಾರತದ ಶಿಲ್ಪಕಲೆ ಮತ್ತು ವಾಸ್ತು ವಿಜ್ಞಾನದ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಮಹತ್ವದ ಸ್ಥಾನವಿದೆ. ಶಿಲ್ಪಕಲೆ ಮತ್ತು ವಾಸ್ತು ವಿಜ್ಞಾನ ಕ್ಷೇತ್ರದಲ್ಲಿ ಇಲ್ಲಿ ನಡೆದಿರುವಷ್ಟು ಪ್ರಯೋಗಗಳು ಮತ್ತು ಬೆಳವಣಿಗೆಗಳು ಪ್ರಾಯಶಃ ಇಡೀ ಭಾರತದ ಬೇರಾವ ಪ್ರದೇಶದಲ್ಲೂ ನಡೆದಿರಲಿಕ್ಕಿಲ್ಲ. ಇಲ್ಲಿ ಆಳ್ವಿಕೆ ನಡೆಸಿದ ಪ್ರತಿಯೊಂದು ರಾಜ ಮನೆತನ ಕೂಡ ಶಿಲ್ಪಕಲಾ ಕ್ಷೇತ್ರದ ಶ್ರೀಮಂತಿಕೆ ಹೆಚ್ಚಿಸುವ ನಿಟ್ಟಿನಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ. ಈ ಕ್ಷೇತ್ರದಲ್ಲಿ ನಡೆದ ಅನೇಕಾನೇಕ ಪ್ರಯೋಗಗಳು ಹೊಯ್ಸಳರ ಕಾಲದಲ್ಲಿ ಪರಾಕಾಷ್ಠೆ ಮುಟ್ಟಿದವು. ಇದು ಇಡೀ ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ವಾಸ್ತು ವಿಜ್ಞಾನ, ಅದರಲ್ಲೂ ಮುಖ್ಯವಾಗಿ ದೇವಾಲಯ ನಿರ್ಮಾಣ ಶಾಸ್ತ್ರದ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಈ ವಿಶಿಷ್ಟ ವಾಸ್ತು ವಿಜ್ಞಾನ ಶಾಸ್ತ್ರ ಹೊಯ್ಸಳ ಶೈಲಿಯೆಂದೇ ಹೆಸರಾಗಿದೆ.

ಹೊಯ್ಸಳ ಶೈಲಿ ವಿಕಸಿತಗೊಂಡಿದ್ದು ಕ್ರಿ.ಶ. 1050 ರಿಂದ ಕ್ರಿ. ಶ. 1300 ರ ಅವಧಿಯಲ್ಲಿ. ಆಗಿನ ಕಾಲದಲ್ಲಿ ಇದೊಂದು ವಿನೂತನ ಪ್ರಯೋಗವಾಗಿದ್ದು, ಅಂದು ಪ್ರಚಲಿತವಿದ್ದ ದಕ್ಷಿಣ ಭಾರತದ ದ್ರಾವಿಡ, ಮಧ್ಯ ಭಾರತದ ಭೂಮಿಜ, ಉತ್ತರ ಮತ್ತು ಪಶ್ಚಿಮ ಭಾರತದ ನಾಗರ ಹಾಗೂ ಕಲ್ಯಾಣ ಚಾಲುಕ್ಯರ ಕರ್ನಾಟ ದ್ರಾವಿಡ ಶಿಲ್ಪಕಲಾ ಶೈಲಿಗಳ ವಿಶಿಷ್ಟ ಅಂಶಗಳನ್ನು ಬಹಳ ಜಾಗರೂಕತೆಯಿಂದ ಆರಿಸಿಕೊಂಡು ಈ ಶೈಲಿಯನ್ನು ರೂಪಿಸಲಾಗಿತ್ತು. ನಕ್ಷತ್ರಾಕಾರದ ವೇದಿಕೆಯ ಮೇಲೆ ನೆಲೆನಿಂತಿರುವ ದೇವಾಲಯ ಸಂಕೀರ್ಣ ಹೊಯ್ಸಳ ಶೈಲಿಯ ವೈಶಿಷ್ಟ್ಯತೆ. ಈ ದೇಗುಲಗಳ ನಿರ್ಮಾಣದಲ್ಲಿ ಬಳಪದ ಕಲ್ಲುಗಳನ್ನು ಪ್ರಧಾನವಾಗಿ ಬಳಸಲಾಗಿದೆ.

ಯುನೆಸ್ಕೊ ಮಾನ್ಯತೆ ಪಡೆದಿರುವ ಈ ಮೂರು ದೇವಾಲಯಗಳು ಹೊಯ್ಸಳ ವಾಸ್ತು ಶೈಲಿಯ ಅನುಪಮ ನಿರ್ಮಿತಿಗಳೆನಿಸಿವೆ.

**ಚೆನ್ನಕೇಶವ ದೇವಾಲಯ– ಬೇಲೂರು**

ಹಾಸನ ಜಿಲ್ಲೆಯ ಯಗಚಿ ನದಿ ತಟದಲ್ಲಿ ನೆಲೆನಿಂತಿರುವ ಬೇಲೂರು ಸುಮಾರು ಒಂದು ದಶಕಗಳ ಕಾಲ ಹೊಯ್ಸಳರ ರಾಜಧಾನಿಯಾಗಿದ್ದ ಪಟ್ಟಣ. ವೈಷ್ಣವ ಪಂಥದ ಪ್ರಧಾನ ಕ್ಷೇತ್ರಗಳಲ್ಲಿ ಒಂದಾಗಿರುವ ಇಲ್ಲಿನ ಚೆನ್ನಕೇಶವ ದೇವಾಲಯದಲ್ಲಿ ವಿಷ್ಣುವಿನ ಅವತಾರವೆನಿಸಿರುವ 'ಸುಂದರಾಂಗ ಶ್ರೀಕೃಷ್ಣ'ನನ್ನು ಆರಾಧಿಸಲಾಗುತ್ತದೆ. ತಲಕಾಡು ಕದನದಲ್ಲಿ ಹೊಯ್ಸಳರು ಚೋಳರ ವಿರುದ್ಧ ಸಾಧಿಸಿದ ಗೆಲುವಿನ ದ್ಯೋತಕವಾಗಿ ನಿರ್ಮಿಸಲಾಗಿದ್ದ ಈ ದೇವಾಲಯವನ್ನು ಪೂರ್ಣಗೊಳಿಸಲು 103 ವರ್ಷಗಳು ಹಿಡಿದಿದ್ದವು.

ಈ ದೇವಾಲಯ ಕಲಾಸಕ್ತರ ಸ್ವರ್ಗ. ಇಲ್ಲಿನ ಶಿಲ್ಪಕಲಾ ನೈಪುಣ್ಯತೆಗೆ ಸರಿಸಾಟಿಯೇ ಇಲ್ಲ. ಇಲ್ಲಿನ ಉತ್ಕೃಷ್ಟ ಮಾದರಿ ಹಾಗೂ ನಯನಾಜೂಕಿನ ಕೆತ್ತನೆಯನ್ನು 'ಕಲ್ಲಿನಲ್ಲಿ ಮೂಡಿದ ಕವಿತೆ' ಎಂದೇ ಬಣ್ಣಿಸಲಾಗುತ್ತದೆ. ವೈವಿಧ್ಯಮಯ ಶಿಲ್ಪಗಳಿಂದ ಅಲಂಕೃತಗೊಂಡಿರುವ ಎತ್ತರದ ಗೋಪುರ, ವಿಷ್ಣು ವಾಹನ ಗರುಡನ ರೆಕ್ಕೆ ಚಾಚಿರುವ ವಿಗ್ರಹ ಮತ್ತು ಹೊರ ಪ್ರಾಂಗಣದಲ್ಲಿ ಅಡಿಪಾಯವಿಲ್ಲದೆ ನಿಂತಿರುವ ಮತ್ತು ಗುರುತ್ವಾಕರ್ಷಣ ಶಕ್ತಿಗೆ ಸವಾಲೊಡ್ಡುವ ಶಿಲಾಸ್ತಂಭ ಇಲ್ಲಿನ ಪ್ರಧಾನ ಆಕರ್ಷಣೆಗಳು. ದೇವಾಲಯದ ಪ್ರಾಕಾರಗಳನ್ನು ಅಲಂಕರಿಸಿರುವ ಶಿಲ್ಪಗಳ ಪೈಕಿ ಪೌರಾಣಿಕ ಕಥಾವಳಿ ಅದರಲ್ಲೂ ಮುಖ್ಯವಾಗಿ ರಾಮಾಯಣ ಮತ್ತು ಮಹಾಭಾರತದಿಂದ ಆಯ್ದ ಕಥನಗಳನ್ನು ವರ್ಣಿಸುವ ಶಿಲ್ಪಗಳು ಪ್ರಧಾನವಾಗಿ ಕಂಡುಬರುತ್ತವೆ. ಇದರೊಂದಿಗೆ, ಯುದ್ಧದ ದೃಶ್ಯಗಳು, ಸಂಗೀತಗಾರರು, ವಿವಿಧ ಭಂಗಿಯ ನೃತ್ಯಗಾರ್ತಿಯರು, ಅಲಂಕಾರಿಕ ರಚನೆಗಳು ಇತ್ಯಾದಿ ರಚನೆಗಳು ಕೂಡ ದೇವಾಲಯದ ಪ್ರಾಕಾರಗಳನ್ನು





Downloaded From:www.kpscvaani.com





ಆವರಿಸಿವೆ. ಸಂಗೀತ, ನೃತ್ಯ ಮೊದಲಾದವುಗಳಲ್ಲಿ ನಿರತರಾಗಿರುವ ಮದನಿಕೆಯರ 38 ವಿಗ್ರಹಗಳು ಇಲ್ಲಿನ ಮತ್ತೊಂದು ಚಿತ್ತಾಕರ್ಷಕ ರಚನೆ. ಅವರ ಶೃಂಗಾರ, ವಸ್ತ್ರಾಭರಣಗಳು, ಕೇಶವಿನ್ಯಾಸ ಇತ್ಯಾದಿಗಳನ್ನು ಅದೆಷ್ಟು ಸೂಕ್ಷ್ಮವಾಗಿ ಕೆತ್ತಲಾಗಿದೆ ಎಂದರೆ, ಅವುಗಳು ನೈಜ್ಯ ವ್ಯಕ್ತಿಗಳೇ ಎಂಬಂತೆ ಭಾಸವಾಗುವಷ್ಟು.

**ಹೊಯ್ಸಳೇಶ್ವರ ದೇವಾಲಯ– ಹಳೇಬೀಡು**

ಪಶ್ಚಿಮ ಘಟ್ಟ ಶ್ರೇಣಿಯ ಪೂರ್ವ ದಿಕ್ಕಿನ ತಪ್ಪಲು ಪ್ರದೇಶದಲ್ಲಿರುವ ಹಳೇಬೀಡು ಇತಿಹಾಸದಲ್ಲಿ ದ್ವಾರಸಮುದ್ರ ಅಥವಾ ದೋರಸಮುದ್ರ ಎಂದೇ ಪ್ರಸಿದ್ಧ. ಕ್ರಿ. ಶ. 11 ನೇ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದಿತ್ತು. ಇಲ್ಲಿರುವ ಹಲವಾರು ದೇವಾಲಯಗಳ ಪೈಕಿ ದ್ವಿಕೂಟ ರಚನೆಯಾಗಿರುವ ಹೊಯ್ಸಳೇಶ್ವರ ದೇವಾಲಯ ಪ್ರಧಾನ ಆಕರ್ಷಣೆ. ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ಇಲ್ಲಿನ ಆರಾಧ್ಯ ದೈವವಾಗಿದ್ದು, ಇವುಗಳು ದೈವೀ ಶಕ್ತಿಯ ಪುರುಷ ಮತ್ತು ಸ್ತ್ರೀ ಸ್ವರೂಪವನ್ನು ಪ್ರತಿನಿಧಿಸುತ್ತವೆ. ಈ ದೇವಾಲಯದ ವಾಸ್ತು ಶಿಲ್ಪ ಬಹುತೇಕ ಬೇಲೂರು ದೇವಾಲಯದ ವಾಸ್ತುಶಿಲ್ಪದ ಮಾದರಿಯಲ್ಲೇ ಇದೆ. ಬೇಲೂರು ದೇವಾಲಯದ ಒಳಾವರಣದ ಶಿಲ್ಪವೈಭವ ನಮ್ಮ ಗಮನ ಸೆಳೆದರೆ, ಹಳೇಬೀಡು ದೇವಾಲಯ ಹೊರಾವರಣದ ಶಿಲ್ಪಕಲಾ ವೈಭವಕ್ಕೆ ಹೆಸರುವಾಸಿ.

ದೇವಾಲಯದ ಹೊರ ಪ್ರಾಕಾರದಲ್ಲಿ ಹಿಂದೂ ದೇವ–ದೇವತೆಯರು, ಋಷಿಗಳು, ಚಿತ್ತ ವಿಚಿತ್ರ ಪ್ರಾಣಿಗಳು, ಹೊಯ್ಸಳ ಅರಸರುಗಳ ಜೀವನ ಚರಿತ್ರೆ ಬಿಂಬಿಸುವ ಶಿಲ್ಪಗಳು ಮತ್ತು ಇತರ ರಚನೆಗಳು ರಾರಾಜಿಸುತ್ತಿವೆ. ಒಂದೊಂದು ಶಿಲ್ಪವೂ ಸೂಕ್ಷ್ಮ ಕುಸುರಿ ಕೆಲಸದಿಂದ ಸಮೃದ್ಧವಾಗಿದೆ. ದೇವಾಲಯದ ಇತರ ಕೆತ್ತನೆ ಕೆಲಸಗಳ ಪೈಕಿ ಐತಿಹಾಸಿಕ ಮಹತ್ವದ ಯುದ್ಧಗಳು, ಬಾಲ ಗೋಪಾಲನ ಲೀಲೆ, ಶಿವ–ಪಾರ್ವತಿ ಪರಿಣಯ, ಕೈಲಾಸ ಪರ್ವತ ಎತ್ತಿ ಹಿಡಿದ ಅಸುರ ದೊರೆ ರಾವಣನ ಪರಾಕ್ರಮ ಮೊದಲಾದ ಘಟನಾವಳಿಗಳನ್ನು ಬಿಂಬಿಸುವ ರಚನೆಗಳು ನಮ್ಮ ಗಮನ ಸೆಳೆಯುತ್ತವೆ. ದೇವಾಲಯವು ಎರಡು ಗರ್ಭಗೃಹಗಳನ್ನು ಹೊಂದಿದ್ದು, ಒಂದರಲ್ಲಿ ಶಿವ ಮತ್ತು ಇನ್ನೊಂದರಲ್ಲಿ ಪಾರ್ವತಿ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ಪ್ರತಿಯೊಂದು ಗರ್ಭಗೃಹಕ್ಕೆ ಮುಖ ಮಾಡಿ ಬೃಹತ್ ನಂದಿ ವಿಗ್ರಹಗಳು ಆಸೀನವಾಗಿವೆ.

**ಕೇಶವ ದೇವಸ್ಥಾನ– ಸೋಮನಾಥಪುರ**

ಸೋಮನಾಥಪುರ ಮೈಸೂರು ನಗರದಿಂದ ಪೂರ್ವಕ್ಕೆ ಸುಮಾರು 38 ಕಿ. ಮೀ. ದೂರದಲ್ಲಿ ಕಾವೇರಿ ನದಿ ತೀರದಲ್ಲಿ ನೆಲೆನಿಂತಿರುವ ಸಣ್ಣ ಪಟ್ಟಣ. ಇಲ್ಲಿನ ಕೇಶವ ದೇವಾಲಯ ಕೂಡ ವೈಷ್ಣವ ಪಂಥದ ಕೇಂದ್ರವೆನಿಸಿದೆ. ಅಷ್ಟೊಂದು ಪ್ರಸಿದ್ಧಿ ಪಡೆಯದ ಈ ದೇವಾಲಯದ ಸಮೃದ್ಧ ಕುಸುರಿ ಕೆತ್ತನೆ ಕಾರ್ಯ ಹೊಯ್ಸಳರ ಶಿಲ್ಪಕಲಾ ಪ್ರೌಢಿಮೆಗೆ ಜ್ವಲಂತ ಸಾಕ್ಷಿ.

ನಕ್ಷತ್ರಾಕೃತಿಯ ವೇದಿಕೆಯ ಮೇಲೆ ನಿರ್ಮಾಣವಾಗಿರುವ ಈ ದೇವಾಲಯ ಮೂರು ಗೋಪುರಗಳನ್ನು ಹೊಂದಿರುವ ತ್ರಿಕೂಟ ರಚನೆ. ದೇವಾಲಯ ಹೊರ ಗೋಡೆಗಳನ್ನು ನಾಜೂಕಿನ ಅಲಂಕೃತ ಕೆತ್ತನೆಯ ಪಟ್ಟಿಕೆಗಳು ಅಲಂಕರಿಸಿವೆ. ನಯನಾಜೂಕಿನಿಂದ ಕೆತ್ತಲಾಗಿರುವ ದೇವ–ದೇವತೆಗಳ ವಿಗ್ರಹಗಳು, ಪೌರಾಣಿಕ ಪ್ರಸಂಗಗಳನ್ನು ವಿವರಿಸುವ ಶಿಲ್ಪಗಳು ಮತ್ತು ಒಳಭಾವಣಿಯನ್ನು ಅಲಂಕರಿಸಿರುವ ಸೂಕ್ಷ್ಮ ಕುಸುರಿ ಕೆತ್ತನೆ ಅಷ್ಟೇ ನಯನ ಮನೋಹರ. ದೇವಾಲಯದ ಗರ್ಭಗುಡಿಯಲ್ಲಿ ಸುಂದರವಾಗಿ ಕೆತ್ತಲಾಗಿರುವ ಕೇಶವ, ಜನಾರ್ಧನ ಮತ್ತು ವೇಣುಗೋಪಾಲ ದೇವರ ವಿಗ್ರಹಗಳಿದ್ದವು. ಇವುಗಳ ಪೈಕಿ ಕೇಶವ ದೇವರ ವಿಗ್ರಹ ಇಂದು ಲಭ್ಯವಿಲ್ಲ. ಉಳಿದೆರಡು ವಿಗ್ರಹಗಳ ಆರಾಧನೆ ನಡೆಯುತ್ತಿದೆ.

**ಸಾಂಸ್ಕೃತಿಕ ಪ್ರವಾಸೋದ್ಯಮಕ್ಕೆ ಇಂಬು**

ಹೊಯ್ಸಳ ದೇವಾಲಯಗಳಿಗೆ ಯುನೆಸ್ಕೊ ಮಾನ್ಯತೆ ದೊರಕಿದ ಬಳಿಕ ಭಾರತದಲ್ಲಿರುವ ಒಟ್ಟು ವಿಶ್ವ ಪಾರಂಪರಿಕ ತಾಣಗಳ ಸಂಖ್ಯೆ 42ಕ್ಕೇರಿದೆ. ಯುನೆಸ್ಕೊ ಮಾನ್ಯತೆ ದೊರಕಿದ ಬಳಿಕ ಈ ಐತಿಹಾಸಿಕ ಸ್ಮಾರಕಗಳಿಗೆ ಜಾಗತಿಕ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸ್ಥಾನಮಾನ ಸಿಗುವುದರಲ್ಲಿ ಸಂಶಯವಿಲ್ಲ. ಇದರಿಂದ ಸಾಂಸ್ಕೃತಿಕ ಪ್ರವಾಸೋದ್ಯಮ ಬೆಳೆಸಲು ಮತ್ತು ನಮ್ಮ ಶ್ರೀಮಂತ ಪರಂಪರೆಯನ್ನು ವಿಶ್ವ ಮಟ್ಟದಲ್ಲಿ ಪರಿಚಯಿಸಲು ಬಹಳಷ್ಟು ಅನುಕೂಲಕರವೆನಿಸಲಿದೆ. ಜೊತೆಯಲ್ಲಿ, ಭಾರತದ ಸಮೃದ್ಧ ಸಂಸ್ಕೃತಿಯನ್ನು ಅರಿಯಲು ಹಾಗೂ ಅದರ ಪ್ರತ್ಯಕ್ಷ ಅನುಭವ ಹೊಂದಲು ಉತ್ಸುಕರಾಗಿರುವ ದೇಶ ವಿದೇಶಗಳ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯಲು ಕೂಡ ಸಾಧ್ಯ.

ಇಷ್ಟೇ ಅಲ್ಲದೆ, ಯುನೆಸ್ಕೊ ಮಾನ್ಯತೆಯಿಂದ ಇತರ ಹಲವಾರು ಲಾಭಗಳೂ ಇವೆ. ವಿಶ್ವ ಪಾರಂಪರಿಕ ಸಂರಕ್ಷಣಾ ನಿಯಮಗಳ ಅಡಿ ಈ ಸ್ಮಾರಕಗಳಿಗೆ ಕಾನೂನಿನ ಸಂರಕ್ಷಣೆ ಮತ್ತು ವಿಶ್ವ ಪಾರಂಪರಿಕ ನಿಧಿಯಿಂದ ಹೆಚ್ಚಿನ ಅನುದಾನ ಲಭಿಸಲಿದೆ. ಪ್ರವಾಸೋದ್ಯಮ ಆದಾಯ ಕೂಡ ಗಣನೀಯವಾಗಿ ಹೆಚ್ಚಳ ಕಾಣಲಿದೆ. ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರವಾಸೋದ್ಯಮದ ಪರಿಕಲ್ಪನೆ ಜಗತ್ತಿನಾದ್ಯಂತ ಜನಪ್ರಿಯಗೊಳ್ಳುತ್ತಿದೆ. ಇದರ ಲಾಭ ಪಡೆಯಲು ಪ್ರವಾಸಿಗರಿಗೆ ಜಾಗತಿಕ ಮಟ್ಟದ ಸೌಲಭ್ಯಗಳು ಮತ್ತು ಸುರಕ್ಷತೆ ಒದಗಿಸುವ ನಿಟ್ಟಿನಲ್ಲಿ ಹತ್ತು ಹಲವು ಉಪಕ್ರಮಗಳನ್ನು ಕೈಗೊಳ್ಳುವ ಬಗ್ಗೆ ರಾಜ್ಯ ಸರಕಾರ ಕೂಡ ಅಧಿಕೃತ ಘೋಷಣೆ ಮಾಡಿದೆ. ಇದರಿಂದ ಪ್ರವಾಸೋದ್ಯಮಕ್ಕೆ ನವ ಚೈತನ್ಯ ದೊರಕುವ ಜೊತೆಯಲ್ಲಿ ಸ್ಥಳೀಯ ಆರ್ಥಿಕತೆ ವರ್ಧಿಸಲು ಕೂಡ ಸಹಕಾರಿಯಾಗಲಿದೆ.



Downloaded From:www.kpscvaani.com

# ಅಂಧಕಾರವನ್ನು ಹೋಗಲಾಡಿಸುವ ಹಬ್ಬವೇ ದೀಪಾವಳಿ





**ನಮ್ಮ ಮನದ ಒಳಗಿರುವ ಅಂಧಕಾರ ಹಾಗೂ ಅಸಮಾನತೆಯನ್ನು ಹಣತೆಯ ಬೆಳಕಿನ ಮೂಲಕ ಹೋಗಲಾಡಿಸುವುದೇ ನಿಜವಾದ ದೀಪಾವಳಿ.**

ವೆಂಕಟೇಶ ಕೆ. ಜನಾದ್ರಿ

"ತಮಸೋಮ ಜ್ಯೋತಿರ್ಗಮಯ" ಎಂಬಂತೆ ಅಶಾಂತಿ, ಅನ್ಯಾಯ ಅಜ್ಞಾನ, ದಟ್ಟ ದಾರಿದ್ರ್ಯ ಕಷ್ಟ ಕಾರ್ಪಣ್ಯ, ಅಸಮಾನತೆಗಳೆಂಬ ಅನಿಷ್ಟ ಕತ್ತಲೆಯನ್ನು ದೀಪದ ಬೆಳಕಿನಿಂದ ಹೋಗಲಾಡಿಸಿ ಅಲ್ಲಿ ಶಾಂತಿ, ನ್ಯಾಯ, ಜ್ಞಾನ, ಸುಖ, ಸಂತಸ ಹಾಗೂ ಸಮಾನತೆಯನ್ನು ಬೆಳಗಿಸುವ ಹಬ್ಬವೇ ದೀಪಾವಳಿ ಹಬ್ಬ.

ಕುಂಬಾರ ಮಾಡಿದ ಪ್ರಣತಿಯಲ್ಲಿ, ಗಾಣಿಗನ ಎಣ್ಣೆಯನ್ನು ತುಂಬಿ, ಒಕ್ಕಲಿಗ ಬೆಳೆದ ಹತ್ತಿಯನ್ನು ಹೊಸೆದ ಬತ್ತಿಗೆ, ವೈಶ್ಯನ ಅಂಗಡಿಯಿಂದ ತಂದ ದೀಪದ ಕಡ್ಡಿಯಿಂದ, ವಿಪ್ರನೊಬ್ಬ ಹಚ್ಚಿದ ಆ ಜ್ಯೋತಿಗೆ ಅದಾವ ಜಾತಿ?' ಎಂಬುದೇ ದೀಪಾವಳಿಯಲ್ಲಿ ಹಚ್ಚುವ ಜ್ಯೋತಿಯ ಸಂದೇಶವಾಗಿದೆ. ಆ ಪ್ರಕಾರ ದೀಪಾವಳಿ ಹಬ್ಬವು ಗಾಡಾಂಧಕಾರದ ವಿವಿಧ ಅಸಮಾನತೆಯ ಕತ್ತಲೆಯನ್ನು ದೀಪದ ಬೆಳಕಲ್ಲಿ ಕಳೆದು ಬೆಳಗಿಸುವ ಬೆಳಕಿನ ಪ್ರಗತಿಯ ದ್ಯೋತಕವಾಗಿದೆ.

ದೀಪಾವಳಿಯ ಈ ದೀಪಗಳು ಕತ್ತಲೆಯನ್ನು ಹೋಗಲಾಡಿಸುವ ಬೆಳಕಷ್ಟೇ ಅಲ್ಲ, ಬೆಳಕಲ್ಲಿರುವ ಕತ್ತಲೆಯನ್ನು ತೋರಿಸುವ ದಿವ್ಯ ಬೆಳಕಾಗಿವೆ. ಅಂದರೆ ಕೆಲವೊಮ್ಮೆ ಬಹಿರಂಗದಲ್ಲಿ ಒಳ್ಳೆಯ ಬೆಳಕು ಇರುವುದೆಂಬ ಭ್ರಮೆ ಇರುತ್ತದೆ. ಆದರೆ ಅದು ಎಷ್ಟೋ ಸಲ ತೋರಿಕೆಯ ಬೆಳಕಾಗಿರುತ್ತದೆ. ಬಹಿರಂಗದಲ್ಲಿ ಬೆಳಕಿದ್ದು ಅಂತರಂಗದಲ್ಲಿ ಕತ್ತಲೆಯ ಗೂಡಿದ್ದರೆ ಅಲ್ಲಿ ಏನು ಉಪಯೋಗ. ಬಹಿರಂಗ ಮತ್ತು ಅಂತರಂಗವೆರಡು ದೀಪದಿಂದ ಬೆಳಗುವಂತಿರಬೇಕು. ಇದನ್ನೆ ಶರಣರು ಬೆಳಗಿನೊಳಗಣ ಮಹಾ ಬೆಳಗು ಎಂದು ಗುರುತಿಸಿದ್ದರು.

ನಾ ಹಚ್ಚುವ ಜ್ಯೋತಿಯು ಬೆಳಕನ್ನು ಪಸರಿಸುತ್ತದೆಂಬ ಭ್ರಮೆಯಿಂದಲ್ಲ, ಆ ಬೆಳಕಲ್ಲಿ ನನ್ನನ್ನು ನೀನು, ನಿನ್ನನ್ನು ನಾನು ಅರಿಯುವುದಾಗಿದೆ ಎನ್ನುವುದು ಚಿಂತಕರ ವಿಚಾರ. ಅಂದರೆ ಬಹಿರಂಗದಲ್ಲಿ ಒಬ್ಬರನ್ನೊಬ್ಬರು ಅರಿಯುವುದೆಂದು ಒಂದರ್ಥವಾದರೆ, ನಮ್ಮೊಳಗಿರುವ ಆ ದೇವನನ್ನು ನಾನು ಅರಿಯುವುದು ಮತ್ತು ನನ್ನನ್ನು ನನ್ನೊಳಗೇ ಇರುವ ಆತ ಅರಿಯುವುದೆಂಬ ಆಧ್ಯಾತ್ಮದ ಮತ್ತೊಂದೂ ಅರ್ಥವೂ ಇದೆ. ಹೀಗೆ



Downloaded From:www.kpscvaani.com



ಬೆಳಕು ಅರಿವಿನ ಸಂಕೇತವಾಗಿದೆ.

ಪ್ರತಿಯೊಬ್ಬರಲ್ಲಿರುವ ಆಂತರ್ಯದ ಅರಿವು ಕಣ್ತೆರೆದಾಗ ಆತನೇ ದೇವನಾಗುತ್ತಾನೆ. ಆಗ ಹೊರಗಿನ ಬೆಳಕು ಕೇವಲ ಸಾಂಕೇತಿಕ ಬೆಳಕಾಗುತ್ತದೆ. ಆಂತರ್ಯದ ಬೆಳಕನ್ನು ಅರಿಯುವ ಮೂಲಕ ತಾನೇ ದೇವನೆಂಬ ಅರಿವಿನ ದೀಪವನ್ನಾತ ತನ್ನೊಳಗೇ ಆತ ಗುರುತಿಸಿಕೊಳ್ಳಬೇಕಷ್ಟೇ. ಅರಿವು ಕಣ್ತೆರೆಯದವರತ್ತ ದೇವನೂ ತಿರುಗಲಾರ. ಏಕೆಂದರೆ ತನ್ನನ್ನೇ ಪ್ರತಿನಿಧಿಸುವ ಜೀವಾತ್ಮನಲ್ಲಿಯೇ ದೇವನನ್ನು ಕಂಡುಕೊಳ್ಳಬಹುದೆಂಬ ಅರಿವು ಆತನಲ್ಲಿಲ್ಲದ ಕಾರಣ ದೇವನಿಗೂ ಅಲ್ಲಿ ಅನಾಸಕ್ತಿ. ಅದನ್ನೇ ಈ ದೀಪಾವಳಿ ಸಾಂಕೇತಿಸುತ್ತದೆ. ದೇವನೆಂಬ ಅರಿವಿನ ಬೆಳಕನ್ನು ಸಾಂಕೇತಿಸುವ ಜೀವಾತ್ಮ ನನ್ನೊಳಗೇ ಇರುವುದನ್ನು ಅರಿಯುವುದೇ ಈ ಬಹಿರಂಗದ ದೀಪಾವಳಿ.

ದೀಪಾವಳಿಯ ಆಚರಣೆಯ ಹಿಂದಿನ ಉದ್ದೇಶ ನಾವು ನಮ್ಮದೇ ಅರಿವಿನಿಂದ ಅಭಿವೃದ್ಧಿ ಹೊಂದುವುದಾಗಿದೆ. ಅದಕ್ಕೆ ಈ ದೀಪಾವಳಿಯ ದೀಪದಿಂದ ಪ್ರೇರಣೆ ಸಿಗಲಿ ಎಂಬುದಾಗಿದ್ದರೂ ಸಹ ನಾವು ಅಭಿವೃದ್ಧಿ ಹೊಂದಲು ಅನುಸರಿಸುವ ಪಥ ಯಾವುದು? ಎಂಬುದು ಮುಖ್ಯ. ನಮ್ಮ ಸುಖದಲ್ಲಿ, ನಾವು ಸುಖ ನೆಮ್ಮದಿಯನ್ನು ಅನುಭವಿಸುವಾಗ ನಮ್ಮ ಸಂಭ್ರಮದಲ್ಲಿ ಜಗದ ಯಾರೊಬ್ಬರೂ, ಯಾವ ಜೀವಿಯೂ ನೋವು–ಸಂಕಷ್ಟಗಳನ್ನು ಅನುಭವಿಸಿರಬಾರದು ಅದು ಮುಖ್ಯ. ಆಗ ನಮ್ಮ ಸಂಭ್ರಮಕ್ಕೆ ನಿಜವಾದ ಸುಖ ಸಿಗುತ್ತದೆ. ಇನ್ನೊಬ್ಬರ ಸಂಕಷ್ಟದಲ್ಲಿ ನಾನು ಸಂಭ್ರಮ ಪಡುವುದನ್ನು ನನ್ನೊಳಗಿರುವಾತ ಹೇಗೆ ತಾನೇ ಸಹಿಸಿಯಾನು? ಏಕೆಂದರೆ ಆತನಿಗೆ ನನ್ನ ಹಾಗೆ ಸಕಲ ಜೀವಿಗಳು ತಾನೆ? ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಎಲ್ಲಾ ಹೂವುಗಳು ನಳನಳಿಸುತ್ತಿದ್ದರೆ ಮಾತ್ರ ಆ ತೋಟದ ಅಂದ ಹೆಚ್ಚುತ್ತದೆ.

ಹಾಗೆಯೇ ನಾವು ಬದುಕುವ ರೀತಿ ಇತರರಿಗೆ ಪ್ರತಿಕೂಲವಾಗದೇ ಅದವರಿಗೆ ಮಾದರಿಯಾಗಿರಬೇಕು. ಇತರರು ತೃಪ್ತಿ ಹೊಂದುವ ಮೂಲಕ ನಾವು ಯಶ ಸಾಧಿಸಬೇಕು. ನಾವು ಸಂಭ್ರಮಿಸಿ ಬೆಳಕನ್ನು ಬೆಳಗಬೇಕು. ಅದಕ್ಕಾಗಿ ನಾವು ಪರಸ್ಪರರು ದ್ವೀಪವಾಗುವ ಬದಲಿಗೆ ದೀಪವಾಗಿರಬೇಕೆಂದು ಬಲ್ಲವರ ಅನುಭವದ ಅನುಭಾವವಾಗಿದೆ. ದ್ವೀಪವಾಗಿ ನಮ್ಮಷ್ಟಕ್ಕೆ ನಾವು ಇದ್ದು ಬಿಡುವುದಲ್ಲ. ನಾವು ಸ್ವತಃ ದೀಪವಾಗಿ ಇತರರಿಗಾಗಿ ನಮ್ಮ ಮನ ಮಿಡಿಯುತ್ತಿರಬೇಕು. ಇತರರಿಗಾಗಿ ಒಂದಿಷ್ಟು ನಾವು ನಮ್ಮ ತನುವನ್ನು ಸವೆಸಬೇಕು. ಇದೇ ಸಮಾಜಮುಖಿ ಚಿಂತನೆ. ಇದುವೇ ಶರಣ ಜೀವಿಗಳ ಜಂಗಮ ಸೇವೆ.

ಮಹಾತ್ಮ ಗಾಂಧೀಜಿ ಹೇಳುವಂತೆ "ನೀನು ಇತರರಿಗೆ ಏನು ಮಾಡುವೆಯೋ ಆ ದೇವನೂ ನಿನಗೆ ಅದನ್ನೇ ದಯಪಾಲಿಸುವನು" ಇತರರಿಗೆ ಒಳ್ಳೆಯದನ್ನು ನೀನು ಬಯಸಿದರೆ ನಿನಗೆ ಒಳ್ಳೆಯದಾಗುವುದರಲ್ಲಿ ನಿಸ್ಸಂಶಯವಿಲ್ಲ. ಅನ್ಯಾಯ–ಅನೀತಿ ಮಾರ್ಗದಿಂದ ಶ್ರೀಮಂತರಾಗಿ ಸುಖದ ಸುಪತ್ತಿಗೆಯಲ್ಲಿದ್ದರೂ ನೆಮ್ಮದಿಯಿಂದ ಸುಖವಾಗಿ ಬದುಕಲು ಸಾಧ್ಯವಾಗದಿರಬಹುದು. ಅರಿವೆಂಬ ದೀಪದ ಬೆಳಕಲ್ಲಿ ನ್ಯಾಯಯುತ ಮಾರ್ಗದ ಪಥವನ್ನಿಡಿದು ಸಾಗಿದ ವ್ಯಕ್ತಿ ಆಯಾ ದಿನದ ತನ್ನ ಅನ್ನವನ್ನು ತಾನೇ ಸಂಪಾದಿಸಿಕೊಂಡು ಅಗತ್ಯವಿರುವವರಿಗೊಂದಿಷ್ಟು ಕೊಟ್ಟು ಉಳಿದುದರಲ್ಲಿ ನಿಶ್ಚಿಂತೆಯಿಂದ ಊಟ ಮಾಡಿದಾಗ ಆತ ಅದರಲ್ಲಿ ಪ್ರಸಾದದ ರುಚಿಯನ್ನು ಸವಿಯಬಲ್ಲ, ಮತ್ತು ಸುಖವಾದ ನಿದ್ರೆಯನ್ನು ಸುಖಿಸಬಲ್ಲ.

## ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ

ದೀಪಾವಳಿ ಆಚರಣೆ ಸಂದರ್ಭದಲ್ಲಿ ಪಟಾಕಿಯಿಂದ ಉಂಟಾಗುವ ದುರಂತಗಳನ್ನು ತಡೆಯುವ ಸಲುವಾಗಿ ರಾಜ್ಯ ಸರ್ಕಾರವು ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಮಾಲಿನ್ಯ ತಡೆಯುವ ನಿಟ್ಟಿನಲ್ಲಿ ವಾಯು ಮತ್ತು ಶಬ್ದ ಮಾಲಿನ್ಯವನ್ನು ಉಂಟುಮಾಡುವ ಅಪಾಯಕಾರಿ ಪಟಾಕಿಗಳನ್ನು ನಿಷೇಧಿಸಿದ್ದು, ಹಸಿರು ಪಟಾಕಿಗೆ ಮಾತ್ರ ಅವಕಾಶ ನೀಡಿದೆ. ಇನ್ನು ದೀಪಾವಳಿ ಆಚರಣೆ ಮಾತ್ರವಲ್ಲದೆ, ಮದುವೆ, ದೇವರ ಉತ್ಸವ, ರಾಜಕೀಯ ಸಮಾವೇಶ ಮುಂತಾದ ಕಾರ್ಯಕ್ರಮಗಳಲ್ಲಿ ಕೂಡ ಅಪಾಯಕಾರಿ ಪಟಾಕಿ ಬಳಸುವುದನ್ನು ಸರ್ಕಾರವು ನಿಷೇಧಿಸಿದೆ. ಹಾಗಾಗಿ ಇನ್ನು ಮುಂದೆ ರಾಜ್ಯದಲ್ಲಿ ಕೇವಲ ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶವಿರಲಿದೆ.



Downloaded From:www.kpscvaani.com

ನನ್ನ ಗಳಿಕೆಯ ವಿಧಾನ ಹೇಗಿದೆ? ಎಂಬುದನ್ನು ಅರಿತುಕೊಳ್ಳುವ ಜ್ಞಾನ ಜ್ಯೋತಿ ನನ್ನೊಳಗಿರುವ ದೀಪಾವಳಿಯ ದೀಪವಾಗಿದೆ. ದೀಪಾವಳಿಯಂದು ವ್ಯವಹಾರದ ಲಾಭ ನಷ್ಟವನ್ನಷ್ಟೇ ಲೆಕ್ಕಾಚಾರ ಮಾಡಿಟ್ಟುಕೊಳ್ಳುವುದಲ್ಲ. ನನ್ನ ಕೆಲಸದಲ್ಲಿ ಎಷ್ಟು ಪ್ರಮಾಣದಲ್ಲಿ ಕಾಯಕ ನಿಷ್ಠೆ ಇದೆ. ನನ್ನ ಲಾಭದಲ್ಲಿ ಎಷ್ಟು ಪ್ರಾಮಾಣಿಕತನವಿದೆ ಎಂಬುದನ್ನು ಅರಿತುಕೊಳ್ಳಲು ಸಹಾಯಕವಾಗಿರುವ ದೀಪವನ್ನೂ ಸಹ ನನ್ನ ಮನದೊಳಗೆ ನನ್ನ ಮನೆಯಂಗಳದಲ್ಲಿ ಹಚ್ಚಿಟ್ಟುಕೊಳ್ಳುವುದಾಗಿದೆ. ಅದೇ ನಿಜವಾದ ದೀಪಾವಳಿಯ ದೀಪ.

ಈ ವ್ಯವಹಾರಿಕ ಪ್ರಪಂಚದಲ್ಲಿ ಹಲವರು ವ್ಯಾಪಾರ-ವಹಿವಾಟು ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದರೆ, ಕೆಲವರು ವಿವಿಧ ನೆಲೆಯ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವ್ಯಾಪಾರಿಗಳೇ ಆಗಲಿ, ವಿವಿಧ ಸೇವೆಯಲ್ಲಿ ತೊಡಗಿಸಿಕೊಂಡಿರುವವರೇ ಆಗಲೀ ತಮ್ಮ ದೈನಂದಿನ ಕಾರ್ಯ/ಸೇವೆಗಳಲ್ಲಿ ಪಾರದರ್ಶಕತೆಯಿಂದ ಮತ್ತು ಪ್ರಾಮಾಣಿಕತೆಯಿಂದ ವರ್ತಿಸುವ ಸ್ವಭಾವ ಮೈಗೂಡಿಸಿಕೊಂಡು ಪ್ರಗತಿ ಪಥದತ್ತ ಸಾಗಬೇಕು. ಅದು ಕೇವಲ ಕರ್ತವ್ಯವಾಗದೇ ತಮ್ಮ ದೇವನನ್ನು ಪೂಜಿಸುವ ಪೂಜೆಯಾಗಬೇಕು. ಆಗಲೇ ಅದು ಕಾಯಕದ ಕೈಲಾಸವಾಗುವುದು. ಇತರರಿಗೆ ಮಾದರಿಯಾಗುವಲ್ಲಿ ದಾರಿ ದೀಪವಾಗುವುದು. ಯಾವ ರೀತಿ ದೀಪದ ಬೆಳಕು ಬೇದ ಭಾವ ತೋರದೆ ಬಡವ-ಶ್ರೀಮಂತ ಎಂದು ಅಸಮಾನತೆಯನ್ನು ಪರಿಗಣಿಸದೇ ತನ್ನ ಬೆಳಕಿನ ಪ್ರಭಾವವನ್ನು ಇತರರಿಗೆ ಕೊಡುತ್ತಲೇ ಇರುತ್ತದೆಯೋ ಹಾಗೆ ಪ್ರತಿ ವ್ಯಕ್ತಿಯೂ ತನ್ನ ಉನ್ನತ ವಿಚಾರಗಳಿಂದ ಸರ್ವಾಂಗೀಣ ಅಭಿವೃದ್ಧಿಗೆ ಸರ್ವರಿಗೂ ಸ್ವತಃ ತಾನೇ ದಾರಿ ದೀಪವಾಗಬೇಕು.

ದೈನಂದಿನ ವ್ಯಾಪಾರ-ವಹಿವಾಟು/ಸೇವೆಗಳಲ್ಲಿ ಲಾಭಗಳಿಸುವ ದೃಷ್ಟಿ ಪ್ರಮುಖವಾಗಿರುವ ಜತೆಗೆ ಗ್ರಾಹಕರ, ಸೇವಾಕಾಂಕ್ಷಿಗಳ ಸಂತೃಪ್ತಿ ಮುಖ್ಯವಾದದ್ದು. ಹಿಂದಿನ ದಿನಗಳಲ್ಲಿ ಲಾಭಗಳಿಸುವುದೇ ವ್ಯಾಪಾರದ ಮತ್ತು ಸೇವೆಗಳ ಮುಖ್ಯ ಗುರಿಯಾಗಿತ್ತು. ಆದರೆ ಇಂದಿನ ಜಾಗತೀಕರಣದ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ನಾವು ಬದುಕುಳಿಯಲು ಉತ್ತಮ ಹೆಸರು ಸಂಪಾದಿಸಲು ಲಾಭಗಳಿಸುವ ಮೂಲ ಉದ್ದೇಶದಲ್ಲಿ ಸ್ವಲ್ಪ ವಿಭಿನ್ನ ದೃಷ್ಟಿಕೋನದಿಂದ ಚಿಂತಿಸಬೇಕಾಗಿದೆ. ಇಂದು ಗ್ರಾಹಕರೇ ಮಹಾ ಪ್ರಭುಗಳಾಗಿರುವುದರಿಂದ ಗ್ರಾಹಕರ ಸಂತೃಪ್ತಿಯ ಮೂಲಕ ಲಾಭಗಳಿಕೆ ಎಂಬ ತತ್ವ ಅತ್ಯವಶ್ಯಕವಾಗಿದೆ. ತಮ್ಮ ವ್ಯಾಪಾರ ವಹಿವಾಟಿನಲ್ಲಿ ಗ್ರಾಹಕರ ಸಂತೃಪ್ತಿಯ ಮೂಲಕ ಹಾಗೂ ಸೇವಾ ಕಾರ್ಯದಲ್ಲಿದ್ದ ನೌಕರರೂ ಸಹ ತಮಗೆ ನಿಗದಿಪಡಿಸಿದ ವೇತನವನ್ನು ಪಡೆದು ಆ ಮೊತ್ತಕ್ಕೆ ಅಥವಾ ಅದಕ್ಕೂ ಹೆಚ್ಚು ಪರಿಣಾಮಕಾರಿಯಾದ ಕೆಲಸವನ್ನು ದೇವ ಪೂಜೆಯೆಂದು ನಿರ್ವಹಿಸಬೇಕು.

ತನ್ನನ್ನು ಸಾಕಿ ಸಲುಹಿದ ಇಲಾಖೆ/ಸರ್ಕಾರ/ಸಂಸ್ಥೆಗೆ ನಿಷ್ಠೆಯಿಂದ ದುಡಿದು ಭ್ರಷ್ಟರಾಗದೇ ಲಂಚ, ಆಶೆ, ಆಮಿಷಗಳಿಗೆ ಬಲಿಯಾಗದೇ ತಮ್ಮ ವೈಯಕ್ತಿಕ ಮೌಲ್ಯ, ಕೀರ್ತಿ ಮತ್ತು ಹೆಸರನ್ನು ಕಾಪಾಡಿಕೊಂಡು ಉಳಿಸಿ, ಬೆಳೆಸುವಲ್ಲಿ ಪ್ರಾಮಾಣಿಕತೆ, ನಿಷ್ಕಪಟ, ಪಾರದರ್ಶಕತೆ ತತ್ವಗಳನ್ನು ಅಳವಡಿಸಿಕೊಳ್ಳಬೇಕು. ದೈನಂದಿನ ವ್ಯವಹಾರಗಳಲ್ಲಿ ತಾವು ಅಭಿವೃದ್ಧಿ ಹೊಂದಿ ಸುತ್ತಲಿನ ಪರಿವಾರ/ಸಮಾಜವನ್ನು ಯೋಗಕ್ಷೇಮದಿಂದ ನೋಡಿಕೊಳ್ಳಬೇಕಿದೆ. ಮಾನವೀಯ ಸಂವೇದನೆಯುಳ್ಳ ನಾಗರೀಕತೆಯಲ್ಲಿ ಸಹಕಾರ-ಸಮನ್ವಯ ತತ್ವದ ಆಧಾರದ ಮೇಲೆ ಬದುಕುವ ಕಲೆಯನ್ನು ಅಳವಡಿಸಿಕೊಳ್ಳಲು ಈ ದೀಪಾವಳಿಯ ದೀಪಗಳ ಬೆಳಕಿನ ಸಹಾಯವನ್ನು ಪಡೆದುಕೊಳ್ಳುವ ಮೂಲಕ ಹಬ್ಬದ ಆಚರಣೆಯ ಸಂಭ್ರಮವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಸಂಭ್ರಮಿಸಿಕೊಳ್ಳಬೇಕಿದೆ.

ಅಂಧನೊಬ್ಬ ತನ್ನ ಕೈಯಲ್ಲಿ ದೀಪದ ಹಣತೆಯನ್ನು ಹಿಡಿದುಕೊಂಡು ಕತ್ತಲಲ್ಲಿ ಹೊರಟಿದ್ದಾಗ ಎದುರಿಗೆ ಬರುವ ವ್ಯಕ್ತಿಯು ಈ ಅಂಧನನ್ನುದ್ದೇಶಿಸಿ "ಏನಪ್ಪಾ ನಿನಗೆ ಕಣ್ಣೇ ಕಾಣುವುದಿಲ್ಲ ಆದರೂ ಈ ಕತ್ತಲೆಯಲ್ಲಿ ಹಣತೆಯ ದೀಪವನ್ನು ಹಿಡಿದುಕೊಂಡು ಹೊರಟಿರುವೆಯಲ್ಲ ಏಕೆ" ಎಂದು ಕೇಳುತ್ತಾನೆ. ಆಗ ಆ ಅಂಧ, "ನಾನು ಅಂಧನಿದ್ದ ಕಾರಣ ಈ ಹಣತೆಯ ದೀಪದ ಬೆಳಕಿನಿಂದ ನನಗೇನು ಉಪಯೋಗವಿಲ್ಲ ಎಂಬ ನಿನ್ನ ನಿಲುವು ಸರಿ, ಆದರೆ ನನ್ನ ಎದುರಿಗೆ ಬರುವವರಿಗೆ, ನನ್ನ ಹಿಂದಿನಿಂದ ಬರುತ್ತಿರುವ ಇತರರಿಗೆ ನಾನು ಇಲ್ಲಿ ನಡೆಯುತ್ತಿರುವೆನೆಂದು ತಿಳಿಯಲು ಮತ್ತು ಹಣತೆ ಇಲ್ಲದವರಿಗೆ ಬೆಳಕಾಗಲು ಅಷ್ಟೇ ಅಲ್ಲ ನನ್ನಿಂದ ಅವರಿಗೆ ಮತ್ತು ಅವರಿಂದ ನನಗೆ ತೊಂದರೆಯಾಗಬಾರದೆಂದು ನಾನು ಈ ಹಣತೆಯ ದೀಪವನ್ನು ಹಿಡಿದುಕೊಂಡು ನಡೆಯುತ್ತಿದ್ದೇನೆ" ಎಂದನಂತೆ. ಆತನ ಸಮಾಜಮುಖಿ ಚಿಂತನೆ, ಜಂಗಮ ಸೇವೆಯ ಅಗಾಧತೆಯನ್ನು ಅರಿಯಬೇಕಿದೆ.

ಅಂಧನೊಬ್ಬನ ಅಂತರಂಗದ ಸೊಬಗಿಲ್ಲಿ ಚೆಲ್ಲವರಿದಿದೆ. ಕಣ್ಣಿದ್ದೂ ಇನ್ನೊಬ್ಬರಿಗೆ ಬೆಳಕಾಗದವರು ಒಂದೆಡೆ. ಕಣ್ಣಿಲ್ಲದಿದ್ದರೂ ತಾವೇ ಇನ್ನೊಬ್ಬರಿಗೆ ಬೆಳಕಾಗುವವರು ಮತ್ತೊಂದೆಡೆ. ಅಂಧನಿಗೆ ತನಗಿಲ್ಲದ ಸೌಭಾಗ್ಯದ ಬಗ್ಗೆ ಚಿಂತೆಯೇ ಇಲ್ಲ. ಮತ್ತೊಬ್ಬರಿಗೆ ತಾನು ಹೇಗೆಲ್ಲಾ ಸಹಕಾರಿಯಾಗಿರಬೇಕೆಂಬ ನಿಲುವಿನ ಬಗ್ಗೆಯೇ ಆತನ ಚಿಂತನೆ. ಇನ್ನೊಬ್ಬರ ನೋವೇ ತನ್ನ ನೋವೆಂದು ಸ್ಪಂದಿಸುವವರ ಗುಣಲಕ್ಷಣವಿದು. ಬಹಿರಂಗದಲ್ಲಿ ಕತ್ತಲಿದ್ದರೂ ಅದರ ಬಗ್ಗೆ ಯೋಚಿಸದೇ ತನ್ನಂತರಂಗದಲ್ಲಿರುವ ಬೆಳಕಿನ ಆಗರವನ್ನು ಬಗೆಬಗೆದು ಮತ್ತೊಬ್ಬರಿಗೆ ಬೆಳಕಾಗುವ ಅಂಧನ ರೀತಿಯಲ್ಲಿ ಏನೂ ಇಲ್ಲದವರು ಏನೆಲ್ಲವೂ ನನ್ನಲ್ಲಿವೆ ಎಂದು ಬದುಕುವುದನ್ನು ಸಕಾರಾತ್ಮಕವಾಗಿ ಯೋಚಿಸಿ ಕಲಿಯಬೇಕಿದೆ. ಬಹಿರಂಗದಲ್ಲಿ ಕತ್ತಲೆಯನ್ನು ಅನುಭವಿಸಿದರೂ ತನ್ನ ಆಂತರ್ಯದ ಬೆಳಕನ್ನು ತನ್ನ ಮಾತುಗಳ ಮೂಲಕ ಪಸರಿಸಲು ಹವಣಿಸುತ್ತಿರುವ ಆ ಅಂಧನ ಒಳಗಿನ ಅರಿವು ಜಂಗಮವಾಗುತ್ತಾ ಇತರರಿಗೆ ಉಪಯುಕ್ತವಾಗುವ ರೀತಿಯನ್ನು ನಾವಿಲ್ಲಿ ಗಮನಿಸಬೇಕಿದೆ.

ಹೀಗೆ ನನ್ನ ಪಾಲಿಗೆ ದೀಪಾವಳಿಯ ದೀಪಗಳು ಕೇವಲ ಬತ್ತಿಯ ದೀಪಗಳಲ್ಲ. ದೀಪದಿಂದ ದೀಪಗಳನ್ನು ಬಹಿರಂಗದಲ್ಲಿ ಬೆಳಗಿಸುವ, ಅರಿವಿನ ವಿಸ್ತಾರವನ್ನು ಅಂತರಂಗದಲ್ಲಿ ಹಿಗ್ಗಿಸುವ ಬೆಳಕಾಗಿ ಸರ್ವದಕ್ಕೂ ಬೆಳಗಾಗಿ ಪ್ರಗತಿಯ ಪಥವನ್ನು ಪ್ರತಿಯೊಬ್ಬರ ಮುಂದೆ ಸೃಜಿಸುವಂತಾಗುವ ಜ್ಞಾನ ಜ್ಯೋತಿಗಳು. ಕಣ್ಣ ಹಿಂಬದಿಯ ಬೆಳಕಿನಿಂದ ಕಣ್ಣ ಮುಂದಿನ ಕತ್ತಲೆಯನ್ನರಿಯುವ ಶಕ್ತಿ ನಮ್ಮಲ್ಲಿಯೇ ಇದೆ. ಅಂಥ ಅರಿವಿನ ಕಣ್ಣುಗಳನ್ನು ಪ್ರತಿಯೊಬ್ಬರ ಅಂತರಂಗದಲ್ಲಿ ತೆರೆದುಕೊಳ್ಳಲು ಈ ದೀಪಾವಳಿಯ ದೀಪಗಳು ಜ್ಞಾನ ದೀಪಗಳಾಗಬೇಕಿದೆ. ಹೀಗೆಯೇ ಅರಿವಿನ ದೀಪಾವಳಿಯ ಬಹಿರಂಗ ಮತ್ತು ಅಂತರಂಗದ ದೀಪಗಳು ನಮ್ಮನ್ನು ಸದಾ ಬೆಳಕಾಗಿ ಎಚ್ಚರಿಸುವಂತಿರಲಿ. ■


Downloaded From:www.kpscvaani.com

# ಬಾಲಕಾರ್ಮಿಕರ
## ರಕ್ಷಣಾ ಕಾರ್ಯಪಡೆಯ ಕಾರ್ಯವೈಖರಿ



**ಬಾ**ಲಕಾರ್ಮಿಕತೆಯು ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುವ ಜೊತೆಗೆ ನಿಯಮಿತವಾಗಿ ಶಾಲೆಗೆ ಹಾಜರಾಗಲು ಅಡ್ಡಿ ಪಡಿಸುತ್ತದೆ. ಅಲ್ಲದೆ ಮಕ್ಕಳನ್ನು ಮಾನಸಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ ಅವರ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಆದ್ದರಿಂದ ಹಾನಿಕಾರಕವಾದ ಯಾವುದೇ ರೀತಿಯ ಕೆಲಸವನ್ನು ಮಕ್ಕಳಿಂದ ಮಾಡಿಸಿದಲ್ಲಿ ಅದು ಶೋಷಣೆಯಾಗುತ್ತದೆ. ಅಂತಹ ಶೋಷಣೆಯನ್ನು ವಿಶ್ವಾದ್ಯಂತ ಕಾನೂನಿನಡಿ ನಿಷೇಧಿಸಲಾಗಿದೆ.

ಆದಾಗ್ಯೂ ಈ ಕಾನೂನುಗಳು ಮಕ್ಕಳ ಎಲ್ಲಾ ಕೆಲಸವನ್ನು ಬಾಲಕಾರ್ಮಿಕ ಎಂದು ಪರಿಗಣಿಸುವುದಿಲ್ಲ. 19 ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಬಾಲಕಾರ್ಮಿಕ ಕಾನೂನುಗಳು ಅನುಕ್ರಮವಾಗಿ, ಫ್ಯಾಕ್ಟರಿ ಕಾಯಿದೆಗಳು ಎಂದು ಕರೆಯಲ್ಪಡುತ್ತವೆ. 9 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೆಲಸ ಮಾಡಲು ಅವಕಾಶವಿರಲಿಲ್ಲ. 9–16 ವರ್ಷ ವಯಸ್ಸಿನವರು ಕಾಟನ್ ಮಿಲ್ಸ್ ಕಾಯಿದೆಯ ಪ್ರಕಾರ ದಿನಕ್ಕೆ 12 ಗಂಟೆಗಳ ಕಾಲ ಕೆಲಸ ಮಾಡಬಹುದು. 1856 ರ ಕಾನೂನಿನಲ್ಲಿ 9 ವರ್ಷಕ್ಕಿಂತ ಮೇಲ್ಪಟ್ಟ ಬಾಲ ಕಾರ್ಮಿಕರು ವಾರಕ್ಕೆ 60 ಗಂಟೆಗಳ ಕಾಲ ರಾತ್ರಿ ಅಥವಾ ಹಗಲು ಕೆಲಸ ಮಾಡಲು ಅನುಮತಿಸಿತು. 1901 ರಲ್ಲಿ, ಅನುಮತಿಸಲಾದ ಬಾಲಕಾರ್ಮಿಕ ವಯಸ್ಸನ್ನು 12 ಕ್ಕೆ ಏರಿಸಲಾಯಿತು.

ಬಾಲಕಾರ್ಮಿಕತೆಯು ಇತಿಹಾಸದುದ್ದಕ್ಕೂ ವಿಭಿನ್ನ ಪ್ರಮಾಣದಲ್ಲಿ ಅಸ್ತಿತ್ವದಲ್ಲಿದೆ. 19 ನೇ ಮತ್ತು 20 ನೇ ಶತಮಾನದ ಆರಂಭದಲ್ಲಿ, ಬಡ ಕುಟುಂಬಗಳಿಂದ 5–14 ವರ್ಷ ವಯಸ್ಸಿನ ಅನೇಕ ಮಕ್ಕಳು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮತ್ತು ಅವರ ವಸಾಹತುಗಳಲ್ಲಿ ಸಮಾನವಾಗಿ ಕೆಲಸ ಮಾಡಿದರು. ಈ ಮಕ್ಕಳು ಮುಖ್ಯವಾಗಿ ಕೃಷಿ, ಗೃಹಾಧಾರಿತ ಅಸೆಂಬ್ಲಿ ಕಾರ್ಯಾಚರಣೆಗಳು, ಕಾರ್ಖಾನೆಗಳು, ಗಣಿಗಾರಿಕೆ ಮತ್ತು ಪತ್ರಿಕೆ ಹಂಚುವಂತಹ ಸೇವೆಗಳಲ್ಲಿ ಕೆಲಸ ಮಾಡುತ್ತಾರೆ. ಕೆಲವರು ರಾತ್ರಿ ಪಾಳಿಯಲ್ಲಿ 12 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಮನೆಯ ಆದಾಯದ ಹೆಚ್ಚಳ, ಶಾಲೆಗಳ ಲಭ್ಯತೆ ಮತ್ತು ಬಾಲಕಾರ್ಮಿಕ ಕಾನೂನುಗಳ ಅಂಗೀಕಾರದಿಂದಾಗಿ ಬಾಲಕಾರ್ಮಿಕ ಪ್ರಕರಣಗಳ ಪ್ರಮಾಣವು ಇತ್ತೀಚೆಗೆ ಇಳಿಮುಖವಾಗಿದೆ.

2023 ರ ಹೊತ್ತಿಗೆ ವಿಶ್ವದ ಬಡ ದೇಶಗಳಲ್ಲಿ, ಸುಮಾರು ಐದು ಮಕ್ಕಳಲ್ಲಿ ಒಬ್ಬರು ಬಾಲಕಾರ್ಮಿಕ ಕೆಲಸದಲ್ಲಿ ತೊಡಗಿದ್ದಾರೆ. ಅವರಲ್ಲಿ ಹೆಚ್ಚಿನ ಸಂಖ್ಯೆಯವರು ಆಫ್ರಿಕಾದಲ್ಲಿ ದೇಶದವರು. ಅಲ್ಲಿ ನಾಲ್ಕು ಮಕ್ಕಳಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳು ಬಾಲಕಾರ್ಮಿಕರಾಗಿ ತೊಡಗಿಕೊಂಡಿದ್ದಾರೆ. ಇದು ಹಿಂದಿನ ಅರ್ಧ ದಶಕದಲ್ಲಿ ಬಾಲ ಕಾರ್ಮಿಕರ ಕುಸಿತವನ್ನು ಪ್ರತಿನಿಧಿಸುತ್ತದೆ. 2017 ರಲ್ಲಿ, ನಾಲ್ಕು ಆಫ್ರಿಕನ್ ರಾಷ್ಟ್ರಗಳಾದ ಮಾಲಿ, ಬೆನಿನ್, ಚಾಡ್ ಮತ್ತು ಗಿನಿಯಾ–ಬಿಸ್ಸೌ ನಲ್ಲಿ 5–14 ವರ್ಷ ವಯಸ್ಸಿನ 50 ಪ್ರತಿಶತ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ವಿಶ್ವದಾದ್ಯಂತ ಕೃಷಿಯು ಬಾಲಕಾರ್ಮಿಕರ ಅತಿ ದೊಡ್ಡ ಉದ್ಯೋಗದಾತವಾಗಿದೆ. ಬಹುಪಾಲು ಬಾಲಕಾರ್ಮಿಕರು ಗ್ರಾಮೀಣ ವ್ಯವಸ್ಥೆಗಳಲ್ಲಿ ಮತ್ತು ಅನೌಪಚಾರಿಕವಾಗಿ ಕಂಡುಬರುತ್ತಾರೆ. ಬಡತನ ಮತ್ತು ಶಾಲೆಗಳ ಕೊರತೆಯು ಬಾಲಕಾರ್ಮಿಕತೆಗೆ ಪ್ರಾಥಮಿಕ ಕಾರಣವೆಂದು ಪರಿಗಣಿಸಲಾಗಿದೆ. ಯುನಿಸೆಫ್‌ನ ಪ್ರಕಾರ

**ಸರ್ಕಾರ ರಚಿಸಿರುವ ಬಾಲಕಾರ್ಮಿಕರ ರಕ್ಷಣಾ ಕಾರ್ಯಪಡೆಯ ಕಾರ್ಯದಿಂದಾಗಿ ರಾಜ್ಯದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಇಳಿಮುಖವಾಗಿದೆ.**

ಸಂಧ್ಯಾ ಸೊರಬ



Downloaded From:www.kpscvaani.com

"ಬಾಲಕಾರ್ಮಿಕರಲ್ಲಿ ಹುಡುಗರು ಮತ್ತು ಹುಡುಗಿಯರು ಸಮಾನವಾಗಿ ತೊಡಗಿಸಿಕೊಳ್ಳುತ್ತಾರೆ". ಆದರೆ ಹೆಣ್ಣುಮಕ್ಕಳು ಸಂಬಳವಿಲ್ಲದ ಮನೆಕೆಲಸವನ್ನು ನಿರ್ವಹಿಸುವ ಸಾಧ್ಯತೆ ಹೆಚ್ಚು.

ವಿಶ್ವಬ್ಯಾಂಕ್ ಪ್ರಕಾರ 1960 ಮತ್ತು 2003 ರ ನಡುವೆ ಜಾಗತಿಕವಾಗಿ ಬಾಲಕಾರ್ಮಿಕರ ಪ್ರಮಾಣವು 25% ರಿಂದ 10% ಕ್ಕೆ ಕಡಿಮೆಯಾಗಿದೆ. ಅದೇನೇ ಇದ್ದರೂ, ಯುನಿಸೆಫ್ ಮತ್ತು 2013 ರಲ್ಲಿ ವಿಶ್ವಾದ್ಯಂತ 5–17 ವರ್ಷ ವಯಸ್ಸಿನ 168 ಮಿಲಿಯನ್ ಮಕ್ಕಳು ಬಾಲಕಾರ್ಮಿಕರಾಗಿ ತೊಡಗಿಕೊಂಡಿದ್ದಾರೆ ಎಂದು ಗುರುತಿಸಿರುವುದರಿಂದ ಒಟ್ಟು ಬಾಲಕಾರ್ಮಿಕರ ಸಂಖ್ಯೆಯು ಅಧಿಕವಾಗಿದೆ.

ಕರ್ನಾಟಕದಲ್ಲಿ ಇಂತಹ ಅನಿಷ್ಟತೆಯನ್ನು ಹೋಗಲಾಡಿಸಲು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ದಿಟ್ಟ ಕ್ರಮಕೈಗೊಂಡು ಮಹತ್ವದ ಹೆಜ್ಜೆ ಇಟ್ಟಿದೆ. ಬಾಲಕಾರ್ಮಿಕರ ರಕ್ಷಣೆಗೆಂದೇ ಕಾರ್ಮಿಕ ಇಲಾಖೆ "ಟಾಸ್ಕ್‌ಫೋರ್ಸ್" (ಕಾರ್ಯಪಡೆ) ಅನ್ನು ರಚಿಸಿದೆ.

ಅಂದ ಹಾಗೆ ಈ ಕಾರ್ಯ ಪಡೆಯ ಕಾರ್ಯನಿರ್ವಹಣೆ ಹೇಗೆಂಬುದನ್ನು ನೋಡುವುದಾದರೆ, ಕಾರ್ಮಿಕ ಇಲಾಖೆಯೂ ಒಳಗೊಂಡಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ, ಪೊಲೀಸ್, ಕಂದಾಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಇಲಾಖೆಗಳು ಸೇರಿದಂತೆ ಒಟ್ಟು 11 ಇಲಾಖೆಗಳನ್ನೊಳಗೊಂಡ ಒಂದಕ್ಕೊಂದು ಸಹಕರಿಸಿ ಪೂರಕವಾಗಿ ಬಾಲ ಕಾರ್ಮಿಕರ ರಕ್ಷಣೆಯ ಉದ್ದೇಶದಡಿ ಟಾಸ್ಕ್‌ಫೋರ್ಸ್ ಕಾರ್ಯ ನಿರ್ವಹಿಸಲಿದೆ. ಈ ಎಲ್ಲಾ 11 ಇಲಾಖೆಯ ಅಧಿಕಾರಿಗಳನ್ನು ಸೆಕ್ಷನ್ 17ಅಡಿಯಲ್ಲಿ "ನೋಟಿಫೈ ಇನ್ಸ್‌ಪೆಕ್ಟರ್"ಗಳನ್ನಾಗಿ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ ಎಲ್ಲಾ 11 ಇಲಾಖೆಗಳು ಬಾಲಕಾರ್ಮಿಕರ ರಕ್ಷಣೆಗಾಗಿ ಜಂಟಿಯಾಗಿ ಕಾರ್ಯನಿರ್ವಹಿಸುತ್ತವೆ. ಇನ್ನು ಕಾರ್ಮಿಕ ಇಲಾಖೆಯು ನೋಡೆಲ್ ಇಲಾಖೆಯಾಗಿರುತ್ತದೆ.

ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿಯಡಿ ಟಾಸ್ಕ್‌ಫೋರ್ಸ್‌ಗಳು ದೂರಿನಾಧಾರದ ಮೇಲೂ, ಜಾಗೃತಿ ಮಾಹಿತಿಯ ಮೇಲೂ ಕೆಲಸ ನಿರ್ವಹಿಸುತ್ತಿದೆ.

ಈ ಮೊದಲೇ ಹೇಳಿದಂತೆ ಬಾಲಕಾರ್ಮಿಕ ರಕ್ಷಣೆ ಎನ್ನುವುದು ಬರೀ ಕಾರ್ಮಿಕ ಇಲಾಖೆಯಿಂದಷ್ಟೇ ಎಂಬ ಮನೋಭಾವ ಅಲ್ಲ. ಏಕೆಂದರೆ, ಇದೊಂದು ಸಾಮಾಜಿಕ ಪಿಡುಗು. ಅಲ್ಲದೇ ಮಕ್ಕಳ ಭವಿಷ್ಯದ ಪ್ರಶ್ನೆ. ಹೀಗಾಗಿ ಸಾಮಾಜಿಕವಾಗಿ ಮಕ್ಕಳ ಅಭಿವೃದ್ಧಿಯಲ್ಲಿ ಎಲ್ಲರ ಪಾತ್ರವೂ ಮುಖ್ಯ.

ಇದು ಖಂಡಿತವಾಗಿಯೂ ಜಂಟಿ ಕಾರ್ಯಾಚರಣೆ. 11 ಇಲಾಖೆಗಳ ಪಾತ್ರವೂ ಒಂದಕ್ಕೊಂದು ಪೂರಕವಾಗಿದೆ. ಬಾಲಕಾರ್ಮಿಕರನ್ನು ರೈಡ್ ಮಾಡುವ ಸಂದರ್ಭದಲ್ಲಿ ಗಲಾಟೆಯಾದರೆ ಪೊಲೀಸ್ ಇಲಾಖೆಯ ಪಾತ್ರ, ವಿದ್ಯಾಭ್ಯಾಸವನ್ನು ಮಟಕುಗೊಳಿಸಿ ಇನ್ನೆಲ್ಲೋ ಬೀದಿ ಬದಿ ವ್ಯಾಪಾರಿಯಾಗುವ ಮಗುವಿನ ಶಿಕ್ಷಣದ ಪುನರಾರಂಭಕ್ಕೆ ಶಿಕ್ಷಣ ಇಲಾಖೆ, ಬಾಲಕಾರ್ಮಿಕರ ಪೋಷಕರು ಆರ್ಥಿಕವಾಗಿ ಸಂಕಷ್ಟದ ಕಾರಣದಿಂದಲೇ ದುಡಿಯಲೆಂದು ತಮ್ಮ ಮಕ್ಕಳನ್ನು ದುಡಿಯುವವರನ್ನಾಗಿ ಮಾಡಿದಲ್ಲಿ, ಗ್ರಾಮೀಣಾಭಿವೃದ್ಧಿ ಇಲಾಖೆಯು ಸರ್ಕಾರದ ಯಾವುದಾದರೂ ಯೋಜನೆಯಡಿ ಅಂತಹ ಪೋಷಕರ ಕೈಗೆ ಕೆಲಸ, ಆರ್ಥಿಕ ನೆರವು, ಬಾಲಕಾರ್ಮಿಕ ಮಕ್ಕಳನ್ನು ಮಕ್ಕಳ ಕಲ್ಯಾಣ ಇಲಾಖೆಗೆ ನೀಡುವುದು ಹೀಗೆ ಸರ್ವರ ಸಮಗ್ರ ಪಾತ್ರವೂ ಈ ರಕ್ಷಣೆಯಲ್ಲಿದೆ. ಇನ್ನು ಮಕ್ಕಳ ಕಲ್ಯಾಣಕ್ಕೊಪ್ಪಿಸಲ್ಪಟ್ಟ ಮಕ್ಕಳ ಪೋಷಕರು ಒಂದು ವೇಳೆ ಅವರನ್ನು ಮತ್ತೆ ತಮ್ಮೊಂದಿಗೆ ಕರೆದೊಯ್ಯಲು ಬಂದಾಗ ಅವರಿಂದ ಮುಂದೆ ಮಕ್ಕಳನ್ನು ದುಡಿಯಲು ಕಳುಹಿಸುವುದಿಲ್ಲ ಎಂದು "ಮುಚ್ಚಳಿಕೆ ಪತ್ರ" ಬರೆಸಿಕೊಳ್ಳಲಾಗುತ್ತದೆ.

ಕಳೆದ ಮೇ–2023 ರಿಂದ ಸೆಪ್ಟೆಂಬರ್–2023ರ ಅಂತ್ಯಕ್ಕೆ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿಯಲ್ಲಿ 17493 ತಪಾಸಣೆಗಳನ್ನು ನಡೆಸಲಾಗಿದೆ. 306 ಬಾಲಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ವಸತಿಗೊಳಿಸಲಾಗಿರುತ್ತದೆ. 124 ಪ್ರಕರಣಗಳ ಮೇಲೆ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, ರೂ.3,50,000/–ಗಳ ದಂಡ ವಸೂಲಾತಿಯಾಗಿದೆ.

ಬೆಂಗಳೂರು ನಗರ ಹಾಗೂ ಮೈಸೂರು ಜಿಲ್ಲೆಯ ಸರ್ಕಲ್‌ಗಳು ಹಾಗೂ ರಸ್ತೆ ಬದಿಗಳಲ್ಲಿ ಭಿಕ್ಷೆ ಬೇಡುವ ಹಾಗೂ ಪೆನ್ನು ಪೆನ್ಸಿಲ್‌ಗಳು ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡುವ ಕುರಿತು ಕಾರ್ಯಪಡೆಯ ತಂಡಗಳು 238 ಸ್ಥಳಗಳಲ್ಲಿ ಅರಿವು ಕಾರ್ಯಕ್ರಮ ಹಾಗೂ ತಪಾಸಣೆಗಳನ್ನು ಮಾಡಲಾಗಿದ್ದು, ಅದರಲ್ಲಿ 13 ಮಕ್ಕಳನ್ನು ರಕ್ಷಣೆ ಮಾಡಿ ನಿಯಮಾನುಸಾರ ಮಕ್ಕಳ ಕಲ್ಯಾಣ ಸಮಿತಿ (Child Welfare Committee)ಯ ಬಾಲಕರ ಮತ್ತು ಬಾಲಕಿಯರ ಬಾಲಮಂದಿರಗಳಿಗೆ ದಾಖಲಿಸಲಾಗಿದ್ದು, ನಂತರ ಮಕ್ಕಳ ಕಲ್ಯಾಣ ಸಮಿತಿಯು ನಿಯಮಾನುಸಾರ ಮುಚ್ಚಳಿಕೆ ಆಧಾರದ ಮೇಲೆ ಪೋಷಕರ ವಶಕ್ಕೆ ನೀಡಲಾಗುತ್ತದೆ ಎಂದು ಕಾರ್ಮಿಕ ಇಲಾಖೆಯ ಸಹಾಯಕ ನಿರ್ದೇಶಕರಾದ ರವಿಕುಮಾರ್ ಅವರು ಮಾಹಿತಿ ನೀಡುತ್ತಾರೆ.

ಕಾರ್ಮಿಕ ಇಲಾಖೆ ಸಚಿವರಾಗಿರುವ ಸಂತೋಷ್ ಎಸ್.ಲಾಡ್ ಅವರು ಇನ್ನು ಮುಂದೆ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಅಧಿಕಾರಿಗಳು ಹೆಚ್ಚಿನ ಶ್ರಮ ವಹಿಸಬೇಕು. ಕಾರ್ಮಿಕರ ಕಲ್ಯಾಣಕ್ಕಾಗಿ ಇಲಾಖೆಯ ಕೋರ್ಟ್ ಪ್ರಕರಣಗಳ ಇತ್ಯರ್ಥ ಹಾಗೂ ಕರ ಸಂಗ್ರಹದ ಬಗ್ಗೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಕಟ್ಟುನಿಟ್ಟಾಗಿ ಆದೇಶ ನೀಡಿದ್ದಾರೆ.

ಈ ಬಾಲಕಾರ್ಮಿಕ ಪಿಡುಗನ್ನು ಬುಡಸಮೇತ ಕಿತ್ತೊಗೆಯಲು ಎಲ್ಲರೂ ಒಂದಾಗಬೇಕು. ಇದು ಕೇವಲ ಕಾರ್ಮಿಕ ಇಲಾಖೆಯ ಕೆಲಸವೆಂದಷ್ಟೇ ಪರಿಗಣಿಸಬಾರದು. ನೈಜವಾಗಿ ಕಣ್ಣಮುಂದೆ ಒಂದು ಮಗುವಿನ ಭವಿಷ್ಯ ಬಾಲಕಾರ್ಮಿಕ ಪದ್ಧತಿಯಿಂದ ಹಾಳಾಗುತ್ತಿರುವುದು ಕಂಡು ಬಂದರೆ ಸಾರ್ವಜನಿಕರಾದ ನಾವು ಸಹ ಸಂಬಂಧಪಟ್ಟವರ ಗಮನಕ್ಕೆ ತರುವ ಮೂಲಕ ಮಕ್ಕಳ ಭವಿಷ್ಯವನ್ನು ಕಾಪಾಡಬೇಕೆಂಬುದು ವಾರ್ತಾ ಜನಪದದ ಆಶಯವಾಗಿದೆ. ಇದೇ ನವೆಂಬರ್ 14 ರಂದು ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುವ ನಿಮಿತ್ತ ಬಾಲ ಕಾರ್ಮಿಕರಾಗಿ ದುಡಿಯುವ ಮಕ್ಕಳನ್ನು ರಕ್ಷಿಸುತ್ತೇವೆ ಎಂದು ನಾವೆಲ್ಲರೂ ಪಣತೊಡೋಣ. ■


Downloaded From:www.kpscvaani.com

**ಹತ್ತೇ ನಿಮಿಷದಲ್ಲಿ 50 ಕ್ಕೂ ಹೆಚ್ಚು ಪರೀಕ್ಷೆ ಮಾಡುವ ಜನಸ್ನೇಹಿ ಹೆಲ್ತ್ ಎಟಿಹೆಚ್‌ಗಳು ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಸೇವೆಗಳನ್ನು ನೀಡಲು ಆರಂಭಿಸಿವೆ.**

ಹಣ ಪಡೆಯಲು ಬಳಸುವ ಎಟಿಎಂ ಮಷಿನ್ ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇದೀಗಾ ಎಟಿಎಂನಿಂದ ಹೆಲ್ತ್ ರಿಪೋರ್ಟ್ ಅನ್ನು ಪಡೆಯಬಹುದು. ಆದರೆ ಹಣ ಪಡೆಯುವ ಮಷಿನ್ ನಿಂದ ಅಲ್ಲ, ಹೆಲ್ತ್ ರಿಪೋರ್ಟ್ ನೀಡುವ ಎಟಿಹೆಚ್ (Any Time Health) ಮಷಿನ್‌ನಿಂದ.

ಆರೋಗ್ಯ ಕ್ಷೇತ್ರದಲ್ಲಿ ಹಲ್ತ್ ಎಟಿಹೆಚ್‌ಗಳು ಕ್ರಾಂತಿಕಾರಿ ತಂತ್ರಜ್ಞಾನವಾಗಿದ್ದು, ಪ್ರಾಥಮಿಕ ಹಂತದಲ್ಲೇ ರೋಗವನ್ನು ತಡೆಗಟ್ಟಬಹುದಾದ ಆರೋಗ್ಯ ಸೇವೆಗಳನ್ನು ಸುಲಭವಾಗಿ ಹಾಗೂ ಕೈಗೆಟುಕುವ ದರದಲ್ಲಿ ಒದಗಿಸುತ್ತದೆ. ಅಲ್ಲದೆ ರೋಗವನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಲು ನೆರವಾಗುತ್ತದೆ. ಈ ಎಟಿಹೆಚ್‌ಗಳು ಕೇವಲ 10 ನಿಮಿಷದಲ್ಲಿ 50ಕ್ಕೂ ಅಧಿಕ ಆರೋಗ್ಯ ಪರೀಕ್ಷೆಗಳನ್ನು ನಡೆಸಿ ವರದಿ ನೀಡಲಿವೆ.

ಜನರ ಆರೋಗ್ಯ ಸುಧಾರಣೆಯ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರ ಸರ್ಕಾರವು ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಇತ್ತೀಚಿಗೆ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಕಾರ್ಯಕ್ರಮ ಸಂದರ್ಭದಲ್ಲಿ 'ಸ್ಮಾರ್ಟ್ ಹೆಲ್ತ್ ಕಿಯೋಸ್ಕ್' (ಹೆಲ್ತ್ ಎಟಿಹೆಚ್) ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದ್ದಾರೆ. ಸ್ಮಾರ್ಟ್ ಹೆಲ್ತ್ ಕಿಯೋಸ್ಕ್‌ಗಳ ಮೂಲಕ ತಪಾಸಣೆ ಮತ್ತು ಶೀಘ್ರ ರೋಗ ಪತ್ತೆ ಹಾಗೂ ನಿಯಂತ್ರಣಕ್ಕೆ ತಂತ್ರಜ್ಞಾನ ಬಳಸಿ ವಿಶಿಷ್ಟ ಹೆಲ್ತ್ ಎಟಿಹೆಚ್ ಜಾರಿ

# ರಾಜ್ಯದಲ್ಲಿ 'ಆರೋಗ್ಯ ಮಿತ್ರ' ಯೋಜನೆ ಆರಂಭ

ಡಾ. ವರ ಪ್ರಸಾದ್ ರಾವ್ ಪಿ.ವಿ







Downloaded From:www.kpscvaani.com




ಮಾಡಲಾಗಿದೆ. ಇದರ ಬಗ್ಗೆ ಸಮಗ್ರ ಮಾಹಿತಿ ಇಲ್ಲಿದೆ.

ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಕಲಬುರಗಿ ಜಿಲ್ಲಾ ಆಡಳಿತ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆವತಿಯಿಂದ ಜಿಲ್ಲೆಯಲ್ಲಿ 'ಆರೋಗ್ಯ ಮಿತ್ರ' ಯೋಜನೆಯನ್ನು ಜಾರಿ ಮಾಡುತ್ತಿದ್ದು, ಕಲಬುರಗಿ ಜಿಲ್ಲೆಯಲ್ಲಿ 25 ಸ್ಥಳಗಳಲ್ಲಿ ಈ ಸೇವೆಯನ್ನು ಆರಂಭಿಸಲಾಗಿದೆ.

ಖಾಸಗಿ ಕಂಪನಿ ಆಗಿರುವ ಹೆಚ್ ಪಿ ಎಂಟರ್‌ಪ್ರೈಸಸ್ ತನ್ನ ಸಿಎಸ್‌ಆರ್ ಅನುದಾನದಲ್ಲಿ, 5 ಕೋಟಿ ರೂ. ವೆಚ್ಚದಲ್ಲಿ 25 ಹೆಲ್ತ್ ಎಟಿಹೆಚ್‌ಗಳನ್ನು ಖರೀದಿಸಿ, ಕಲಬುರಗಿ ಜಿಲ್ಲಾ ಆರೋಗ್ಯ ಇಲಾಖೆಗೆ ನೀಡಿದೆ. ಕಲಬುರಗಿ ಜಿಲ್ಲಾ ಆರೋಗ್ಯ ಇಲಾಖೆ ಈ ಮಷಿನ್‌ಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಜಿಲ್ಲೆಯ ಅನೇಕ ಕಡೆ ಜನಸಂದಣಿ ಇರುವ ಪ್ರದೇಶದಲ್ಲಿ ಅಳವಡಿಸುತ್ತಿದೆ. ಮಷಿನ್‌ಗಳ ನಿಯಂತ್ರಣಕ್ಕಾಗಿ ಲ್ಯಾಬ್ ಟೆಕ್ನೀಷಿಯನ್‌ಗಳನ್ನು ಕೂಡಾ ನೇಮಿಸಿದೆ.

**ಜನರ ಆರೋಗ್ಯ ಕಾಪಾಡುವುದು ನಮ್ಮ ಪ್ರಮುಖ ಆದ್ಯತೆ**

ಜನರ ಆರೋಗ್ಯ ಕಾಪಾಡುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. ಕಲಬುರಗಿ ಜಿಲ್ಲೆಯನ್ನು ರಾಜ್ಯಕ್ಕೆ ಮಾದರಿ ಜಿಲ್ಲೆಯನ್ನಾಗಿ ಮಾಡುವ ನಿಟ್ಟಿನಲ್ಲಿ ನಮ್ಮ ಪ್ರಾಮಾಣಿಕ ಪ್ರಯತ್ನ ನಿರಂತರವಾಗಿ ಮುಂದುವರೆಯಲಿದೆ.

**– ದಿನೇಶ್ ಗುಂಡೂರಾವ್**
**ಆರೋಗ್ಯ ಸಚಿವರು.**

ಈ ವರ್ಷದ ಆರಂಭದಲ್ಲಿ, ಯಮುನೋತ್ರಿ, ಗಂಗೋತ್ರಿ, ಬದರಿನಾಥ್ ಮತ್ತು ಕೇದಾರನಾಥ ಸೇರಿದಂತೆ ಚಾರ್ ಧಾಮ್ ಮಾರ್ಗದಲ್ಲಿ ಹಿಮಾಚಲ ಪ್ರದೇಶದ ಪ್ರವಾಸಿ ತಾಣಗಳಲ್ಲಿ ಹೆಚ್ ಪಿ ಅಂತಹ 50 ಆರೋಗ್ಯ ಕಿಯೋಸ್ಕ್‌ಗಳನ್ನು ಸ್ಥಾಪಿಸಿತು. ಈ ಕಿಯೋಸ್ಕ್‌ಗಳು ಯಶಸ್ವಿಯಾದ ಹಿನ್ನಲೆಯಲ್ಲಿ, ಕರ್ನಾಟಕದಾದ್ಯಂತ ಪ್ರಮುಖ ನಗರಗಳಲ್ಲಿ ಇದೇ ರೀತಿಯ ಎಟಿಹೆಚ್‌ಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಯೋಜಿಸಿದೆ ಎಂದು ಹೆಚ್ ಪಿ ಎಂಟರ್‌ಪ್ರೈಸಸ್ ತಿಳಿಸಿದೆ.

**ಆರೋಗ್ಯದ ರಿಪೋರ್ಟ್ ಕಾರ್ಡ್ ನೀಡುತ್ತದೆ ಸ್ಮಾರ್ಟ್ ಹೆಲ್ತ್ ಕಿಯೋಸ್ಕ್**

ಈ ಹೆಲ್ತ್ ಎಟಿಹೆಚ್‌ಗಳಿಂದ ಸಾಕಷ್ಟು ಪ್ರಯೋಜನಗಳಿವೆ. ಜನಸಂದಣಿ ಪ್ರದೇಶಗಳಲ್ಲಿ ಲಭ್ಯತೆ ಇರುವ ಆರೋಗ್ಯ ಎಟಿಹೆಚ್‌ಗಳ ಮೂಲಕ ಸರಳವಾದ ಆರೋಗ್ಯ ಸೇವೆಗಳು ಲಭ್ಯವಾಗಲಿದೆ.

ವ್ಯಕ್ತಿಯೋರ್ವನ ಬಿಪಿ, ಶುಗರ್, ಹಿಮೋಗ್ಲೋಬಿನ್, ಮಲೇರಿಯಾ, ಡೆಂಗ್ಯೂ, ಚಿಕನ್‌ಗುನ್ಯ ಜ್ವರದ ರಿಪೋರ್ಟ್, ಎತ್ತರ, ತೂಕ, ಆಕ್ಸಿಜನ್ ಪ್ರಮಾಣ, ಸೇರಿದಂತೆ ಐವತ್ತಕ್ಕೂ ಹೆಚ್ಚು ಪರೀಕ್ಷೆಗಳ ರಿಪೋರ್ಟ್ ಅನ್ನು ಕೇವಲ ಹತ್ತೇ ನಿಮಿಷದಲ್ಲಿ ನಮಗೆ ನೀಡುತ್ತದೆ ಈ ಹೆಲ್ತ್ ಎಟಿಹೆಚ್. ಈ ಮಷಿನ್‌ನಲ್ಲಿ ಇಸಿಜಿ ಸೌಲಭ್ಯ ಕೂಡಾ ಇದೆ. ನಿಖರವಾದ ವೈದ್ಯಕೀಯ ಪರೀಕ್ಷೆ ಮತ್ತು ಹೆಚ್ಚಿನ ಆರೋಗ್ಯ ತಪಾಸಣೆಗಾಗಿ ಆರೋಗ್ಯ ಎಟಿಎಂಗಳನ್ನು ಬಳಸುವುದರಿಂದ ಸಮಯ ಮತ್ತು ಹಣ ಉಳಿತಾಯವಾಗಲಿದೆ. ಈ ಸೇವೆಯಿಂದ ರೋಗಿಗಳಿಗೆ ತುರ್ತು ಸ್ಪಂದನೆ ದೊರಕುವ ಜೊತೆಗೆ ಉತ್ತಮ ಆರೋಗ್ಯ ಸೇವೆ ದೊರಕಲು ಸಾಧ್ಯವಾಗಲಿದೆ. ರೋಗಿಯ ದಾಖಲೆಗಳನ್ನು ಸುರಕ್ಷಿತವಾಗಿ ಮತ್ತು ಗೋಪ್ಯವಾಗಿ ಇಡಲಾಗುತ್ತದೆ.

**ನೇರವಾಗಿ ಮೊಬೈಲ್‌ಗೆ ಹೆಲ್ತ್ ರಿಪೋರ್ಟ್**

ವ್ಯಕ್ತಿಯೊಬ್ಬರು ಡೈಗ್ನೋಸ್ಟಿಕ್ ಕೇಂದ್ರಕ್ಕೆ ಹೋಗಿ, ರಕ್ತ ಪರೀಕ್ಷೆ ಸೇರಿದಂತೆ ಅನೇಕ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾದ್ರೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಜೊತೆಗೆ ಗಂಟೆಗಟ್ಟಲೆ ಕಾಯಬೇಕಾಗುತಿತ್ತು. ಈಗ ಇದಕ್ಕೆ ಮುಕ್ತಿ ಸಿಗಲಿದೆ. ಇದೀಗ ನೀವು ಡೈಗ್ನೋಸ್ಟಿಕ್ ಕೇಂದ್ರಗಳಿಗೆ ಹೋಗಿ, ಅಲ್ಲಿ ದಿನಗಟ್ಟಲೆ ಕಾಯಬೇಕಾದ ಸ್ಥಿತಿಗೆ ಮುಕ್ತಿ ಹಾಡಲು ಆರೋಗ್ಯ ಇಲಾಖೆ ಮುಂದಾಗಿದೆ.

ಯಾರು ಬೇಕಾದರು ಕೂಡಾ ತಪಾಸಣೆ ಮಾಡಿಸಿಕೊಳ್ಳಬಹುದು. ಹೆಲ್ತ್ ಎಟಿಹೆಚ್‌ಗಳ ಎಲ್ಲಾ ಪರೀಕ್ಷೆಗಳನ್ನು ನಾವೇ ಮಾಡಿಕೊಳ್ಳಲು ಬರೋದಿಲ್ಲಾ. ಶುಗರ್ ಟೆಸ್ಟ್‌ಗೆ ರಕ್ತ ಸಂಗ್ರಹ, ಬಿಪಿ ತಪಾಸಣೆಯನ್ನು ಲ್ಯಾಬ್ ಟೆಕ್ನೀಷಿಯನ್‌ಗಳು ಮಾಡುತ್ತಾರೆ. ಉಳಿದಂತೆ ಆಕ್ಸಿಜನ್ ಲೆವೆಲ್, ಎತ್ತರ, ತೂಕ ಸೇರಿದಂತೆ ಕೆಲ ಪರೀಕ್ಷೆಗಳನ್ನು ನಾವೇ ಸ್ವತಃ ಈ ಮಷೀನ್ ಮೂಲಕ ಮಾಡಿಕೊಳ್ಳಬಹುದಾಗಿದೆ. ಎಲ್ಲಾ ಟೆಸ್ಟ್‌ಗಳನ್ನು ಮಾಡಿಸಿಕೊಂಡ ನಂತರ ತಪಾಸಣಾ ವರದಿಯು ವ್ಯಕ್ತಿ ದಾಖಲಿಸಿದ ಮೊಬೈಲ್‌ಗೆ ವಾಟ್ಸಪ್ ಮೂಲಕ ಸಂದೇಶ ರವಾನೆಯಾಗುತ್ತದೆ. ಇದು ಜನಸಾಮಾನ್ಯರಿಗೆ ಸಾಕಷ್ಟು ಅನುಕೂಲವಾಗುತ್ತಿದೆ ಎಂದು ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಈ ಕಿಯೋಸ್ಕ್‌ಗಳ ಬಳಕೆಯೂ ಆರಂಭವಾಗಿದೆ. ಕಲಬುರಗಿ ಮಾತ್ರವಲ್ಲದೇ ರಾಯಚೂರು, ಯಾದಗಿರಿ, ಬಳ್ಳಾರಿ, ವಿಜಯಪುರ ಭಾಗದಿಂದಲೂ ಕಲಬುರಗಿಗೆ ಆಗಮಿಸುವವರು ಇದರ ಸೇವೆಯನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಆರೋಗ್ಯ ಇಲಾಖೆಯ ಮೂಲಕ ಕಿಯೋಸ್ಕ್‌ಗಳ ಬಳಕೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

ಒಟ್ಟಿನಲ್ಲಿ ರಾಜ್ಯ ಸರ್ಕಾರವು 'ಆರೋಗ್ಯ ಮಿತ್ರ' ಯೋಜನೆಯಡಿ ಹೆಲ್ತ್ ಎಟಿಹೆಚ್ ಎಂಬ ವಿನೂತನ ಸೌಲಭ್ಯಕ್ಕೆ ಚಾಲನೆ ನೀಡಿದ್ದು, ಇದು ಆರೋಗ್ಯ ಸುಧಾರಣೆಯಲ್ಲಿ ಸಾಕಷ್ಟು ಮಹತ್ವದ ಪಾತ್ರ ನಿರ್ವಹಣೆ ಮಾಡುವ ಜೊತೆಗೆ ಆರೋಗ್ಯ ಸೇವೆಯನ್ನು ಇನ್ನಷ್ಟು ಜನರ ಹತ್ತಿರಕ್ಕೆ ತೆಗೆದುಕೊಂಡು ಹೋಗಲಿದೆ. ■



Downloaded From:www.kpscvaani.com






# ದಸರಾ ವಸ್ತು ಪ್ರದರ್ಶನದಲ್ಲಿ ಪಂಚ ಗ್ಯಾರಂಟಿಗಳ ದರ್ಬಾರ್

**ಮುಖ್ಯಮಂತ್ರಿ ಅವರಿಂದ ಮೆಚ್ಚುಗೆ ಗಳಿಸಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನಿರ್ಮಿಸಿರುವ ಪಂಚ ಗ್ಯಾರಂಟಿಗಳ ಕುರಿತ ಮಳಿಗೆ.**

ಅಶೋಕ್ ಕುಮಾರ್. ಡಿ

ಮುಖ್ಯಮಂತ್ರಿ ಅವರಿಂದ ಮೆಚ್ಚುಗೆ ಗಳಿಸಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನಿರ್ಮಿಸಿರುವ ಪಂಚ ಗ್ಯಾರಂಟಿಗಳ ಕುರಿತ ಮಳಿಗೆ.

ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ವಾರ್ತಾ ಇಲಾಖೆಯು ನಿರ್ಮಿಸಿರುವ ರಾಜ್ಯ ಸರ್ಕಾರದ ಜನಪ್ರಿಯ ಹಾಗೂ ಜನಪರ ಪಂಚ ಗ್ಯಾರಂಟಿಗಳ ಮಳಿಗೆಯು ಜನರನ್ನು ತನ್ನತ್ತ ಸೆಳೆಯುವುದರೊಂದಿಗೆ ಮುಖ್ಯಮಂತ್ರಿಗಳ ಮೆಚ್ಚುಗೆಗೂ ಪಾತ್ರವಾಗಿದೆ.

ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಭವ್ಯವಾಗಿ ಮೂಡಿಬಂದಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಹಾಕಲಾಗಿರುವ ಮಳಿಗೆಯಲ್ಲಿ ನುಡಿದಂತೆ ನಡೆದಿದ್ದೇವೆ ಎನ್ನುವುದರೊಂದಿಗೆ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಭರಪೂರ ಮಾಹಿತಿಯು ಸರ್ಕಾರ ನಮಗೆ ಇಷ್ಟೆಲ್ಲಾ ಕೊಟ್ಟಿದೆಯಾ ಎಂದು ಆಶ್ಚರ್ಯ ವ್ಯಕ್ತಪಡಿಸುವಂತೆ ಮಾಡುವುದರೊಂದಿಗೆ ಮಳಿಗೆ ಉದ್ಘಾಟಿಸಿದ ಮುಖ್ಯಮಂತ್ರಿ ಅವರು ಸರ್ಕಾರದ ಯೋಜನೆಗಳನ್ನು ಜನರ ಬಳಿಗೆ ಕೊಂಡೊಯ್ಯುವ ವಾರ್ತಾ ಇಲಾಖೆಯ ಪ್ರಯತ್ನವನ್ನು ಶ್ಲಾಘಿಸಿದರು.



Downloaded From:www.kpscvaani.com










ಪ್ರಮುಖ ಐದು ಗ್ಯಾರಂಟಿಗಳಾದ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಹಾಗೂ ಯುವನಿಧಿ ಯೋಜನೆಗಳ ಅನುಕೂಲ ಪಡೆದ ಮತ್ತು ಪಡೆಯಲಿರುವ ಫಲಾನುಭವಿಗಳ ಅಂಕಿ ಸಂಖ್ಯೆ ನೀಡಲಾಗಿದೆ. ಈ ಯೋಜನೆಗಳಲ್ಲಿ ನೊಂದಾಯಿಸಿ ಕೊಳ್ಳದಿರುವವರು ಹೇಗೆ ನೋಂದಾಯಿಸಿ ಕೊಳ್ಳಬೇಕೆಂಬುದನ್ನು ಕೂಡ ವಾರ್ತಾ ಇಲಾಖೆಯ ಸ್ವಯಂ ಸೇವಕರು ಮಳಿಗೆಯಲ್ಲಿ ಮಾಹಿತಿ ನೀಡುತ್ತಿದ್ದಾರೆ.

ಗ್ಯಾರಂಟಿ ಯೋಜನೆಗಳು ಮಹಿಳೆಯರ, ಯುವಕ ಯುವತಿಯರ, ಹಿಂದುಳಿದ ಅಲ್ಪಸಂಖ್ಯಾತರ, ಗೃಹಿಣಿಯರ ಮನೋಸ್ಥೈರ್ಯವನ್ನು ಹೆಚ್ಚಿಸಿವೆ. ಇನ್ನು ಮಳಿಗೆ ನೋಡಲು ಬರುತ್ತಿರುವ ಬಹಳಷ್ಟು ಮಹಿಳೆಯರು ಸಿದ್ದರಾಮಯ್ಯನವರ ಕಟೌಟ್‌ಗೆ ಕೈ ಮುಗಿದದ್ದೂ ಇದೆ.

ಬಹಳ ಅಂದ ಹಾಗೂ ಆಕರ್ಷಕವಾಗಿ ಮೂಡಿಬಂದಿರುವ ಮತ್ತು ಜೀವಂತಿಕೆಗೆ ಹತ್ತಿರವಾಗಿರುವ ಬೊಂಬೆಗಳ ಕಲಾಕೃತಿಗಳು ಯೋಜನೆಯ ಸಾರಾಂಶವನ್ನು ಮನದಟ್ಟು ಮಾಡಲು ಮತ್ತಷ್ಟು ಸಾಥ್ ನೀಡುತ್ತಿವೆ.

ಕನ್ನಡದ ಮೊದಲ ಗ್ರಂಥ, ಮೊದಲ ಕಾವ್ಯ, ಕೃತಿ, ಮೊದಲ ಚಲನಚಿತ್ರ, ಕನ್ನಡದ ಕವಿಗಳು, ಸಾಹಿತಿಗಳು, ಶರಣರು, ನಾಡಿಗೆ ನಾಲ್ವಡಿಯವರ ಕೊಡುಗೆಗಳು, ಭಾರತ ರತ್ನ ಪಡೆದ ಕನ್ನಡಿಗರು ಸೇರಿದಂತೆ ವಿವಿಧ ಮಾಹಿತಿಗಳು ಮೇಳೈಸಿವೆ.

ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾಗ ನೀಡಿದ್ದ ಯೋಜನೆಗಳಾದ ಜನತಾದರ್ಶನ, ಇಂದಿರಾ ಕ್ಯಾಂಟೀನ್, ಬ್ರಾಂಡ್ ಬೆಂಗಳೂರು, ಪಿಟಿಸಿಎಲ್ ಕಾಯ್ದೆ ತಿದ್ದುಪಡಿ, ಕ್ಷೀರಭಾಗ್ಯ ಯೋಜನೆಗಳ ಮಾಹಿತಿ ಮಹತ್ವದ್ದಾಗಿದೆ.

ಸರ್ಕಾರದ ಎಲ್ಲಾ ಯೋಜನೆಗಳು ಆಕರ್ಷಕ ಹಾಗೂ ಮಾಹಿತಿ ಪೂರ್ಣವಾಗಿದ್ದು ಈಗಾಗಲೇ ರಾಜ್ಯದ ಶೇ.92 ರಷ್ಟು ಜನಕ್ಕೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ತಲುಪುತ್ತಿವೆ.

ಸಂವಿಧಾನ ಪೀಠಿಕೆಯ ಜಾಗತಿಕ ವಾಚನದ ವಿಶ್ವದಾಖಲೆ ಮಾಡಿದ 2,31,66,401 ಜನರಿಗೆ ಧನ್ಯವಾದ ಹೇಳಲಾಗಿದೆ.

ಸ್ತ್ರೀ ಸ್ವಾತಂತ್ರ್ಯದತ್ತ ದಿಟ್ಟಹೆಜ್ಜೆ, ನಾಲ್ವಡಿಯವರ ಸಾಮಾಜಿಕ ಕಾನೂನುಗಳು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಯವ್ಯಯ ಮಂಡನೆಯ ಚರಿತ್ರಾರ್ಹ ದಾಖಲೆ, ಲೇಸ್ಲಿ ಮಿಲ್ಲರ್ ಸಮಿತಿ, ಪಾಲ್ಕೆ ಪುರಸ್ಕೃತರ ವಿವರಗಳು ಅಂದವಾಗಿ ಮೂಡಿಬಂದಿವೆ.


ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಎನ್. ಜಯರಾಂ ಮತ್ತು ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಅವರ ಮುತುವರ್ಜಿಯಲ್ಲಿ ಮೂಡಿಬಂದಿರುವ ಮಳಿಗೆ ಸಾರ್ವಜನಿಕರನ್ನು ತನ್ನತ್ತ ಸೆಳೆಯುತ್ತಿದೆ.


Downloaded From:www.kpscvaani.com









# ವಿಶ್ವಕರ್ಮ ಜನಾಂಗದವರಿಗಾಗಿ ವಿವಿಧ ಯೋಜನೆಗಳು



ಪಿ. ಕೌಸಲ್ಯ

**ಒಂ**ದು ಕಲ್ಲು ಬಂಡೆ ಅಥವಾ ಮರಕ್ಕೆ ಸುಂದರವಾಗಿ ಕೆತ್ತನೆ ಮಾಡಿ ರೂಪ ನೀಡುವುದರ ಜೊತೆಗೆ ಅದಕ್ಕೆ ಜೀವ ತುಂಬುವವರು ವಿಶ್ವಕರ್ಮ ಜನಾಂಗದವರು. ಇದು ಆ ಜನಾಂಗದವರಿಗೆ ಒಲಿದಿರುವ ವಿಶೇಷ ದೈವಿಕ ಕಲೆ. ಈ ಜನಾಂಗದವರ ಪ್ರತಿಭೆಗೆ ನಾಡಿನ ಎಲ್ಲೆಡೆಯಿರುವ ಅದ್ಭುತ ಶಿಲಾ ದೇಗುಲಗಳೇ ಸಾಕ್ಷಿಯಾಗಿವೆ.

ಇಡೀ ವಿಶ್ವದ ಪ್ರಪ್ರಥಮ ಇಂಜಿನಿಯರ್ ಹಾಗೂ ವಾಸ್ತುಶಿಲ್ಪ ಶಾಸ್ತ್ರಜ್ಞರು ವಿಶ್ವಕರ್ಮ ಜನಾಂಗದವರು. ಸ್ವರ್ಗಲೋಕ, ದೇವಲೋಕ ಹಾಗೂ ಹತ್ತಾರು ಸುಂದರ ನಗರಗಳ ಸೃಷ್ಟಿಕರ್ತರು ಇವರೇ. ಇಂದ್ರ, ಸೂರ್ಯ ಹಾಗೂ ಅಗ್ನಿಯ ಗುಣವಾಗಿ ವಿಶ್ವಕರ್ಮರ ಬಗ್ಗೆ ಪುರಾಣಗಳಲ್ಲಿ ಉಲ್ಲೇಖವಿದೆ. ಪುರಾಣದ ಪುಷ್ಪಕ ವಿಮಾನದ ನಿರ್ಮಾತೃ ವಿಶ್ವಕರ್ಮರಾಗಿದ್ದು, ದೈವಿಕ ಪರಂಪರೆಯಲ್ಲಿ ಅವರ ಸ್ಥಾನ ಬಹುಮುಖ್ಯವಾಗಿತ್ತು ಎಂಬುದನ್ನು ಅರಿಯಬಹುದಾಗಿದೆ.

ಇಂತಹ ಜನಾಂಗಕ್ಕೆ ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯನ್ನು ತಮ್ಮ ಕೈ ಮತ್ತು ಉಪಕರಣಗಳೊಂದಿಗೆ ಕೆಲಸ ಮಾಡುವ ಕರಕುಶಲಿಗರು ಮತ್ತು ಕುಶಲಕರ್ಮಿಗಳಿಗೆ ಸಂಪೂರ್ಣ ಬೆಂಬಲವನ್ನು ಒದಗಿಸಲು ಪ್ರಧಾನ ಮಂತ್ರಿಯವರು 17ನೇ ಸೆಪ್ಟೆಂಬರ್, 2023 ರಂದು ಪ್ರಾರಂಭಿಸಿದ್ದಾರೆ. ಬಡಗಿ, ದೋಣಿ ತಯಾರಕರು, ಶಸ್ತ್ರಾಸ್ತ್ರ ತಯಾರಿಸುವವರು (ಆರ್ಮರ್), ಕಮ್ಮಾರರು, ಸುತ್ತಿಗೆ ಮತ್ತು ಟೂಲ್ ಕಿಟ್ ಮಾಡುವವರು, ಬೀಗ ತಯಾರಿಸುವವರು, ಅಕ್ಕಸಾಲಿಗರು, ಕುಂಬಾರರು, ಶಿಲ್ಪಿಗಳು, ಕಲ್ಲು ಒಡೆಯುವವರು, ಚಮ್ಮಾರರು, ಬುಟ್ಟಿ, ಚಾಪೆ, ಪೊರಕೆ, ಸೆಣಬು ನೇಯುವವರು, ಸಾಂಪ್ರದಾಯಿಕ ಗೊಂಬೆ ಮತ್ತು ಆಟಿಕೆ ತಯಾರಕರು, ಕ್ಷೌರಿಕರು, ಹೂಮಾಲೆ ತಯಾರಕರು, ಮಡಿವಾಳರು, ಟೈಲರ್ ಮತ್ತು ಮೀನಿನ ಬಲೆಯ ತಯಾರಕರು ಸೇರಿದಂತೆ 18 ರೀತಿಯ ವ್ಯಾಪಾರಗಳಲ್ಲಿ ತೊಡಗಿರುವ ಕರಕುಶಲಿಗರು ಮತ್ತು ಕುಶಲಕರ್ಮಿಗಳನ್ನು ಈ ಯೋಜನೆಯು ಒಳಗೊಳ್ಳುತ್ತದೆ.



Downloaded From:www.kpscvaani.com



ಈ ಯೋಜನೆಯಡಿ ಕುಶಲಕರ್ಮಿಗಳು ಮತ್ತು ಕರಕುಶಲಿಗರಿಗೆ  ಪಿ.ಎಂ ವಿಶ್ವಕರ್ಮ ಪ್ರಮಾಣಪತ್ರ ಮತ್ತು ಐಡಿ ಕಾರ್ಡ್ ಮೂಲಕ ಕುಶಲಕರ್ಮಿಗಳು ಮತ್ತು ಕರಕುಶಲಿಗರನ್ನು ಗುರುತಿಸಲಾಗುತ್ತದೆ. ಅಲ್ಲದೆ ಈ ಕೆಳಕಂಡ ಸೇವಾಸೌಲಭ್ಯಗಳನ್ನು ನೀಡಲಾಗುತ್ತದೆ.

**ಕೌಶಲ್ಯ ಉನ್ನತೀಕರಣ:** 5 ರಿಂದ 7 ದಿನಗಳ ಮೂಲಭೂತ ತರಬೇತಿ ಮತ್ತು 15 ದಿನಗಳ ಅಥವಾ ಅದಕ್ಕಿಂತ ಹೆಚ್ಚಿನ ಸುಧಾರಿತ ತರಬೇತಿ ಜೊತೆಗೆ ದಿನಕ್ಕೆ ರೂ.500/ಗಳ ಶಿಷ್ಯವೇತನ ನೀಡಲಾಗುತ್ತದೆ.

**ಟೂಲ್ ಕಿಟ್ ಪ್ರೋತ್ಸಾಹ:** ರೂ.15,000/ ವರೆಗಿನ ಟೂಲ್ ಕಿಟ್ ಅನ್ನು ಈ ಯೋಜನೆಯಡಿ ಪ್ರೋತ್ಸಾಹವಾಗಿ ನೀಡಲಾಗುವುದು. ಮೂಲಭೂತ ಕೌಶಲ್ಯ ತರಬೇತಿಯ ಆರಂಭದಲ್ಲಿ ಇ-ವೋಚರ್ಗಳ ರೂಪದಲ್ಲಿ ಕೂಡ ಮಾಡಲಾಗುವುದು.

**ಸಾಲದ ನೆರವು:** ಭಾರತ ಸರ್ಕಾರದ ಶೇ.8 ರಷ್ಟು ಸಹಾಯಧನದೊಂದಿಗೆ, ಮೇಲಾಧಾರ ಉಚಿತ 'ಉದ್ಯಮ ಅಭಿವೃದ್ಧಿ ಸಾಲ'ವನ್ನು  3 ಲಕ್ಷ ರೂ. ವರೆಗೆ ಎರಡು ಹಂತಗಳಲ್ಲಿ 1 ಲಕ್ಷ ರೂ ಮತ್ತು 2 ಲಕ್ಷಕ್ಕೆ ಅನುಕ್ರಮವಾಗಿ 18 ತಿಂಗಳು ಮತ್ತು 30 ತಿಂಗಳುಗಳ ಅವಧಿಯೊಂದಿಗೆ ರಿಯಾಯಿತಿ ದರದಲ್ಲಿ ಶೇ. 5ಕ್ಕೆ ನಿಗಧಿಪಡಿಸಲಾಗಿದೆ. ಮೂಲ ತರಬೇತಿಯನ್ನು ಪೂರ್ಣಗೊಳಿಸಿದ ಫಲಾನುಭವಿಗಳು 1 ಲಕ್ಷ ರೂ. ವರೆಗಿನ ಮೊದಲ ಹಂತದ ಸಾಲದ ನೆರವನ್ನು ಪಡೆಯಲು ಅರ್ಹರಾಗಿರುತ್ತಾರೆ. ಎರಡನೇ ಸಾಲದ ಭಾಗವು 1ನೇ ಕಂತನ್ನು ಪಡೆದುಕೊಂಡ ಮತ್ತು ಪ್ರಮಾಣಿತ ಸಾಲದ ಖಾತೆಯನ್ನು ನಿರ್ವಹಿಸಿದ ಮತ್ತು ತಮ್ಮ ವ್ಯವಹಾರದಲ್ಲಿ ಡಿಜಿಟಲ್ ವಹಿವಾಟುಗಳನ್ನು ಅಳವಡಿಸಿಕೊಂಡ ಅಥವಾ ಸುಧಾರಿತ ತರಬೇತಿ ಪಡೆದ ಫಲಾನುಭವಿಗಳಿಗೆ ಲಭ್ಯವಿರುತ್ತದೆ.

**ಡಿಜಿಟಲ್ ವಹಿವಾಟಿಗೆ ಪ್ರೋತ್ಸಾಹ:** ಒಂದು ಮೊತ್ತದ 1 ರೂಪಾಯಿಯನ್ನು ಪ್ರತಿ ಡಿಜಿಟಲ್ ವಹಿವಾಟಿಗೆ ಗರಿಷ್ಠ 100 ವಹಿವಾಟುಗಳವರೆಗೆ ಮಾಸಿಕ ಪ್ರತಿ ಡಿಜಿಟಲ್ ಪೇ-ಔಟ್ ಅಥವಾ ರಸೀದಿಗಾಗಿ ಫಲಾನುಭವಿಯ ಖಾತೆಗೆ ಜಮಾ ಮಾಡಲಾಗುತ್ತದೆ.

**ಮಾರ್ಕೆಟಿಂಗ್ ಬೆಂಬಲ:** ಗುಣಮಟ್ಟದ ಪ್ರಮಾಣೀಕರಣ, ಬ್ರಾಂಡಿಂಗ್, ಇ-ಕಾಮರ್ಸ್ ವೇದಿಕೆಗಳಾದ ಜಿಇಎಂ, ಜಾಹಿರಾತು, ಪ್ರಚಾರ ಮತ್ತು ಇತರ ಮಾರ್ಕೆಟಿಂಗ್ ಚಟುವಟಿಕೆಗಳಲ್ಲಿ ಮೌಲ್ಯ ಸರಪಳಿಗೆ ಸಂಪರ್ಕವನ್ನು ಸುಧಾರಿಸಲು ಕುಶಲಕರ್ಮಿಗಳು ಮತ್ತು ಕರಕುಶಲಿಗರಿಗೆ ಮಾರ್ಕೆಟಿಂಗ್ ಬೆಂಬಲವನ್ನು ಒದಗಿಸಲಾಗುತ್ತದೆ. ಮೇಲೆ ತಿಳಿಸಿದ ಪ್ರಯೋಜನಗಳ ಜೊತೆಗೆ, ಔಪಚಾರಿಕ ಅತಿ ಸಣ್ಣ, ಸಣ್ಣ ಮತ್ತು ಮಾಧ್ಯಮ ಉದ್ಯಮಗಳ ವ್ಯವಸ್ಥೆಯಲ್ಲಿ 'ಉದ್ಯಮಿಗಳನ್ನಾಗಿ' ಉದ್ಯಮ್ ಅಸಿಸ್ಟ್ ಫ್ಲಾಟ್ ಫಾರಂ'ನಲ್ಲಿ ಫಲಾನುಭವಿಗಳನ್ನು ಈ ಯೋಜನೆಯು ಸೇರಿಸುತ್ತದೆ. ಪಿಎಂ ವಿಶ್ವಕರ್ಮ ಪೋರ್ಟಲ್‌ನಲ್ಲಿ ಆಧಾರ್ ಆಧಾರಿತ ಬಯೋಮೆಟ್ರಿಕ್ ದೃಢೀಕರಣದೊಂದಿಗೆ ಸಾಮಾನ್ಯ ಸೇವಾ ಕೇಂದ್ರಗಳ ಮೂಲಕ ಫಲಾನುಭವಿಗಳ ನೋಂದಣಿಯನ್ನು ಮಾಡಲಾಗುತ್ತದೆ. ಫಲಾನುಭವಿಗಳ ದಾಖಲಾತಿಯು ಮೂರು ಹಂತದ ಪರಿಶೀಲನೆಯನ್ನು ಅನುಸರಿಸುತ್ತದೆ. ಇದರಲ್ಲಿ ಗ್ರಾಮ ಪಂಚಾಯತ್, ಯು.ಎಲ್.ಬಿ ಮಟ್ಟದಲ್ಲಿ ಪರಿಶೀಲನೆ, ಜಿಲ್ಲಾ ಅನುಷ್ಠಾನ ಸಮಿತಿಯ ಪರಿಶೀಲನೆ ಮತ್ತು ಶಿಫಾರಸ್ಸು, ಪರಿಶೀಲನಾ ಸಮಿತಿ ಸ್ಕ್ರಿನಿಂಗ್ ಕಮಿಟಿಯಿಂದ ಅನುಮೋದನೆಗೊಳ್ಳುತ್ತದೆ.

ಪಿಎಂ ವಿಶ್ವಕರ್ಮದ ಮಾರ್ಗಸೂಚಿಗಳನ್ನು pmvishwakarma.gov.in ನಲ್ಲಿ ಕಾಣಬಹುದು. ಯಾವುದೇ ಪ್ರಶ್ನೆಗಳಿಗೆ, ಕುಶಲಕರ್ಮಿಗಳು ಮತ್ತು ಕರಕುಶಲಿಗರು 18002677777ಕ್ಕೆ ಕರೆ ಮಾಡಬಹುದು ಅಥವಾ http:pm-vishwakarma@dcmsme.gov.in ಗೆ ಇ-ಮೇಲ್ ಮಾಡಬಹುದು. ಕೇಂದ್ರ ಸರ್ಕಾರದ ಈ ಯೋಜನೆಯನ್ನು ವಿಶ್ವಕರ್ಮ ಜನಾಂಗದವರು ಸದುಪಯೋಗ ಪಡಿಸಿಕೊಂಡು ಸಮಾಜದ ಮುಖ್ಯವಾಹಿನಿಯಲ್ಲಿ ಸೇರಬೇಕೆಂಬುದು ಉದ್ದೇಶವಾಗಿದೆ.



Downloaded From:www.kpscvaani.com



# ಆನ್‌ಲೈನ್ ವಂಚನೆ ಬಗ್ಗೆ ಇರಲಿ ಎಚ್ಚರ

ಉಮೇಶ್ ಕೊಲಿಗೆರೆ

**ಈ**ಗಂತೂ ಅಂತರ್ಜಾಲವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ದಿನೇ ದಿನೇ ಆಡಳಿತದಲ್ಲಿ, ವ್ಯಾಪಾರ ವಹಿವಾಟಿನಲ್ಲಿ, ಶಿಕ್ಷಣ, ಮಾಹಿತಿ ಗ್ರಹಿಕೆ, ಆಟ, ಚಲನಚಿತ್ರ, ಹಣಕಾಸು ವಹಿವಾಟು, ಸಂಪರ್ಕ ಸೇರಿದಂತೆ ಇನ್ನು ಹಲವಾರು ವಲಯಗಳಲ್ಲಿ ಅಂತರ್ಜಾಲ ಬಳಕೆದಾರರ ಸಂಖ್ಯೆ ತೀವ್ರಗತಿಯಲ್ಲಿ ಏರಿಕೆಯಾಗುತ್ತಿದೆ.

ದೇಶದ ಜನಸಂಖ್ಯೆ 140 ಕೋಟಿಯಷ್ಟಾಗಿದ್ದರೆ, ಅದರಲ್ಲಿ 84 ಕೋಟಿ ಜನರು ಅಂತರ್ಜಾಲ-ಇಂಟರ್‌ನೆಟ್ ಬಳಕೆ ಮಾಡುತ್ತಿದ್ದಾರೆ. ಇದು ಒಟ್ಟು ಜನಸಂಖ್ಯೆಯ ಶೇ.57ರಷ್ಟಿದೆ. ದೇಶದ 120 ಕೋಟಿಗೂ ಹೆಚ್ಚು ಜನ ಮೊಬೈಲ್ ಹೊಂದಿದ್ದರೆ, ಅವರಲ್ಲಿ 60 ಕೋಟಿಯಷ್ಟು ಜನರು ಸ್ಮಾರ್ಟ್ ಫೋನ್‌ಗಳನ್ನು ಬಳಸುತ್ತಾರೆ. ತಂತ್ರಜ್ಞಾನ ಈಗ 5ಜಿ ಹಂತ ದಾಟಿದೆ.

ಕೃಷಿ ಮಾರುಕಟ್ಟೆಯ ದರ, ಹವಮಾನ ಸೇರಿದಂತೆ ಉಪಯುಕ್ತ ಮಾಹಿತಿಗಳನ್ನು ಮನೆಯಲ್ಲೇ ಕುಳಿತು ಕ್ಷಣಾರ್ಧದಲ್ಲಿ ಪಡೆಯಬಹುದು. ಆನ್‌ಲೈನ್‌ನಲ್ಲಿ ಊಟ ಆರ್ಡರ್ ಮಾಡಿದಷ್ಟೇ ಸಲೀಸಾಗಿ ಜೀವರಕ್ಷಕ ಔಷಧಿಗಳನ್ನೂ ಖರೀದಿಸಬಹುದು. ವೈದ್ಯರ ಸಲಹೆ, ಶಿಫಾರಸ್ಸುಗಳನ್ನು ಪಡೆಯಬಹುದು. ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಲ್ಲಿ ಕ್ಲಿಷ್ಟಕರ ಕೆಲಸಗಳನ್ನು ಸುಲಭವಾಗಿ ನಿರ್ವಹಿಸಬಹುದು. ಅಂಗೈ ಅಗಲದ ಜಂಗಮವಾಣಿ (ಮೊಬೈಲ್) ಇದ್ದರೆ ಸಾಕು, ಕುಳಿತಲ್ಲಿಯೇ ಹೊಸ ಜಗತನ್ನು ಸೃಷ್ಟಿಸಿಕೊಳ್ಳುವಷ್ಟರ ಮಟ್ಟಿಗೆ ತಂತ್ರಜ್ಞಾನ ಬೆಳೆಯುವ ಜೊತೆಗೆ ಅಪಾಯಕಾರಿಯಾಗಿಯೂ ಪರಿಣಮಿಸುತ್ತಿದೆ.

ದೈಹಿಕ ಬಲಪ್ರಯೋಗ, ರಕ್ತಸಿಕ್ತ ಅಪರಾಧಗಳ ಪ್ರಮಾಣಕ್ಕಿಂತಲೂ ವೈಟ್‌ಕಾಲರ್ ಕ್ರೈಮ್‌ಗಳು ಏರಿಕೆಯಾಗುತ್ತಿವೆ. ಐಪಿಸಿ ಹಾಗೂ ವಿಶೇಷ ಸ್ಥಳೀಯ ಕಾಯ್ದೆಗಳ ಅಡಿ ದಾಖಲಾಗಿರುವ ಪ್ರಕರಣಗಳಿಗಿಂತಲೂ ಸೈಬರ್ ಕ್ರೈಮ್‌ಗಳು ತೀವ್ರ ಗತಿಯಲ್ಲಿ ಏರಿಕೆಯಾಗುತ್ತಿವೆ.

ಕೇಂದ್ರ ಗೃಹ ಇಲಾಖೆಯ ಎನ್‌ಸಿಆರ್‌ಬಿ ಮಾಹಿತಿ ಅನುಸಾರ 1980ರಲ್ಲಿ 13 ಲಕ್ಷದಷ್ಟಿದ್ದ ಕ್ರಿಮಿನಲ್ ಪ್ರಕರಣಗಳು 2019ರ ವೇಳೆಗೆ ಮೂರುಪಟ್ಟು ಮೀರಿ 51.56 ಲಕ್ಷದಷ್ಟಾಗಿವೆ. ಜೊತೆಗೆ ಸೈಬರ್ ಕ್ರೈಮ್ ಠಾಣೆಗಳಲ್ಲಿ 2017ರಲ್ಲಿ 44 ಸಾವಿರ, 2018ರಲ್ಲಿ 50 ಸಾವಿರ, 2019ರಲ್ಲಿ 52 ಸಾವಿರ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ವಂಚನೆ ಉದ್ದೇಶವನ್ನೊಳಗೊಂಡ ಶೇ.60ರಷ್ಟು, ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಶೇ.8ರಷ್ಟು, ಶೇ.15ರಷ್ಟು ಘನತೆಗೆ ಧಕ್ಕೆ ತರುವಂತಹ ಸ್ವರೂಪದ ಪ್ರಕರಣಗಳು ಕಂಡುಬಂದಿವೆ.

ನಡು ರಸ್ತೆಯಲ್ಲಿ ಅಡ್ಡ ಹಾಕಿ ಸುಲಿಗೆ ಮಾಡುವವರಿಗಿಂತ, ನಯವಾಗಿ ಮಾತನಾಡಿ ಸಹಾಯ ಮಾಡುವ ನೆಪದಲ್ಲಿ ಒಟಿಪಿ ಪಡೆದು ಕ್ಷಣಾರ್ಧದಲ್ಲಿ


Downloaded From:www.kpscvaani.com

ಸಾವಿರಾರು ರೂಪಾಯಿ ಲಪಟಾಯಿಸುವವರ ಪ್ರಮಾಣ ಹೆಚ್ಚಾಗಿದೆ. ಕೊಂಚ ಯಾಮಾರಿದರೂ ಖಾಸಗಿ ಹಾಗೂ ವೈಯಕ್ತಿಕ ಮಾಹಿತಿಯನ್ನು ಕದ್ದು ಮತ್ತಷ್ಟು ಅಪಾಯಕ್ಕೆ ಸಿಲುಕಿಸುವ ದೊಡ್ಡ ಜಾಲಗಳೇ ತಲೆ ಎತ್ತಿವೆ. ಅಂತರ್ಜಾಲ ಬಳಕೆ ಹೆಚ್ಚುತ್ತಿರುವ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ವಿದ್ಯುನ್ಮಾನ ಭೂಗತಲೋಕ, ವ್ಯಕ್ತಿಗತ ಸಮಸ್ಯೆಯಾಗಿರದೆ ಜಾಗತಿಕ ಬೆದರಿಕೆಯಾಗಿ ಬದಲಾಗಿದೆ.

ಸಾಮಾನ್ಯ ಪೊಲೀಸ್ ಠಾಣೆಗಳಲ್ಲಿ ವರ್ಷಕ್ಕೆ 200 ರಿಂದ 500 ಪ್ರಕರಣಗಳು ದಾಖಲಾದರೆ ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ ಅಪರಾಧಗಳ ನಿಗ್ರಹಕ್ಕಾಗಿ ಸ್ಥಾಪಿಸಲಾದ (ಸಿಇಎನ್) ಪೊಲೀಸ್ ಠಾಣೆಗಳಲ್ಲಿ ಕನಿಷ್ಠ 750 ರಿಂದ 1500 ಸಾವಿರದವರೆಗೂ ಪ್ರಕರಣಗಳು ದಾಖಲಾಗುತ್ತಿವೆ. ಅವುಗಳಲ್ಲಿ ಬಹುತೇಕ ಒಟಿಪಿ ಆಧಾರಿತ ವಂಚನೆಗಳೇ ಹೆಚ್ಚಾಗಿರುತ್ತವೆ.

ಮನೆಯಲ್ಲೇ ಕುಳಿತು ಸಾವಿರಾರು ರೂಪಾಯಿ ದುಡಿಯುವ ಆನ್‌ಲೈನ್ ಕೆಲಸದ ಆಮಿಶ ಒಡ್ಡಿ ಬಲೆ ಬೀಸಲಾಗುತ್ತದೆ. ಕೆಲಸಕ್ಕಾಗಿ ನೋಂದಣಿಯಾಗುವುದು ಅನಿವಾರ್ಯ ಎಂದು ಹೇಳಿ, ನೋಂದಣಿಗೆ ಕನಿಷ್ಠ ಪ್ರಮಾಣದ ಹಣ ಪಾವತಿಸುವಂತೆ ಪ್ರೇರೇಪಿಸಲಾಗುತ್ತದೆ. ಎಸ್‌ಎಂಎಸ್, ಇ-ಮೇಲ್, ವಾಟ್ಸ್‌ಆ್ಯಪ್, ಟೆಲಿಗ್ರಾಮ್, ಫೇಸ್‌ಬುಕ್ ಮೆಸೆಂಜರ್ ಇವುಗಳಾವುದಾದರೊಂದರಲ್ಲಿ ಲಿಂಕ್ ಕಳುಹಿಸಲಾಗುತ್ತದೆ. ಆ ಲಿಂಕ್‌ನಲ್ಲಿನ ಆ್ಯಪ್ ಡೌನ್‌ಲೋಡ್ ಮಾಡಿಕೊಂಡರೆ ಹಣ ಪಾವತಿ, ನೋಂದಣಿ ಹಾಗೂ ಮುಂದೆ ಸಂಪರ್ಕ ಸುಲಭವಾಗಿರಲಿದೆ ಎಂದು ನಂಬಿಸಲಾಗುತ್ತದೆ. ಸೈಬರ್ ಕಳ್ಳರು ಹೇಳುವ ಆ್ಯಪ್ ಬಳಕೆದಾರರ ವಿದ್ಯುನ್ಮಾನ ಸಲಕರಣೆಗೆ ಸೇರಿದರೆ ಅಲ್ಲಿಂದ ವಂಚಕರ ಆಟ ಶುರುವಾಗುತ್ತದೆ.

ವಂಚಕರ ಸಲಹೆ ಆಧಾರಿಸಿ ಬಹಳಷ್ಟು ಮಂದಿ ಆನ್‌ಲೈನ್ ಬ್ಯಾಂಕಿಂಗ್‌ನ ಲಾಗಿನ್ ಕ್ರೆಡೆನ್ಸಿಯಲ್, ಇಲ್ಲವೇ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮಾಹಿತಿ ದಾಖಲಿಸಿ ಶುಲ್ಕ ಪಾವತಿಸುತ್ತಾರೆ. ಆ್ಯಪ್ ಡೌನ್‌ಲೋಡ್ ಆಗುತ್ತಿದ್ದಂತೆ ಟಿಮ್ ವ್ಹಿವರ್ ನಂತಹ ಮಾಲ್ವೇರ್ ವಿದ್ಯುನ್ಮಾನ ಸಲಕರಣಕ್ಕೆ ಬಂದು ಕುಳಿತು ಬಿಡುತ್ತದೆ. ಬಳಕೆದಾರರೆ ಕಾರ್ಡ್ ಅಥವಾ ಲಾಗಿನ್ ಕ್ರೆಡೆನ್ಸಿಯಲ್ ನೀಡುವುದರಿಂದ ಕಳ್ಳನ ಕೈಗೆ ತಿಜೋರಿ ಕೀ ಸಿಕ್ಕಂತಾಗುತ್ತದೆ. ಬಳಕೆದಾರರ ಅರಿವಿಗೆ ಬರದಂತೆ ಬ್ಯಾಂಕ್ ಖಾತೆಯಿಂದ ಹಣ ಬರಿದಾಗಲಾರಂಭವಾಗುತ್ತದೆ. ಕೆಲವು ವೇಳೆ ಹಣ ಕಡಿತಗೊಂಡ ಎಸ್‌ಎಂಎಸ್ ಕೂಡ ಮೊಬೈಲ್‌ಗೆ ಬರದಂತೆ ಮಾಡುವ, ಬಂದರೂ ಗ್ರಾಹಕರ ಅರಿವಿಗೆ ಬರದಂತೆ ಅಳಿಸಿ ಹಾಕುವ ಕುತಂತ್ರವನ್ನು ಆನ್‌ಲೈನ್ ವಂಚಕರು ಮಾಡಿರುತ್ತಾರೆ. ಒಮ್ಮೆ ಜಾಲಕ್ಕೆ ಸಿಲುಕಿದರೆ ಎಚ್ಚೆತ್ತುಕೊಳ್ಳುವ ವೇಳೆಗೆ ಲಕ್ಷಾಂತರ ರೂಪಾಯಿ ಲಪಟಾಯಿಸಿರುತ್ತಾರೆ. ಕೆಲವು ಪ್ರಕರಣಗಳಲ್ಲಿ ಬೆದರಿಸಿಯೋ, ನಂಬಿಸಿಯೋ, ಆಮಿಷ ತೋರಿಸಿಯೋ ಗ್ರಾಹಕರಿಂದಲೇ ಲಕ್ಷಾಂತರ ರೂಪಾಯಿ ಸುಲಿಗೆ ಮಾಡಿ ನಾಪತ್ತೆಯಾಗುತ್ತಾರೆ.

ಇತ್ತೀಚೆಗೆ ವಿದೇಶಿ ವಿನಿಮಯ ಕಲ್ಟಿವೇಷನ್ ಹೆಸರಿನಲ್ಲಿ ತಾಂತ್ರಿಕ ಪದವೀಧರರನ್ನೇ ದಿಕ್ಕು ತಪ್ಪಿಸಿರುವ ಉದಾಹರಣೆಗಳಿವೆ. ದುಪ್ಪಟ್ಟು ಲಾಭದ ಆಮಿಷ ತೋರಿಸಿ ಸಾವಿರ ರೂಪಾಯಿ ಹಾಕಿಸಿ, ಲಕ್ಷಾಂತರ ಮಾಡಿಕೊಡುವುದಾಗಿ ನಂಬಿಸಿರುತ್ತಾರೆ. ಹಾಕಿದ್ದನ್ನು ವಾಪಾಸ್ ದುಡಿದುಕೊಳ್ಳಲು ಮತ್ತಷ್ಟು ಹಣ ತೊಡಗಿಸಬೇಕಾದ ಅನಿವಾರ್ಯತೆ ಸೃಷ್ಟಿಸುತ್ತಾರೆ. ಇದ್ದಕ್ಕಿದ್ದಂತೆ ಅಷ್ಟು ಹಣದೊಂದಿಗೆ ಆರೋಪಿಗಳು ಕಾಲ್ಕಿತ್ತಿರುತ್ತಾರೆ. ಆನ್‌ಲೈನ್ ಪರಿಚಯ, ಆನ್‌ಲೈನ್ ಸಂಭಾಷಣೆಯಷ್ಟಕ್ಕೆ ಸೀಮಿತವಾಗಿದ್ದ ಗ್ರಾಹಕರು ಆರೋಪಿಗಳ ತಲೆಬುಡ ಸಿಗದೆ ಅಸಹಾಯಕರಾಗಿರುತ್ತಾರೆ. ಗ್ರಾಹಕರಿಗೆ ಮೋಸ ಹೋಗುತ್ತಿರುವ ಅರಿವು ಬರುವ ವೇಳೆಗೆ ವಂಚಕರು ಯಾವುದೇ ಸುಳಿವು ನೀಡದೆ ಎಲ್ಲಾ ಡಿಜಿಟಲ್ ಸಾಕ್ಷ್ಯಗಳನ್ನು ಅಳಿಸಿ ನಾಪತ್ತೆಯಾಗುತ್ತಾರೆ. ಈ ಆರೋಪಿಗಳಿಗೆ ಕಾನೂನಿನಡಿ ಶಿಕ್ಷೆ ಕೊಡಿಸುವುದು ಬೆಟ್ಟ ಅಗೆದು ಇಲಿ ಹಿಡಿದಂತಾಗುತ್ತದೆ.

ಆರೋಪಿಗಳು ಬೆಂಗಳೂರಿನವರಾಗಿರಬಹುದು, ಉತ್ತರಪ್ರದೇಶ, ರಾಜಸ್ಥಾನ ಸೇರಿದಂತೆ ಯಾವುದೋ ಕುಗ್ರಾಮದವರಾಗಿರಬಹುದು. ಇತ್ತೀಚೆಗೆ ಮುಂಬೈ, ದೆಹಲಿ ಮೂಲದ ಆರೋಪಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೈಬರ್ ಅಪರಾಧಕ್ಕಾಗಿ ಬಂಧಿತರಾಗುತ್ತಿರುವ ವರದಿಯಾಗಿದೆ. ಈ ಆರೋಪಿಗಳು ಕರ್ನಾಟಕವನ್ನೇ ಹೆಚ್ಚು ಗುರಿ ಮಾಡುತ್ತಿರುವುದು ಎನ್‌ಸಿಆರ್‌ಬಿ ಅಂಕಿ ಅಂಶಗಳಲ್ಲಿ ಸ್ಪಷ್ಟವಾಗುತ್ತದೆ.

ಉದ್ಯೋಗದ ಆಮಿಷವಷ್ಟೆ ಅಲ್ಲ, ಬ್ಯಾಂಕ್ ಖಾತೆ ನವೀಕರಣಗೊಳಿಸಬೇಕು, ಡೆಬಿಟ್ ಕಾರ್ಡ್ ಅವಧಿ ಮುಗಿದಿದೆ. ಗೃಹಲಕ್ಷ್ಮಿ, ಗೃಹಜ್ಯೋತಿಯಂತಹ ಯೋಜನೆ ಸೌಲಭ್ಯ ಪಡೆದುಕೊಳ್ಳಲು ಒಟಿಪಿ ಹೇಳಿ ಎಂದು ವಂಚಿಸುವ ಪರಿಪಾಠ ಹೆಚ್ಚಾಗಿದೆ. ಹೂಡಿಕೆಗೆ ದುಪ್ಪಟ್ಟು ಲಾಭಾಂಶ ಮರುಪಾವತಿ ಹೆಸರಿನಲ್ಲೂ ಮೋಸ ಮಾಡಲಾಗುತ್ತಿದೆ. ಅಚ್ಚರಿ ಎಂದರೆ ಈ ಅಪರಾಧಗಳನ್ನು ಮಾಡುವವರು ವಿದ್ಯಾವಂತರಾಗಿದ್ದರೆ, ಸಂತ್ರಸ್ತರು ಕೂಡ ವಿದ್ಯಾವಂತರೇ ಆಗಿರುವುದು ಗಮನಾರ್ಹ.

ಮತ್ತೊ ಒಂದು ಹೆಜ್ಜೆ ಮುಂದೆ ಹೋಗಿರುವ ಆರೋಪಿಗಳು ಬೆದರಿಕೆಯ ಮಾರ್ಗ ಹಿಡಿದಿದ್ದಾರೆ. ಇತ್ತೀಚೆಗೆ ಬೆಳಕಿಗೆ ಬಂದ ಪ್ರಕರಣಗಳ ಸ್ವರೂಪ ವಿಲಕ್ಷಣವಾಗಿದೆ. ಸುಂದರವಾದ ಯುವತಿ ವಿಡಿಯೋ ಕಾಲ್ ಮಾಡುತ್ತಾಳೆ. ಮಾತನಾಡುತ್ತಿರುವಾಗಲೇ ಇದ್ದಕ್ಕಿದ್ದಂತೆ ಆಕೆ ವಿವಸ್ತ್ರಳಾಗುತ್ತಾಳೆ, ಕರೆ ಸ್ವೀಕರಿಸಿದವರು ಏನಾಗುತ್ತಿದೆ ಎನ್ನುವ ಗೊಂದಲದಿಂದ ಚೇತರಿಸಿಕೊಳ್ಳುವಷ್ಟರಲ್ಲಿ ಕರೆ ಕಡಿತಗೊಳ್ಳುವುದು. ನಂತರ ಕೆಲವೇ ಕ್ಷಣಗಳಲ್ಲಿ ಮೊಬೈಲ್ ಬಳಕೆದಾರರ ವಾಟ್ಸ್‌ಆ್ಯಪ್‌ಗೆ ಯುವತಿಯೊಂದಿಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡುತ್ತಿರುವ ದೃಶ್ಯದ ತುಣುಕು ರವಾನೆಯಾಗಿರುತ್ತದೆ. ಅದನ್ನು ಆಧರಿಸಿ




Downloaded From:www.kpscvaani.com

ಅಪರಿಚಿತ ವ್ಯಕ್ತಿ ಬೆದರಿಕೆ ಹಾಕಲಾರಂಭಿಸುತ್ತಾನೆ. ನೀವು ಅನ್ಯ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ್ದೀರಿ, ಹಾಗಾಗಿ ನಿಮ್ಮ ವಿರುದ್ಧ ಪೊಲೀಸರಿಗೆ ದೂರು ನೀಡುತ್ತಿದ್ದೇವೆ ಎಂದು ಬ್ಲಾಕ್‌ಮೇಲ್ ಶುರುವಾಗುತ್ತದೆ.

ಕೌಟುಂಬಿಕ ಪರಿಸರ, ಸಮಾಜದಲ್ಲಿನ ಗೌರವಕ್ಕೆ ಅಂಜಿ ಆರಂಭದಲ್ಲಿ ಆರೋಪಿಗಳು ಕೇಳುವ ಸಣ್ಣ ಪ್ರಮಾಣದ ಹಣಕೊಟ್ಟು ಕೈತೊಳೆದುಕೊಳ್ಳಲು ಯತ್ನಿಸುವುದು ಕಂಡು ಬಂದಿದೆ. ಒಮ್ಮೆ ಹಣ ಪಾವತಿಸಿದರೆ ಅಲ್ಲಿಗೆ ತಪ್ಪು ಮಾಡಿದ್ದನ್ನು ಒಪ್ಪಿಕೊಂಡಂತಾಗುತ್ತದೆ. ಕ್ರಮೇಣ ವಸೂಲಿಯ ಹಣದ ಪ್ರಮಾಣ ಏರಿಕೆಯಾಗುತ್ತದೆ. ಕೊಡಲು ನಿರಾಕರಿಸಿದರೆ ಮುಂಬೈನ ಸೈಬರ್ ಪೊಲೀಸ್ ಅಧಿಕಾರಿ ಮಾತನಾಡುತ್ತಿರುವುದು, ನಿಮ್ಮ ವಿರುದ್ಧ ದೂರು ದಾಖಲಾಗಿದೆ ಎಂಬುದಾಗಿ ದೂರವಾಣಿ ಕರೆ ಬರುತ್ತದೆ. ಇವೆಲ್ಲವೂ ಪೂರ್ವ ಯೋಜಿತ ತಂತ್ರಗಳಾಗಿರುತ್ತವೆ.

ಆರಂಭದಲ್ಲೇ ವಿಡಿಯೋ ಕಾಲ್ ಮಾಡಿದ ಮಹಿಳೆ ವಿರುದ್ಧ ತಕ್ಷಣವೇ ಸೈಬರ್ ಪೊಲೀಸರಿಗೆ ಮಾಹಿತಿ ನೀಡುವುದರಿಂದ ಸಂಭವನೀಯ ಅಪಾಯದಿಂದ ಪಾರಾಗುವುದು ಸೂಕ್ತವಾಗಿದೆ. ಅನಗತ್ಯ ಲಾಲಾಸೆಗಳಿಗೆ ಒಳಗಾಗಿ ಕೊಂಚ ಯಾಮಾರಿದರೂ ದುಷ್ಕರ್ಮಿಗಳ ವ್ಯೂಹಕ್ಕೆ ಸಿಲುಕಬೇಕಾಗುತ್ತದೆ. ಇತ್ತೀಚೆಗೆ ಮಹಿಳೆಯರಿಗೂ ಈ ರೀತಿಯ ಕರೆಗಳು ಬರಲಾರಂಭಿಸಿವೆ. ಹೆಣ್ಣು ಮಕ್ಕಳನ್ನು ಬ್ಲಾಕ್‌ಮೇಲ್ ಮಾಡಿ ಹಣ ವಸೂಲಿ ಮಾಡುತ್ತಿರುವ ಉದಾಹರಣೆಗಳಿವೆ. ಅಪರಿಚಿತರ ವಿಡಿಯೋ ಕಾಲ್‌ಗಳನ್ನು ಸ್ವೀಕರಿಸದೇ ಇರುವುದು ಸೂಕ್ತ ಮುಂಜಾಗ್ರತೆಯಾಗಿದೆ ಎಂಬುದು ಸೈಬರ್ ತಜ್ಞರ ಸಲಹೆಯಾಗಿದೆ. ಹಾಗೇಯೇ " ಹಾಯ್ ನಾನು ನಿಮ್ಮ ಅಮೂಲ್ಯ ಸಮಯವನ್ನು ಬಳಸಿಕೊಳ್ಳಬಹುದೇ" ಎಂದು ಅಪರಿಚಿತ ಸುಂದರಿಯ ಚಿತ್ರ




**ಅನುಸರಿಸಬೇಕಾದ ಕ್ರಮಗಳು:**

- ಅನಗತ್ಯವಾಗಿ ಸಂಶಯಾಸ್ಪದ ವೆಬ್‌ಸೈಟ್, ಆ್ಯಪ್‌ಗಳಲ್ಲಿ ವೈಯಕ್ತಿಕ ಮಾಹಿತಿ ದಾಖಲಿಸಿ ಆನ್‌ಲೈನ್ ನೋಂದಣಿ ಮಾಡಿಕೊಳ್ಳುವುದನ್ನು ನಿಯಂತ್ರಿಸಬೇಕು.
- ಅಪರಿಚಿತ ಸೈಟ್‌ಗಳ ಬಳಕೆ ವೇಳೆ ವೈಯಕ್ತಿಕ ಮಾಹಿತಿಯನ್ನು ಸುಲಭಕ್ಕೆ ಲಭ್ಯವಾಗುವಂತೆ ಮುಕ್ತವಾಗಿಟ್ಟಿರಬಾರದು.
- ದತ್ತಾಂಶಗಳನ್ನು ಸಂಗ್ರಹಿಸುವಾಗ ಪ್ರಮಾಣಿತ ಸುರಕ್ಷಾ ಕ್ರಮಗಳನ್ನು ಪಾಲನೆ ಮಾಡಬೇಕು.
- ಯಾವುದೇ ಹಂತದಲ್ಲಿ ಅನ್ಯರೊಂದಿಗೆ ಒಟಿಪಿ ಹಂಚಿಕೊಳ್ಳಬಾರದು.
- ಅನಪೇಕ್ಷಿತವಾಗಿ ಎಸ್‌ಎಂಎಸ್, ಇ-ಮೇಲ್, ಚಾಟಿಂಗ್ ಆ್ಯಪ್‌ಗಳಲ್ಲಿ ಬರುವ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದು.
- ಅಧಿಕೃತ ಮಾನ್ಯತೆ ಹಾಗೂ ಸ್ಪಷ್ಟತೆ ಇಲ್ಲದ ಆ್ಯಪ್‌ಗಳನ್ನು ಎಲೆಕ್ಟ್ರಾನಿಕ್ ಡಿವೈಸ್‌ಗಳಿಗೆ ಡೌನ್‌ಲೋಡ್ ಮಾಡಬಾರದು.
- ಖಾಸಗಿಯಾದ ಫೋಟೋ, ವಿಡಿಯೋ, ಆಡಿಯೋ, ದಾಖಲೆಗಳು, ಗೌಪ್ಯಾಂಶಗಳನ್ನು ಮೊಬೈಲ್‌ನಂತಹ ಡಿವೈಸ್‌ಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳಬಾರದು.
- ಅಂತರ್ಜಾಲದ ಪ್ರತಿಯೊಂದು ಖಾತೆಗೂ ಪ್ರಬಲವಾದ, ಬೇರೆ ಬೇರೆ ಪಾಸ್‌ವರ್ಡ್ ಅನ್ನು ಇಟ್ಟಿರಬೇಕು.
- ಖರೀದಿಸುವ ಅಥವಾ ಬಳಕೆ ಮಾಡುವ ಸ್ಮಾರ್ಟ್ ಫೋನ್ ಅಸಲಿಯೇ ನಕಲಿಯೇ ಎಂಬುದನ್ನು ಸಿಇಐಆರ್ ವೆಬ್ ಸೈಟ್ ಮೂಲಕ ಪರಿಶೀಲಿಸಿಕೊಳ್ಳಬೇಕು.
- ಮೊಬೈಲ್ ಅಥವಾ ಸಿಮ್ ಕಳೆದು ಹೋದರೆ ಅಥವಾ ಕಳ್ಳತನವಾದರೆ ತಕ್ಷಣವೇ ದೂರು ದಾಖಲಿಸಬೇಕು. ತನ್ಮೂಲಕ ಮೊಬೈಲ್ ಮತ್ತು ಸಿಮ್ ಬ್ಲಾಕ್ ಮಾಡಿಸಬೇಕು.
- ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನು ಹಾಳಾದ ವೇಳೆ ಅದರಲ್ಲಿ ಖಾಸಗಿ ಮಾಹಿತಿಗಳಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡ ಬಳಿಕವೇ ದುರಸ್ತಿ ಕೇಂದ್ರಗಳಿಗೆ ನೀಡಬೇಕು.
- ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿಗತ ರಕ್ಷಣೆ ನೆರವಾಗುವ ಸೆಟ್ಟಿಂಗ್‌ಗಳನ್ನು ಸಕ್ರಿಯವಾಗಿಟ್ಟಿರಬೇಕು.
- ಇ-ಮೇಲ್, ಸಾಮಾಜಿಕ ಜಾಲತಾಣ, ವಾಟ್ಸ್‌ಆ್ಯಪ್ ನಂತಹ ಖಾತೆಗಳನ್ನು ಬೇರೆ ಕಡೆ ಲಾಗಿನ್ ಆಗಿದ್ದ ವೇಳೆ ಅಲ್ಲಿಂದ ನಿರ್ಗಮಿಸುವ ವೇಳೆ ಲಾಗ್ ಔಟ್ ಆಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು.
- ಲಾಗಿನ್ ಇತಿಹಾಸದಲ್ಲಿ ಪಾಸ್‌ವರ್ಡ್ ಸೇವ್ ಆಗಿರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಒಂದು ವೇಳೆ ಅನುಮಾನಾಸ್ಪದವಾಗಿದ್ದರೆ ಲಾಗಿನ್ ಇತಿಹಾಸವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು.
- ಆನ್‌ಲೈನ್ ವೇದಿಕೆಗಳಿಂದ ಬರುವ ಕರೆಗಳಲ್ಲಿ ಭಾಷಾ ತಿಳುವಳಿಕೆ ಇಲ್ಲದ ವೇಳೆ ಬಲವಂತವಾಗಿ ಮಾತನಾಡಿ, ಅವರು ಹೇಳಿದನ್ನು ಪಾಲನೆ ಮಾಡಬಾರದು.
- ಖರೀದಿಯ ವೇಳೆ ಹಣ ಬಳಕೆಗೆ ಬಳಸುವ ಡೆಬಿಟ್, ಕ್ರೆಡಿಟ್ ಕಾರ್ಡ್‌ಗಳು, ಯುಪಿಐ ಆಧಾರಿತ ಆ್ಯಪ್‌ಗಳು ಮತ್ತು ಆನ್‌ಲೈನ್ ಬ್ಯಾಂಕಿಂಗ್ ಸಂಕೇತಾಕ್ಷರಗಳನ್ನು ಬೇರೆಯವರಿಗೆ ತಿಳಿಯದಂತೆ ನಮೂದಿಸಬೇಕು.



Downloaded From:www.kpscvaani.com

ಇರುವ ವಾಟ್ಸ್ಆ್ಯಪ್, ಟೆಲಿಗ್ರಾಮ್ ಸಂದೇಶಗಳಿಗೆ ಪ್ರತಿಕ್ರಿಯಿಸದೆ ಸೆಟ್ಟಿಂಗ್‌ಗೆ ಹೋಗಿ ರಿಪೋರ್ಟ್ ಮಾಡುವುದು ಕ್ಷೇಮ.

**ಅಧಿಕಾರಿ ಹೆಸರಿನಲ್ಲಿ ಬೆದರಿಕೆ:**

ನಿಮ್ಮ ಹೆಸರಿಗೆ ವಿದೇಶದಿಂದ ಪಾರ್ಸೆಲ್ ಬಂದಿದೆ, ಅದರಲ್ಲಿ ಮಾದಕ ವಸ್ತುಗಳಿವೆ ಎಂದು ಕಸ್ಟಮ್ಸ್ ಅಧಿಕಾರಿಯ ಹೆಸರಿನಲ್ಲಿ ಕರೆ ಮಾಡಿ ಹೆದರಿಸಿ ಹಣ ವಸೂಲಿ ಮಾಡಿರುವ ಪ್ರಕರಣಗಳು ಇತ್ತೀಚೆಗೆ ತೀವ್ರವಾಗಿವೆ.

ಕೃತಕ ಬುದ್ಧಿಮತ್ತೆ ಅರ್ಥಾತ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಯುಗದಲ್ಲಿ ನಕಲಿ ದತ್ತಾಂಶಗಳನ್ನು ಸೃಷ್ಟಿಸಿ ಬ್ಲಾಕ್‌ಮೇಲ್ ಮಾಡುವುದು ಚಾಲ್ತಿಗೆ ಬರುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಲಭ್ಯ ಇರುವ ಫೋಟೋ ಹಾಗೂ ಇತರ ಮಾಹಿತಿಯನ್ನು ದುರ್ಬಳಕೆ ಮಾಡಿಕೊಂಡು ಅಸಲಿ ವ್ಯಕ್ತಿಯನ್ನು ಹೋಲುವ ನಕಲಿ ಫೋಟೋ, ವಿಡಿಯೋ, ಆಡಿಯೋವನ್ನು ಸೃಷ್ಟಿಸಲಾಗುತ್ತಿದೆ. ಅದನ್ನು ಅಂತರ್ಜಾಲದಲ್ಲಿ ಹರಿಯ ಬಿಡುವುದಾಗಿ ಬೆದರಿಸಲಾಗುತ್ತಿದೆ. ನಕಲಿ ದತ್ತಾಂಶಗಳು ಎಂಬ ಅರಿವಿದ್ದರೂ ಅವು ತನ್ನನ್ನೇ ಹೋಲುವುದರಿಂದ ಸಮಾಜ ನಂಬುವ ಸಾಧ್ಯತೆ ಹೆಚ್ಚಿರುತ್ತದೆ ಎಂಬ ಆತಂಕದಲ್ಲಿ ಅಮಾಯಕರು ವಂಚಕರ ಜಾಲಕ್ಕೆ ಬಲಿಯಾಗುತ್ತಿದ್ದಾರೆ. ಆಕ್ಷೇಪರ್ಹಾವಾಗಿರುವ ಇಂತಹ ಮಾಹಿತಿಗಳು ಸೋರಿಕೆಯಾದರೆ ಕೌಟುಂಬಿಕ ಹಾಗೂ ವೈಯಕ್ತಿಕ ಬದುಕು ಮೂರಾಬಟ್ಟೆಯಾಗುತ್ತದೆ ಎಂದು ಹೆದರುವವರೇ ದುಷ್ಕರ್ಮಿಗಳ ಬಂಡವಾಳವಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಫೋಟೋ, ವಿಡಿಯೋಗಳನ್ನು ಪೇರಿಸುವವರು ಜಾಗೃತರಾಗಿರಬೇಕಾದ ಅಗತ್ಯವಿದೆ. ಅಂತರ್ಜಾಲ ಖದೀಮರ ಕೈಗೆ ಸಿಗದಂತೆ ಸುರಕ್ಷಾ ಸೆಟ್ಟಿಂಗ್‌ಗಳನ್ನು ಬಳಸುವುದು ಅತ್ಯಗತ್ಯವಾಗಿದೆ. ಇನ್ನು ವೈಯಕ್ತಿಕ ಮಾಹಿತಿ, ಫೋಟೋಗಳನ್ನು ಕ್ಲೌಡ್‌ನಂತಹ ತಾಣದಲ್ಲಿ ಶೇಖರಿಸಿಡುವಾಗ ಪ್ರಮಾಣಿತ ಸುರಕ್ಷಾತಾ ಮಾರ್ಗಗಳನ್ನು ಅರಿತುಕೊಂಡಿರುವುದು ಕಡ್ಡಾಯ. ಕೊಂಚ ಆಯಾ ತಪ್ಪಿದರೂ ಅಷ್ಟು ಮಾಹಿತಿ ಖದೀಮರ ಕೈ ಸೇರುವುದಲ್ಲದೆ ಅಪಾಯ ತಂದೊಡ್ಡುವ ಸಾಧ್ಯತೆಗಳಿವೆ.




**ಆನ್‌ಲೈನ್ ಸೈಬರ್ ದೂರುಗಳನ್ನು ಸಲ್ಲಿಸಲು ಸಹಾಯವನ್ನು ಪಡೆಯಲು ಟೋಲ್-ಫ್ರೀ ಸಹಾಯವಾಣಿ ಸಂಖ್ಯೆ 1930 ಸ್ಥಾಪನೆ ಮಾಡಲಾಗಿದೆ. ಜೊತೆಗೆ cybercrime.gov.in ವೆಬ್‌ಸೈಟ್‌ನಲ್ಲಿಯೂ ದೂರು ದಾಖಲಿಸಬಹುದಾಗಿದೆ. ನಿಗದಿತ ಕಾಲಮಿತಿಯಲ್ಲಿ ದೂರು ದಾಖಲಾದರೆ ಪೊಲೀಸರು ತನಿಖೆಯನ್ನು ವೇಗವರ್ಧಕಗೊಳಿಸಲು ಸಾಧ್ಯವಾಗುತ್ತದೆ. 1930ರಲ್ಲಿ ದೂರು ದಾಖಲಿಸಲು ಕರೆ ಮಾಡಿದಾಗ ಅಗತ್ಯ ಮಾಹಿತಿಯನ್ನು ಸಿದ್ಧವಾಗಿಟ್ಟುಕೊಳ್ಳುವುದು ಅಗತ್ಯವಾಗಿದೆ. ಸೈಬರ್‌ಕ್ರೈಮ್ ವೆಬ್‌ಸೈಟ್‌ನಲ್ಲಿ ದಾಖಲಿಸುವಾಗಲೂ ಪೂರಕ ಪುರಾವೆಗಳನ್ನು ಲಗತ್ತಿಸಬೇಕಿದೆ.**

**ಹದಿಹರೆಯದವರಲ್ಲಿ ಹೆಚ್ಚು ಜಾಗೃತಿ ಅಗತ್ಯ:**

ಇನ್ನೂ ಮಕ್ಕಳ ವಿಷಯದಲ್ಲಂತೂ ಮೈ ಎಲ್ಲಾ ಕಣ್ಣಾಗಿರುವುದು ಅತ್ಯಗತ್ಯವಾಗಿದೆ. ಅಂತರ್ಜಾಲ ಬಳಸುವ ಮಕ್ಕಳ ಮೇಲೆ ಪೋಷಕರು ನಿಗಾ ವಹಿಸುವುದು ಕಡ್ಡಾಯವಾಗಿದೆ. ಸಹಜವಾಗಿ ಆನ್ ಲೈನ್ ಗೇಮ್‌ಗಳ, ಸಾಮಾಜಿಕ ಜಾಲತಾಣಗಳ ಅಪಾಯಗಳ ಬಗ್ಗೆ ಕಾಲಕಾಲಕ್ಕೆ ತಿಳುವಳಿಕೆ ನೀಡುತ್ತಿರುವುದು ಅನಿವಾರ್ಯವಾಗಿದೆ. ಮಕ್ಕಳ ಜೊತೆ ಮಾತುಕತೆ ನಡೆಸಿ, ಗೇಮಿಂಗ್ ವೇಳೆ ಆಮಿಷಗಳು ಅಥವಾ ಬೆದರಿಕೆಯಂತಹ ಅಂಶಗಳಿವೆಯೇ ಎಂಬುದನ್ನು ಪರಿಶೀಲನೆ ನಡೆಸಬೇಕು. ಮಕ್ಕಳು ಮುಚ್ಚುಮರೆ ಮಾಡಿ ಅಂತರ್ಜಾಲ ಬಳಕೆ ಮಾಡುತ್ತಿದ್ದರೆ ಅದರ ಕುರಿತು ಹೆಚ್ಚು ಗಮನ ಹರಿಸಬೇಕು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಗ್ರಹಿಸಿ ಮಕ್ಕಳ ನಡವಳಿಕೆ ಶಂಕಾಸ್ಪದವಾಗಿದ್ದರೆ ಅವರನ್ನು ಕುಶಲತೆಯಿಂದ ಇಂಟರ್ ನೆಟ್ ಬಳಕೆಯಿಂದ ಹೊರ ತರಬೇಕು.


ಅತ್ಯಾಕರ್ಷಕವಾದ ಕಂಟೆಂಟ್‌ಗಳಿಂದ ಸೆಳೆಯುವ ಸೈಬರ್ ಗ್ರೋಮಿಂಗ್ ನಿಂದ ಮಕ್ಕಳನ್ನು ತಮ್ಮ ಕಡೆ ವಾಲಿಸಿಕೊಳ್ಳುವ ಸೈಬರ್ ಕಳ್ಳರು ನಂತರ ಹಂತ ಹಂತವಾಗಿ ಅವರನ್ನು ತಾವು ಹೇಳಿದಂತೆ ಕೇಳುವಂತೆ ಮಾಡಿಕೊಳ್ಳುತ್ತಾರೆ. ಬಳಿಕ ಆರ್ಥಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಶೋಷಿಸಲಾರಂಭಿಸಿರುತ್ತಾರೆ. ಈ ಜಾಲಕ್ಕೆ ಸಿಲುಕಿದ ಮಕ್ಕಳು ಹೇಳಿಕೊಳ್ಳಲು ಆಗದೆ, ಅನುಭವಿಸಲೂ ಆಗದೆ ಮಾನಸಿಕ ತೊಳಲಾಟಕ್ಕೆ ಸಿಲುಕುವ ಸಾಧ್ಯತೆ ಹೆಚ್ಚಿರುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಜನಪ್ರಿಯತೆ ಪಡೆಯಲು ಮತ್ತು ಸ್ನೇಹ ಬಳಗವನ್ನು ಸಂಪಾದಿಸಲು ಖಾತೆಗಳಿಗೆ ಮುಕ್ತ ಪ್ರವೇಶ ನೀಡುವ ಖಾಸಗಿತನಕ್ಕೆ ರಕ್ಷಣೆ ನೀಡುವ ಸೆಟ್ಟಿಂಗ್‌ಗಳನ್ನು ಬದಲಾಯಿಸುವುದು ಸಾಮಾನ್ಯವಾಗಿರುತ್ತದೆ. ಇದರಿಂದಾಗುವ ಅಪಾಯಗಳ ಬಗ್ಗೆ ಹಾಗೂ ಜವಾಬ್ದಾರಿಯುತವಾಗಿ ಅಂತರ್ಜಾಲ ಬಳಕೆ ಕುರಿತು ಮಕ್ಕಳಿಗೆ ತಿಳಿ ಹೇಳಬೇಕಿದೆ.

**ಅಪಾಯಕಾರಿ ಕ್ಯಾಮರಾ ಕಳ್ಳಗಣ್ಣು:**

ಲ್ಯಾಪ್‌ಟಾಪ್, ಡೆಸ್ಕ್‌ಟಾಪ್‌ಗಳಿಗೆ



Downloaded From:www.kpscvaani.com




ಹ್ಯಾಕರ್‌ಗಳು ನುಸಳಿ ಅದರಲ್ಲಿನ ಕ್ಯಾಮರಾವನ್ನು ಬಳಸಿಕೊಂಡು ದೈನಂದಿನ ಚಟುವಟಿಕೆಗಳ ಮೇಲೆ ಕಳ್ಳಗಣ್ಣಿಡುವ ಅಥವಾ ರೆಕಾರ್ಡ್ ಮಾಡುವ ಸಾಧ್ಯತೆ ಇರುವುದರಿಂದ ಎಲೆಕ್ಟ್ರಾನಿಕ್ಸ್ ಡಿವೈಸ್‌ಗಳಲ್ಲಿನ ಕ್ಯಾಮರವನ್ನು ಉಪಯೋಗವಿಲ್ಲದ ಸಂದರ್ಭದಲ್ಲಿ ಕಪ್ಪು ಟೇಪ್‌ನಿಂದ ಮುಚ್ಚಿಡುವುದು ಅಥವಾ ಸುರಕ್ಷಿತವಾಗಿ ಮರೆ ಮಾಚುವುದು ಸೂಕ್ತ.

ಕಂಪ್ಯೂಟರ್, ಮೊಬೈಲ್ ಸೇರಿದಂತೆ ಯಾವುದೇ ಡಿವೈಸ್ ಆಗಿದ್ದರೂ ಅದನ್ನು ಸುರಕ್ಷಿತವಾದ ಇ-ಮೇಲ್ ಮೂಲಕ ಲಾಗಿನ್ ಆಗಿ, ತನ್ಮೂಲಕ ಫ್ಲಾಮಿಲಿ ಟ್ರಿಯಂತಹ ಆಪ್ ಬಳಸಿ ಡಿವೈಸ್‌ಗಳ ನಿಯಂತ್ರಣವನ್ನು ಪೋಷಕರು ತಮ್ಮ ಅಧೀನದಲ್ಲಿಟ್ಟುಕೊಳ್ಳುವುದು ಕ್ಷೇಮ.

ಗರಿಷ್ಠ ಸುರಕ್ಷತೆ ನೀಡುವ ಆ್ಯಂಟಿ ವೈರಸ್ ಸಾಫ್ಟವೇರ್ ಅನ್ನು ಅಳವಡಿಸಿಕೊಳ್ಳಬೇಕು. ಅದನ್ನು ಕಾಲಕಾಲಕ್ಕೆ ನವೀಕರಿಸಿಕೊಳ್ಳಬೇಕು. ಅಸುರಕ್ಷಿತ ಮೂಲಗಳಿಂದ ಸಾಫ್ಟವೇರ್, ಗೇಮ್‌ಗಳು, ಮ್ಯೂಜಿಕ್ ಮತ್ತು ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಾರದು. ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಫೋಟೋ, ವಿಡಿಯೋಗಳನ್ನು ಪೋಸ್ಟ್ ಮಾಡುವಾಗ ಅದನ್ನು ಹಂಚಿಕೊಳ್ಳುವ, ವಿಕ್ಷಿಸುವವರ ಸೆಟ್ಟಿಂಗ್‌ಗಳು ಸುರಕ್ಷಿತವಾಗಿಯೇ ಎಂದು ಖಚಿತ ಪಡಿಸಿಕೊಳ್ಳಬೇಕು.

**ಮೊದಲ ಸೈಬರ್ ಕ್ರೈಮ್:**

ಸೈಬರ್ ಅಪರಾಧದ ಪರಿಕಲ್ಪನೆಯು ಡಿಜಿಟಲ್ ಯುಗಕ್ಕಿಂತ ಹಿಂದಿನದು. 1970ರ ದಶಕದಲ್ಲಿ ಕಂಪ್ಯೂಟರ್ ಹೆಚ್ಚು ಸಂಪರ್ಕಗೊಳ್ಳಲು ಪ್ರಾರಂಭಿಸಿದ ಬಳಿಕ 1988 ರಲ್ಲಿ ಕಾನೆರ್ಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದ ರಾಬರ್ಟ್ ಟಪ್ಪನ್ ಮೋರಿಸ್ ರಚಿಸಿದ "ಮೋರಿಸ್ ವರ್ಮ್" ಮೊದಲ ಪ್ರಸಿದ್ಧ ಸೈಬರ್ ಅಪರಾಧ ಎಂದು ಭಾವಿಸಲಾಗಿದೆ. ಅಮೆರಿಕಾದ ಅಡ್ವಾನ್ಸ್ ರಿಸರ್ಚ್ ಪ್ರಾಜೆಕ್ಟ್ ಏಜೆನ್ಸಿ ನೆಟ್‌ವರ್ಕ್ (ಎಆರ್‌ಪಿಎಎನ್‌ಇಟಿ) ಮಾಹಿತಿ ಪಡೆಯಲು ಬಿಡುಗಡೆ ಮಾಡಿದ ವೈರಸ್ ಕೋಡಿಂಗ್ ದೋಷದಿಂದಾಗಿ ಭಾರಿ ಹಾನಿ ಉಂಟುಮಾಡಿತಲ್ಲದೆ ಸಾವಿರಾರು ಕಂಪ್ಯೂಟರ್‌ಗಳಿಗೆ ಸೋಂಕು ತಗುಲಿ ನೆಟ್‌ವರ್ಕ್ ಅನ್ನು ನಿಧಾನಗೊಳಿಸಿತು.

ಈ ಘಟನೆಯ ಬಳಿಕ ಅಮೆರಿಕಾದಲ್ಲಿ ಸೈಬರ್ ಸುರಕ್ಷತೆ ಆಲೋಚನೆಗಳಿಗೆ ಕಾರಣವಾಯಿತು, ಕಾರ್ನೆಗೀ ಮೆಲಾನ್ ವಿಶ್ವವಿದ್ಯಾನಿಲಯದಲ್ಲಿ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ ರಚನೆಯಾಯಿತು. 90ರ ದಶಕದ ಬಳಿಕ ಕಂಪ್ಯೂಟರ್ ಕಾಂತ್ರಿಯಿಂದಾಗಿ ಸೈಬರ್ ಸುರಕ್ಷತೆ ಹೆಚ್ಚು ಮಹತ್ವ ಪಡೆಯಿತು. 2001ರಲ್ಲಿ ಬುಡಾಪೆಸ್ಟ್ ಕನ್ವೆನ್ಷನ್ ಎಂದು ಗುರುತಿಸಲ್ಪಡುವ ಕೌನ್ಸಿಲ್ ಆಫ್ ಯುರೋಪ್‌ನ ಸೈಬರ್‌ಕ್ರೈಮ್‌ನ ಮೊದಲ ಅಂತಾರಾಷ್ಟ್ರೀಯ ಒಪ್ಪಂದ ಜಾರಿಗೆ ಬಂದಿದೆ. ತಂತ್ರಜ್ಞಾನ ಮುಂದುವರಿದಂತೆ ಮತ್ತು ಸೈಬರ್ ಅಪರಾಧಗಳು ಹೆಚ್ಚು ಅತ್ಯಾಧುನಿಕಗೊಳ್ಳುತ್ತಿದ್ದಂತೆ ವಿವಿಧ ದೇಶಗಳು ತಮ್ಮದೇ ಆದ ಸೈಬರ್ ಕ್ರೈಮ್ ಕಾರ್ಯಪಡೆಗಳು, ಕಾರ್ಯವಿಧಾನಗಳನ್ನು ಸ್ಥಾಪಿಸಿಕೊಂಡಿವೆ.

ಭಾರತದಲ್ಲಿ 1998ರಲ್ಲಿ ಮೊದಲ ಸೈಬರ್ ಅಪರಾಧ ವರದಿಯಾಗಿದೆ ಎಂದು ಭಾವಿಸಲಾಗಿದೆ. ಅಮಿತ್ ಎಂಬಾತನ ನೇತೃತ್ವದಲ್ಲಿ ಹ್ಯಾಕರ್‌ಗಳ ಗುಂಪು ಇಂಟರ್ನೆಟ್ ಸೇವಾ ಪೂರೈಕೆದಾರರ ಐಎಸ್‌ಪಿ ಸರ್ವರ್ ಅನ್ನು ಹ್ಯಾಕ್ ಮಾಡಿದ್ದ. ಅಲ್ಲಿ ದತ್ತಾಂಶಗಳನ್ನು ಕದ್ದು ಬೆದರಿಕೆಯ ಇ-ಮೇಲ್ ಕಳುಹಿಸಲು ಬಳಸಲಾಗಿತ್ತು. ಇದು ದೇಶದಲ್ಲಿ ಸೈಬರ್ ಆತಂಕಗಳಿಗೆ ಮುನ್ನುಡಿಯಾಯಿತು.

2000 ಸುಮಾರಿನಲ್ಲಿ ಹ್ಯಾಕರ್‌ಗಳ ಗುಂಪು ಗುಜರಾತ್ ಗೃಹ ಇಲಾಖೆಯ ಅಧಿಕೃತ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿ ರಾಜಕೀಯ ಪ್ರೇರಿತ ಮತ್ತು ಪ್ರಚೋದನಕಾರಿ ಸಂದೇಶಗಳನ್ನು ಕಳುಹಿಸಿತ್ತು. ಬಳಿಕ ಭಾರತ ಸೈಬರ್ ಸುರಕ್ಷತೆಗೆ ಹೆಚ್ಚಿನ ಗಮನವನ್ನು ನೀಡಿತು. ಮಾಹಿತಿ ತಂತ್ರಜ್ಞಾನ ಕಾಯಿದೆ-2000 ಅನ್ನು ರೂಪಿಸಿತು. ಹಂತ ಹಂತವಾಗಿ ಸೈಬರ್‌ಕ್ರೈಮ್ ಸೆಲ್‌ಗಳ ಸ್ಥಾಪನೆಯಾಯಿತು. ಈಗ ಪ್ರತಿ ರಾಜ್ಯದ ಪೊಲೀಸ್ ಇಲಾಖೆಯು ಸೈಬರ್ ಕ್ರೈಮ್ ಸೆಲ್ ಹೊಂದಿವೆ.


Downloaded From:www.kpscvaani.com



# ಹಿರಿ ಗುಣದ ಕಿರುಕಾಳು ಸಾಮೆ

ಆರ್.ಎಸ್. ಪಾಟೀಲ

ಬೇಡವಾದ ಬರಡುನೆಲದಲ್ಲೇ ಸಾಮೆ ಬಿತ್ತಿದರೂ ಮನೆ ತುಂಬಾ ಕಾಳು ಮತ್ತು ಪಶುಗಳಿಗೆ ಕಣ ತುಂಬ ರುಚಿಕರ ಮೇವು ಸಿಗುತ್ತಿತ್ತು.

ಹಾವೇರಿ, ಬ್ಯಾಡಗಿ, ರಾಣೇಬೆನ್ನೂರು ಭಾಗದಲ್ಲಿ ಈ ಸಿರಿಧಾನ್ಯವನ್ನು 'ಸಾವೆ' ಎಂದು ಕರೆಯುವುದು ರೂಢಿಯಲ್ಲಿದೆ. ಸಾಮೆ, ಸಾಮಲು, ಸಾಮೈ, ಕುಟ್ಕ ವಿಭಿನ್ನ ಹೆಸರುಗಳಿಂದಲೂ ಬೇರೆ ಬೇರೆ ಕಡೆ ಇದು ಪ್ರಸಿದ್ಧಿಯಲ್ಲಿದೆ. ಇಳಿಜಾರು ನೆಲ, ಗುಡ್ಡದ ಓರೆ, ಕಲ್ಲು ಮರಡಿ ಎಲ್ಲಿಯೇ ಬಿತ್ತಿದರೂ ಹುಲುಸಾಗಿ ಬೆಳೆದು ಮಣ್ಣಿನ ಮಗನ ಕೈ ಹಿಡಿಯುವ ಜಾಯಮಾನ ಇದಕ್ಕಿದೆ. ಬೆಳೆಯುವ ಹಂತದಲ್ಲಿ ಕೆಲಕಾಲ ಮಳೆ ಕೈ ಕೊಟ್ಟಾಗ ಬತ್ತಿದಂತೆ ಮುಖ ಬಾಡಿಸಿಕೊಂಡು ನಿಲ್ಲುತ್ತದೆ. ಆದರೆ ಮಳೆಯಾದರೆ ಮತ್ತೆ ಮೈ ಕೊಡವಿಕೊಂಡು ಹುಲುಸಾಗಿ ಬೆಳೆಯುವ ಗಟ್ಟಿ ಗುಣ ಈ ಸಾಮೆಯಲ್ಲಿ ಅಂತರ್ಗತವಾಗಿ ಬಂದ ತಳಿ ಗುಣವಾಗಿದೆ.

ಪಕ್ಕಾ ಹುಲ್ಲು ಬೆಳೆಯಾಗಿರುವ ಸಾಮೆಯು ನೆಲದ ಫಲವತ್ತತೆ ಆಧರಿಸಿ ಒಂದೂವರೆಯಿಂದ ಮೂರು ಮೂರುವರೆ ಅಡಿ ಎತ್ತರದವರೆಗೂ ಬೆಳೆಯಬಲ್ಲದು. ಕಾಳಿನ ಗಾತ್ರ ಸಾಸಿವೆ ಕಾಳಿನಷ್ಟು ಅನ್ನಬೇಕು. ಒಂದೇ ಒಂದು ಬೀಜದಿಂದ ಬಂದ ಮೊಳಕೆ 20–30 ಕವಲುಗಳಾಗಿ ಬೆಳೆದು ಪೊದೆ ಪೊದೆಯಾಗಿ ಬೆಳೆದು ನಿಲ್ಲುವ ಸಾಮರ್ಥ್ಯವನ್ನು ಹೊಂದಿದೆ.

'ಲಿಟಲ್ ಮಿಲ್ಲೇಟ್' (Little Millate) ಇದರ ಆಂಗ್ಲ ಹೆಸರು 'ಪೆನಿಕಮ್ ಸುಮೆಟ್ರೆನ್ಸ್' (Penicum Sumatrense) ವೈಜ್ಞಾನಿಕ ನಾಮ. ಕರುನಾಡಿನ ಹಾವೇರಿ, ಚಿತ್ರದುರ್ಗ, ಕೋಲಾರ, ತುಮಕೂರು, ಹಾಸನ, ಬೆಂಗಳೂರು ಜಿಲ್ಲೆಗಳಲ್ಲಿ ಸಾವೆ ಬೆಳೆಯುವುದು ರೂಢಿಯಲ್ಲಿದೆ. ಮುಂಗಾರು ಮಾನ್ಸೂನ್ ಆರಂಭವಾಗುತ್ತಿದ್ದಂತೆ ಹಸನ ಮಾಡಿಕೊಂಡ ಭೂಮಿಯಲ್ಲಿ ಸಾವೆಯಿಂದಲೇ ರೈತರ ಬಿತ್ತನೆ ಬದುಕು ಆರಂಭವಾಗುವುದು ವಾಡಿಕೆಯಲ್ಲಿದೆ. ಜೂನ್ ಮಾಹೆ ಮುಗಿಯುವುದರೊಳಗೆ ಬಿತ್ತನೆ ಕೈಗೊಂಡಲ್ಲಿ ಉತ್ತಮ ಇಳುವರಿಯೊಂದಿಗೆ ದನ–ಕರುಗಳು ಇಷ್ಟಪಟ್ಟು ತಿನ್ನುವ ಸಾಕಷ್ಟು ಮೇವು ಗ್ಯಾರಂಟಿ. ಹದಮಾಡಿಕೊಂಡ ಹೊಲದಲ್ಲಿ 22.5 ಸೆ.ಮೀ. ಅಂತರದ ಸಾಲುಗಳಲ್ಲಿ 4 ಸೆಂ.ಮೀ.ಗಿಂತ ಹೆಚ್ಚು ಆಳವಿಲ್ಲದಂತೆ ಬಿತ್ತನೆ ಮಾಡುವುದು ಒಳಿತು. ಹೆಚ್ಚು ಆಳದಲ್ಲಿ ಬಿತ್ತನೆ ಕೈಗೊಂಡರೆ ಮಣ್ಣಿನ ಭಾರ ಹೆಚ್ಚಾಗಿ ಮೊಳಕೆ ಮೇಲೆ ಬರುವುದೇ ಇಲ್ಲ. ಬಿತ್ತನೆಯಾದ ಮೂರು ಮೂರುವರೆ ತಿಂಗಳಲ್ಲಿ ಹುಲುಸಾಗಿ ಬೆಳೆದು ಕಟಾವಿಗೆ ಸಿದ್ಧವಾಗುತ್ತದೆ. ಶುದ್ಧ ಬೆಳೆಯಾಗಿಯೂ ಹುರುಳಿ, ಹೆಸರು, ಅಲಸಂದಿಯೊಂದಿಗೆ ಮಿಶ್ರ ಬೆಳೆಯಾಗಿಯೂ ಇದರ ಬೇಸಾಯ ರೂಢಿಯಲ್ಲಿದೆ. ಧಾರವಾಡ ಕೃಷಿ ವಿಶ್ವವಿದ್ಯಾಲಯವು ಡಿ.ಎಚ್.ಎಲ್.ಎಮ್.36–3, ಡಿ.ಎಚ್.ಎಲ್.ಎಮ್. 14–1, ಹಾಗೂ ಎಲ್.ಎಮ್.ವಿ.513 ಸಾಮೆಯ ಸುಧಾರಿತ ತಳಿಗಳನ್ನು ಬಿಡುಗಡೆಗೊಳಿಸಿದೆ.

**ಸಾಮೆಯಿಂದ ತರಾವರಿ ಅಡುಗೆ:**

ಈ ಧಾನ್ಯವನ್ನು ನೇರವಾಗಿ ಬಳಕೆ ಮಾಡುವುದು ತುಂಬಾ ಕಡಿಮೆ. ಗಿರಣಿಗೆ ಹಾಕಿಸಿ ಮೇಲಿನ ತೌಡು ತೆಗೆದು ಬೇರ್ಪಡಿಸಿದಾಗ ದೊರೆಯುವ ಸಾವಕ್ಕಿಯನ್ನೆ ಪ್ರಧಾನವಾಗಿ ಬಳಕೆ ಮಾಡುವುದು ರೂಢಿಯಲ್ಲಿದೆ. ಸಾವಕ್ಕಿಯನ್ನು ಬರೀ ಅನ್ನಕ್ಕೆ ಮಾತ್ರ ಬಳಸುತ್ತಿದ್ದ ಕಾಲ ಈಗ ಬದಲಾಗಿದೆ. ಧಾರವಾಡದ ಕೃಷಿ ವಿಜ್ಞಾನ ಮಹಾವಿದ್ಯಾಲಯದ ಗೃಹ ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಾಕಷ್ಟು ಸಂಶೋಧನೆಗಳು ಈ ದಿಸೆಯಲ್ಲಿ ನಡೆದಿವೆ.



ಸಾವಕ್ಕಿಯನ್ನು ಉದ್ದಿನ ಬೇಳೆಯೊಂದಿಗೆ ನೀರಲ್ಲಿ ನೆನೆಸಿ ರುಬ್ಬಿ ಮಾಡಿದ ಗರಿ–ಗರಿ ಇಡ್ಲಿ ತುಂಬಾ ಸ್ವಾದಿಷ್ಟ. ಉದ್ದಿನೊಂದಿಗೆ ಸಾವಕ್ಕಿ ನೆನೆಸಿ ಮಾಡಿದ ಪಡ್ಡು, ದೋಸೆ, ಒಮ್ಮೆ ತಿಂದರೆ ಬಾಯಿ ಮತ್ತೆ ಮತ್ತೆ ಅದನ್ನೇ ಬಯಸುತ್ತದೆ. ಸಾವಕ್ಕಿಯನ್ನು ತುಪ್ಪದಲ್ಲಿ ಹುರಿದು ಬೆಲ್ಲ, ಗಸಗಸೆ, ಶುಂಠಿ, ಏಲಕ್ಕಿ, ದ್ರಾಕ್ಷಿ, ಗೋಡಂಬಿ ಹಾಕಿ ಮಾಡಿದ ಪಾಯಸ ಬಾಯಿಗೂ ರುಚಿ, ಆರೋಗ್ಯಕ್ಕೂ ಕ್ಷೇಮ.

ವಿಶ್ವ ಆಹಾರ ಸಂಸ್ಥೆ ಅಂಕಿ ಅಂಶಗಳ ಪ್ರಕಾರ ಪ್ರತಿ ನೂರು ಗ್ರಾಂ ಸಾವೆಯು 8.7 ಗ್ರಾಂ ಸಸಾರಜನಕ, 75.7 ಗ್ರಾಂ ಪಿಷ್ಟ, 5.3 ಗ್ರಾಂ ಕೊಬ್ಬು, 8.6 ಗ್ರಾಂ ನಾರಿನಾಂಶ, 1.7 ಗ್ರಾಂ ಖನಿಜಾಂಶಗಳ ಜೊತೆಗೆ 17 ಮಿ.ಗ್ರಾಂ ಸುಣ್ಣ, 220 ಮಿ.ಗ್ರಾಂ ರಂಜಕ, 6 ಮಿ.ಗ್ರಾಂ ಕಬ್ಬಿಣ 37 ಮಿ.ಗ್ರಾಂ ಸತುವನ್ನು ಒಳಗೊಂಡಿದೆ. ಧಾನ್ಯದಲ್ಲಿರುವ ಕ್ರಮೇಣವಾಗಿ ಜೀರ್ಣವಾಗಬಲ್ಲ ಶರ್ಕರ ಪಿಷ್ಟ, ಹೆಚ್ಚಿನ ಪ್ರಮಾಣದ ಕೊಬ್ಬು, ಲವಣ ಕ್ಯಾಲ್ಸಿಯಂ ರಂಜಕಗಳು ಮಧುಮೇಹಿಗಳಿಗೆ ಹೇಳಿ ಮಾಡಿಸಿದ ಆಹಾರವೆಂದೂ ಸಂಶೋಧನೆಗಳು ತಿಳಿಸುತ್ತದೆ. ಸಾವೆ ಸೇವಿಸಿದವನು ಆಮೆಯಂತೆ ದೀರ್ಘಾಯುಷಿಯಾಗುವನು ಅನ್ನುವ ಮಾತು ತುಂಬಾ ಅರ್ಥಪೂರ್ಣ.



Downloaded From:www.kpscvaani.com

# ಬರದಲ್ಲಿ ಕೈಹಿಡಿದ ಅಣಬೆ ಬೆಳೆ

**ಬರದ ನಾಡು ಕೋಲಾರದಲ್ಲಿ ಅಣಬೆ ಬೇಸಾಯ ಮಾಡಿ ಲಕ್ಷಾದೀಶ್ವರನಾಗಿರುವ ರೈತ ನಾಗರಾಜ್.**

ನವೀನ್ ಕುಮಾರ್. ಎ ಕ್ಯಾಲನೂರು

ಹಿಂದೆ ಅಣಬೆ ಅಥವಾ ನಾಯಿ ಕೊಡೆ ಎಂದರೆ ಮೂಗುಮುರಿಯುವವರು ಮತ್ತು ಚೀ ಎನ್ನುವರು ಹೆಚ್ಚಿದ್ದರು. ಆದರೆ ಇತ್ತೀಚೆಗೆ ಅಣಬೆ ಇಂದ ಪಲಾವ್, ಮಂಚೂರಿ, ಪೆಪರ್ ಡ್ರೈ, ಪೀಜ್ಹಾ ಇವೇ ಮುಂತಾದ ವಿವಿಧ ಖಾದ್ಯಗಳ ರುಚಿಯನ್ನು ಸವಿಯುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಈಗೀಗ ಅದರ ರುಚಿ ಬಹುಪಾಲು ಜನರಿಗೆ ಹಿಡಿಸುತ್ತಿದೆ. ಉತ್ತಮ ಆರೋಗ್ಯಕ್ಕೆ ಸಂಬಂಧಿಸಿದಂತೆ ಅಣಬೆಯಲ್ಲಿ ಹೆಚ್ಚಿನ ಪೋಷಕಾಂಶಗಳು ಇರುವುದರಿಂದ ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ ನಿಯಂತ್ರಣಕ್ಕೆ ಅತ್ಯಂತ ಉಪಯುಕ್ತ ಖಾದ್ಯವಾಗಿ ಪರಿಣಮಿಸಿದೆ.

ಬರದ ಜಿಲ್ಲೆಯಾದ ಕೋಲಾರದಲ್ಲಿ ಮಳೆ ನೀರು ಅವಲಂಬನೆಯಿಂದ ವ್ಯವಸಾಯ ಮಾಡಿಕೊಂಡಿದ್ದ ರೈತನೊಬ್ಬ ಈಗ ಅಣಬೆ ಬೆಳೆದು ಲಕ್ಷಾದೀಶನಾಗಿದ್ದಾನೆ. ಅಣಬೆ ಬೆಳೆದು ಉತ್ತಮ ಆದಾಯ ಗಳಿಸುವ ಉದ್ದೇಶದಿಂದ ಮುಂದಾಗಿರುವ ಮಾಲೂರು ತಾಲ್ಲೂಕಿನ ಕುಡಿಯನೂರು ಗ್ರಾಮದ ನಾಗರಾಜ್ ಅವರೇ ಈ ರೈತ.

ತಾತನ ಕಾಲದಿಂದಲೂ ನಾಗರಾಜ್ ಅವರ ಕುಟುಂಬವು ಮೂಲತಃ ಕೂಲಿ ಕಾರ್ಮಿಕರಾಗಿದ್ದರು. ನಾಗರಾಜ್ ಅವರು ರೈತನಾಗುವ





Downloaded From:www.kpscvaani.com

ಮೊದಲಿಗೆ ಟೈಲರ್ ವೃತ್ತಿಯನ್ನು ಮಾಡುತಿದ್ದರು. ಕೊರೊನಾ ಸಾಂಕ್ರಾಮಿಕ ಸಮಯದಲ್ಲಿ ಸರಿಯಾದ ಕೆಲಸ ಇಲ್ಲದೆ ಯಾವುದಾದರೂ ಕೃಷಿ ಮಾಡುವ ಉದ್ದೇಶದಿಂದ ಕೃಷಿ ಇಲಾಖೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿದರು. ಸದಾ ಕೃಷಿಯಲ್ಲಿ ಪ್ರಯೋಗಶೀಲತೆ ಮತ್ತು ಹೊಸತನ ಕಂಡುಕೊಳ್ಳುವ ದೃಢ ವಿಶ್ವಾಸದೊಂದಿಗೆ ತನ್ನ ಸ್ವಂತ ಒಂದು ಎಕರೆ ಜಮೀನಿನಲ್ಲಿ (ಮೈಕ್ರೋ ಫುಡ್ ಪ್ರೋಸೆಸಿಂಗ್ ಎಂಟರ್ಪ್ರೈಸಸ್ ಯೋಜನೆಯ ಪ್ರಧಾನ ಮಂತ್ರಿ ಔಪಚಾರಿಕರಣ) ಯೋಜನೆಯ ಆರ್ಥಿಕ ಸಹಾಯದಿಂದ ಅಣಬೆ ಬೆಳೆದರೆ ಉತ್ತಮ ಆದಾಯಗಳಿಸಬಹುದು ಎನ್ನುವ ಉದ್ದೇಶದಿಂದ ಈ ಯೋಜನೆಗೆ ಅರ್ಜಿ ಸಲ್ಲಿಸಿದರು. ಯೋಜನೆಯ ರೂಪರೇಶೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಅಧಿಕಾರಿಗಳು ಅವರಿಗೆ 7,70,000/- ರೂ. ಅನುದಾನದ ಆರ್ಥಿಕ ಸಹಾಯ ನೀಡಿದರು.

ನಂತರ ತಮ್ಮ ಸ್ವಂತ ಜಮೀನಿನ ಒಂದು ಎಕರೆಯಲ್ಲಿ 21 X 86 ಅಡಿ ಅಗಲದ ಎರಡು ಶೆಡ್‌ಗಳನ್ನು ನಿರ್ಮಾಣ ಮಾಡಿ ನೀರಾವರಿಗಾಗಿ 20 X 40 ಅಡಿ ಅಗಲದ ಕೃಷಿ ಹೊಂಡವನ್ನು ನಿರ್ಮಾಣ ಮಾಡಿ ಮಳೆ ನೀರನ್ನು ಸಂಗ್ರಹಣೆ ಮಾಡುವುದರ ಮೂಲಕ ಆ ನೀರಿನ ಬಳಕೆಯಿಂದ ಅಣಬೆ ಬೆಳೆಯಲು ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡರು.

ಅಣಬೆ ಬೆಳೆಯಲು ಪ್ರಮುಖವಾಗಿ ಭತ್ತದ ಹುಲ್ಲಿನ ಅವಶ್ಯಕತೆ ಇರುತ್ತದೆ. ಹುಲ್ಲನ್ನು ಜಾಬ್ ಕಟರ್ ಮೂಲಕ ತುಂಡು ತುಂಡಾಗಿ ಕಟ್ಟು ಮಾಡಿ ನಂತರ ಬಿಸಿ ನೀರಿನಲ್ಲಿ ಕುದಿಸಿ ಹುಲ್ಲಿನ ತೇವಾಂಶವನ್ನು ಆರಿಸಿ ಅದನ್ನು ಒಂದು ಕವರಿಗೆ ತುಂಬಿ, ಅದಕ್ಕೆ ಸ್ವಲ್ಪ ಪ್ರಮಾಣದ ಅಣಬೆ ಬೀಜವನ್ನು ಹಾಕಿ ಅದೇ ರೀತಿ ಮೂರು ಪದರದ ಹಾಗೆ ಮಾಡಲಾಗುತ್ತದೆ. ನಂತರ ಕವರನ್ನು ಬಿಗಿಯಾಗಿ ಕಟ್ಟಿ, ಕತ್ತಲೆ ಕೋಣೆಯಲ್ಲಿ ದರದಲ್ಲಿ ಕಟ್ಟಿ ನೇತು ಹಾಕಲಾಗುತ್ತದೆ. ಮೂರು ದಿನದ ನಂತರ ಕಟ್ಟಿಟ್ಟಿರುವ ಕವರ್‌ನ ಸುತ್ತಲೂ ರಂಧ್ರಗಳನ್ನು ಮಾಡುತ್ತಾರೆ. ಆ ಕಪ್ಪು ಕೋಣೆಯ ಉಷ್ಣಾಂಶವನ್ನು ಕಾಯ್ದಿಡಲು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಕಡಿಮೆ ಪ್ರಮಾಣದಲ್ಲಿ ನೀರನ್ನು ಸ್ಪ್ರೇ ಮಾಡುತ್ತಾರೆ. 30 ದಿನದ ನಂತರ ಅಣಬೆ ಕಟಾವ್‌ಗೆ ಬರುತ್ತದೆ. ಒಂದು ಬೆಳೆಯು 70 ದಿನದವರೆಗೂ ಇರುವುದರಿಂದ ಮೂರು ಬಾರಿ ಅಣಬೆಯನ್ನು ಕಟಾವು ಮಾಡಬಹುದಾಗಿರುತ್ತದೆ.

ಅಣಬೆ ಬೇಸಾಯದಿಂದ ಈಗ ನಾಗರಾಜ್ ಅವರಿಗೆ ನೆಮ್ಮದಿಯ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಕುಟುಂಬದಲ್ಲಿ ಸಂತೋಷ ಹರಡುತ್ತಿದೆ. ಕಟಾವು ಪ್ರಾರಂಭದಲ್ಲಿ ಸುಮಾರು ದಿನಕ್ಕೆ 10 ಕೆಜಿ ಗಳಷ್ಟು ಅಣಬೆಯನ್ನು ಅವರು ಕಟಾವು ಮಾಡುತ್ತಿದ್ದಾರೆ. ಪ್ರತಿ ಕೆಜಿಗೆ ರೂ. 300 ನಂತೆ ಮಾರಾಟ ಮಾಡುತ್ತಿದ್ದಾರೆ. ಈ ಮೂಲಕ ಬರದ ಜಿಲ್ಲೆ





ಕೋಲಾರದಲ್ಲಿ ಲಾಭದಾಯಕ ಕೃಷಿ ಮಾಡಿ ಜೀವನ ನಡೆಸಬಹುದು ಎಂದು ನಿರುದ್ಯೋಗ ಯುವಕರಿಗೆ ಮಾದರಿಯಾಗಿದ್ದಾರೆ.

ಗದ್ದೆಗಳಲ್ಲಿ ತಾನಾಗಿಯೇ ಬೆಳೆದ ಅಣಬೆಗಳಲ್ಲಿ ವಿಷಕಾರಿ ಅಣಬೆಗಳು ಇರುತ್ತವೆ. ಇದರ ವ್ಯತ್ಯಾಸ ಗೊತ್ತಿದ್ದವರು ಮಾತ್ರ ಹೊಲಗಳಲ್ಲಿ ತಾನಾಗಿಯೇ ಬೆಳೆದ ಅಣಬೆಯನ್ನು ಉಪಯೋಗಿಸ ಬಹುದಾಗಿರುತ್ತದೆ. ಕೃಷಿ ಇಲಾಖೆ ಸಹಾಯಕ ನಿರ್ದೇಶಕರು ಚಂದ್ರಪ್ಪ ಅವರ ಮಾರ್ಗ ದರ್ಶನದಲ್ಲಿ ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್ಪ್ರೈಸಸ್ ಯೋಜನೆಯ ಪ್ರಧಾನ ಮಂತ್ರಿ ಔಪಚಾರಿಕೀಕರಣ ಯೋಜನೆ ಅಡಿಯಲ್ಲಿ ಒಂದು ತಿಂಗಳು ತರಬೇತಿ ಪಡೆದು ಜೊತೆಗೆ ಆರ್ಥಿಕ ಸಹಾಯವನ್ನು ಪಡೆದು ನಾನು ಅತ್ಯಂತ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದೇನೆ.

ಕೆಲಸವಿಲ್ಲದೆ ನಿರುದ್ಯೋಗಿಯಾಗಿರುವ ಯುವಕ-ಯುವತಿಯರು ಅಣಬೆ ಬೇಸಾಯದಲ್ಲಿ ತೊಡಗುವ ಮೂಲಕ ಆರ್ಥಿಕವಾಗಿ ಸ್ಥಿತಿವಂತರಾಗಬಹುದು ಎಂದು ಹೇಳುವ ನಾಗರಾಜ್ ಅವರು ಈ ಬೆಳೆಯನ್ನು ಬೆಳೆಯಲು ಮೊದಲಿಗೆ ಕೃಷಿ ಇಲಾಖೆಯನ್ನು ಸಂಪರ್ಕಿಸುವುದು ಸೂಕ್ತ ಎಂಬ ಸಲಹೆಯನ್ನು ನೀಡುತ್ತಾರೆ. ನಾಗರಾಜ್ ಅವರನ್ನು ಸಂಪರ್ಕಿಸಲು ಬಯಸುವವರು ಅವರ ದೂರವಾಣಿ ಸಂಖ್ಯೆ 9113532531 ಕ್ಕೆ ಕರೆ ಮಾಡಬಹುದು. ■



Downloaded From:www.kpscvaani.com



ಪ್ರಸಾದ್ ಶೆಣೈ

**ತನ್ನೊಡಲಲ್ಲಿ ಅಗಣಿತ ಆಕಾಶವನ್ನು ತೋರಿಸುವ ಈ ಹುಲಿಕೆರೆ ಕಲ್ಯಾಣಿಯನ್ನು ನೋಡುವುದೇ ಒಂದು ಸುಂದರ ಅನುಭೂತಿ.**

# ಶಾಂತಲೆಯಂತೆ ಕಾಡುವ ನೀಲವೇಣಿ: ಹುಲಿಕೆರೆಯ ಐತಿಹಾಸಿಕ ಕಲ್ಯಾಣಿ

ಬಿಸಿಲು ಜಿಗ್ಗೆಂದು ಹೊಳೆದರೆ ಈ ಕೊಳ ಹೊನ್ನಿನಂತೆ ಫಳ ಫಳಿಸುತ್ತದೆ. ಜಿಟಿ ಜಿಟಿ ಮಳೆ ಸುರಿದರೆ ಆ ಮಳೆಯ ಧಾರೆಗೆ ಇನ್ನಷ್ಟು ಶುಭ್ರಗೊಂಡು ಮೈದುಂಬಿಕೊಳ್ಳುವ ನೀಲವೇಣಿ ಈ ಕಲ್ಯಾಣಿ. ಆಕಾಶಕ್ಕೆ ಮೈಚಾಚಿ ನಿಂತಿರುವ ಗಿಡ ಮರ ಬಳ್ಳಿಗಳ ಪ್ರತಿಬಿಂಬವನ್ನೆಲ್ಲಾ ತನ್ನಲ್ಲಿ ಮೂಡಿಸಿಕೊಂಡು ಇಡೀ ಆಕಾಶವನ್ನೇ ನನ್ನೊಡಲಲ್ಲಿ ಇಳಿಸಿಬಿಟ್ಟಿದ್ದೇನೆ ನೋಡಿ ಎಂದು ನೀರೊಳಗೆ ಅಗಣಿತ ಆಕಾಶವನ್ನು ತೋರಿಸುವ ಈ ಕಲ್ಯಾಣಿಯನ್ನು ನೋಡುವುದೇ ಒಂದು ಸುಂದರ ಅನುಭೂತಿ. ಅದರಲ್ಲೂ ಐತಿಹಾಸಿಕ ಕಲ್ಲು ಮಂಟಪಗಳನ್ನು ತನ್ನಲ್ಲಿ ಹೊತ್ತುಕೊಂಡು ಬೀಗುವ ಈ ಕಲ್ಯಾಣಿ ಇತಿಹಾಸದ ಕಥನಗಳನ್ನು ಸಾರುತ್ತ ಹೊಳೆಯುವ ಚಂದವಿದೆಯಲ್ಲವೇ... ಅದು ನಿಜಕ್ಕೂ ಒಂದು ಅಪೂರ್ವ ಕಾವ್ಯ.

ಇಂತಹ ಕಲ್ಯಾಣಿ ಇರುವುದು ಹಾಸನ ಜಿಲ್ಲೆಯ ಹಳೆಬೀಡಿನ ಪುಟ್ಟ ಗ್ರಾಮವಾದ ಹುಲಿಕೆರೆಯಲ್ಲಿ. ಹಳೆಬೀಡೆಂದರೆ ನಿಮಗೆ ವರ್ಣಿಸಬೇಕಿಲ್ಲ ಬಿಡಿ. ಹೊಯ್ಸಳರ ಆಡೊಂಬೊಲವಿದು. ಹೊಯ್ಸಳೇಶ್ವರ ದೇವಸ್ಥಾನ, ಕೇದಾರೇಶ್ವರ ದೇವಸ್ಥಾನ ಮೊದಲಾದ ಹೊಯ್ಸಳರ ಕಾಲದ ದೇವಾಲಯಗಳು ಹಳೇಬೀಡು ಎಂದ ತತ್‌ಕ್ಷಣ ಎಲ್ಲರ ಬಾಯಲ್ಲಿ ಬಂದುಬಿಡುತ್ತದೆ. ಅದೇ ಊರಿನ ಹುಲಿಕೆರೆ ಎನ್ನುವ ಗ್ರಾಮದಲ್ಲಿರುವ ಅಪೂರ್ವ ರಚನೆಯ ಐತಿಹಾಸಿಕ ಕೆರೆ (ಕಲ್ಯಾಣಿ) ನಮ್ಮೊಳಗೆ ಹೊಸತಾದ ಐತಿಹಾಸಿಕ ಪ್ರಜ್ಞೆಯೊಂದನ್ನು ರೂಪಿಸುತ್ತದೆ. ಹೊಯ್ಸಳರ ವಾಸ್ತುಶಿಲ್ಪಗಳ ಕುರಿತು, ಆ ಕಾಲದ ಶಿಲ್ಪಿಗಳಿಗಿದ್ದ ಕಲಾಚಾತುರ್ಯದ ಕುರಿತು, ಕಲಾತ್ಮಕ ಸೃಜನಶೀಲತೆಯ ಕುರಿತು, ಇದಕ್ಕಿಂತಲೂ ಹೆಚ್ಚಾಗಿ ಹೊಯ್ಸಳ ರಾಜರಿಗಿದ್ದ ಜಲ ಕಾಳಜಿಯ ಕುರಿತು ಹೆಮ್ಮೆ ಹುಟ್ಟಿಸುತ್ತದೆ. ಕನ್ನಡನಾಡನ್ನು ಆಳಿದ ಇಂತಹ ರಾಜರು ಈ ಕಾಲಕ್ಕೂ ಭವ್ಯ ವಾಸ್ತುಶಿಲ್ಪದ ಮೂಲಕ ದೂರದೃಷ್ಟಿ, ಸಾಹಸ, ತಾಳ್ಮೆ, ಜಾಣ್ಮೆಗಳನ್ನು ನಮಗೆ ತಿಳಿಸುತ್ತಿದ್ದಾರಲ್ಲಾ ಎನ್ನುವ ಸಾರ್ಥಕತೆಯೂ ಈ ಕಲ್ಯಾಣಿಯನ್ನು ನೋಡುವಾಗ ಆಗುತ್ತದೆ.

**ಕಲ್ಯಾಣಿಯ ಜಾಡು ಹಿಡಿದು:**

ಹಳೆಬೀಡಿನಿಂದ ಹಗರೆ ರಸ್ತೆಯಲ್ಲಿ ಎರಡು ಕಿ.ಮೀ ಸಾಗಿದರೆ  ಹುಲಿಕೆರೆ ಎನ್ನುವ ಗ್ರಾಮ ಎದುರಾಗುತ್ತದೆ. ಈ ಗ್ರಾಮದಲ್ಲಿ ತನ್ನ ನೀಳ ಸೌಂದರ್ಯವನ್ನು ಒಂದಷ್ಟು ಬಚ್ಚಿಡುತ್ತ, ಇತಿಹಾಸದ ನೂರು ಕತೆಗಳನ್ನು ಸಾರುತ್ತಾ ನಿಂತಿದೆ ಹುಲಿಕೆರೆ ಎನ್ನುವ ಮನಮೋಹಕ ಕೊಳ. ಕ್ರಿ.ಶ. 1167 ರಲ್ಲಿ  ಹೊಯ್ಸಳರ ದೊರೆ  ವೀರನರಸಿಂಹನ ಕಾಲದಲ್ಲಿ ಈ ಕಲ್ಯಾಣಿ ನಿರ್ಮಾಣವಾಗಿದೆ. ಚಟ್ಟೇಶ್ವೇರ ದೇಗುಲದ ಬಳಿ ಈ ಕೊಳ ಇರುವುದರಿಂದ ಈ ಕೊಳವನ್ನು ಚಟ್ಟೇಶ್ವರ ಸಮುದ್ರವೆಂದೂ ಕರೆಯುತ್ತಿದ್ದರಂತೆ. ಹಿಂದೆ ಹುಲಿಕೆರೆ, ಹೊಯ್ಸಳರ ರಾಜಧಾನಿ ದ್ವಾರಸಮುದ್ರದ ಮುಖ್ಯಕೇರಿಗಳಲ್ಲಿ ಒಂದಾಗಿತ್ತು.

ಇನ್ನೊಂದು ಆಸಕ್ತಿದಾಯಕ ವಿಷಯವೆಂದರೆ ಹೊಯ್ಸಳರ ಬಿಟ್ಟಿದೇವ, ತನ್ನ ರಾಣಿ ಶಾಂತಲೆಗಾಗಿ ಈ ಕೊಳವನ್ನು ನಿರ್ಮಿಸಿದನೆಂದೂ, ರಾಣಿ ತನ್ನ





Downloaded From:www.kpscvaani.com

ಸಖಿಯರೊಂದಿಗೆ ಈ ಕೊಳಕ್ಕೆ ಜಲಕ್ರೀಡೆಯಾಡಲು ಬರುತ್ತಿದ್ದಳೆಂದೂ, ಆಕೆ ಜಲಕ್ರೀಡೆಗೆ ಬರುವಾಗ ಸುತ್ತಲೂ ಯಾರೂ ಆ ಕಡೆಗೆ ಹೋಗದಂತೆ ಹುಲಿಯಂತಹ ಭದ್ರತೆ ನೀಡಲಾಗುತ್ತಿತ್ತೆಂದೂ, ಆ ಭದ್ರತೆಯ ಕಾರಣಕ್ಕೆ ಕ್ರಮೇಣ ಇದು ಹುಲಿಕೆರೆಯಾಯಿತೆಂದೂ ಹೇಳಲಾಗುತ್ತದೆ. ಹುಲಿಕೆರೆ ಎನ್ನುವ ಹೆಸರಿನಲ್ಲಿಯೇ ಹುಲಿಯ ಗರ್ಜನೆ ಇದೆ. ಹಿಂದೆ ಈ ಸ್ಥಳದಲ್ಲಿ ದಟ್ಟವಾದ ಕಾಡಿತ್ತು, ಹುಲಿಗಳೂ ಈ ಕೊಳಕ್ಕೆ ನೀರು ಕುಡಿಯಲು ಬರುತ್ತಿತ್ತು ಎಂದೂ ಗ್ರಾಮಸ್ಥರು ಹೇಳುತ್ತಾರೆ.

ಈ ಕೊಳಕ್ಕೆ ರಾಣಿ ಶಾಂತಲೆ ಕೊಳ ಎಂದೂ ಕರೆಯಲಾಗುತ್ತದೆ. ರಾಣಿ ಶಾಂತಲೆ ಪವಿತ್ರವಾದ ಹೆಣ್ಣು, ಇತಿಹಾಸದಲ್ಲಿಯೂ ಆಕೆಯ ನಾಟ್ಯ, ಆಕೆಯ ಪ್ರೀತಿ ಉಲ್ಲೇಖವಾಗಿದ್ದು, ಈ ಕೆರೆಯೂ ಆಕೆಯಷ್ಟೇ ಶುಭ್ರ ಎಂದೂ ವರ್ಣಿಸಬಹುದು. ಒಂದು ಅರ್ಥದಲ್ಲಿ ಹುಲಿಕೆರೆ ಹೆಣ್ತನದ, ಸಹಜತೆಯ, ಶುಭ್ರತೆಯ ಪ್ರತೀಕವಾಗಿ ನಿಂತಿದೆ.

ನಾವು ಈ ಶಾಂತಲೆಯ ಹುಲಿಕೆರೆ ನೋಡಲು ಹೋದದ್ದು ಜುಲೈ ತಿಂಗಳ ಮಳೆಗಾಲದಲ್ಲಿ. ಕೊಳದಲ್ಲಿ ಒಳ್ಳೆಯ ನೀರಿತ್ತು. ಮಳೆ ಒಂದಷ್ಟು ಬಿಡುವು ಕೊಟ್ಟು ಬಿಸಿಲು ಕೊಳಕ್ಕಿಳಿದಿತ್ತು. ಈ ಕೊಳ ಭೂಮಟ್ಟದಿಂದ ಸುಮಾರು 60 ಅಡಿ ಆಳದಲ್ಲಿದ್ದು. ಕೊಳದಲ್ಲಿ 11 ಪ್ರಧಾನ ಕಲ್ಲು ಮಂಟಪಗಳು, 16 ಉಪ ಗುಡಿಗಳಿವೆ. ಈ 27 ಮಂಟಪಗಳು 27 ನಕ್ಷತ್ರಗಳ ಪ್ರತೀಕವಾಗಿದೆ. ಹಾಗಾಗಿ ಈ ಕೊಳದ ಕೆತ್ತನೆಯಲ್ಲಿ ಖಗೋಳಶಾಸ್ತ್ರದ ಪರಿಕಲ್ಪನೆಯನ್ನು ಬಳಸಿಕೊಳ್ಳಲಾಗಿದೆ. ಕೊಳದಲ್ಲಿ ಆಕರ್ಷಕವಾಗಿ ನಿಂತಿರುವ ಈ ಗೋಪುರಾಕೃತಿಯ ಗುಡಿಗಳ ಶಿರಕ್ಕೆ ಕಲಾತ್ಮಕವಾದ ಕುಸುರಿ ಇದೆ. ಇಡಿಯಾಗಿ ನೋಡಿದರೆ ಈ ಎಲ್ಲಾ ಗುಡಿಗಳು ಒಂದಕ್ಕೊಂದು ಹೆಣೆದುಕೊಂಡಂತೆ ಕಾಣುತ್ತದೆ. ಒಂದೊಂದು ಮಂಟಪವನ್ನೂ ಅಡಿಯಿಂದ ಮುಡಿಯವರೆಗೆ ಸೂಕ್ಷ್ಮವಾಗಿ ಗಮನಿಸಿದರೆ ಹೊಯ್ಸಳ ಶೈಲಿಯ ಶಿಲ್ಪಗಳು, ಆ ವಾಸ್ತುಶಿಲ್ಪದ ಹದವಾದ ನುಣುಪುತನ, ಅದರ ಸೃಜನಶೀಲ ಸಂರಚನೆ, ಪರಿಪೂರ್ಣತೆ, ಶಿಲ್ಪಿ ಅದನ್ನು ಕೆತ್ತಲು ದುಡಿಸಿಕೊಂಡ ಶ್ರಮ, ಶ್ರದ್ಧೆ, ತಾಳ್ಮೆ ಎಲ್ಲವೂ ಅರಿವಿಗೆ ಬರುತ್ತದೆ.

ಸುಮಾರು 36 ಮೆಟ್ಟಿಲುಗಳನ್ನು ಇಳಿದರೆ ಕೊಳದ ಕೆಳಗಿನವರೆಗೂ ಸಾಗಬಹುದು. ಕೊಳದ ಮೆಟ್ಟಿಲುಗಳು ಶುರುವಾಗುವ ಒಂದು ಮೂಲೆಯಲ್ಲಿ ಊನಗೊಂಡ ಒಂದಷ್ಟು ದೇವತೆಯ ಮೂರ್ತಿಗಳು, ಒಂದಷ್ಟು ಶಿಲ್ಪಗಳು ಸಿಗುತ್ತವೆ. ಇದು ಪ್ರಾಕೃತಿಕ ವಿಕೋಪದಿಂದ ಕುರೂಪಗೊಂಡಿತೋ ಅಥವಾ ಬೇರೆ ರಾಜರ ಧಾಳಿಯಿಂದ ಹೀಗಾಯಿತೋ ಎನ್ನುವ ಪ್ರಶ್ನೆ ಮಾತ್ರ ಕಾಡುತ್ತದೆ.

ಹಿಂದೆ ಮಳೆಯ ನೀರು ಎಷ್ಟು ಬೇಕೋ ಅಷ್ಟೇ ಸಂಗ್ರಹವಾಗಿ ಉಳಿದಂತೆ ಮಳೆಯ ನೀರು ಹರಿದುಹೋಗಲು ಈ ಕೊಳದಲ್ಲೊಂದು ಕಿಂಡಿ ಇತ್ತಂತೆ. ಆದರೆ ಅದು ಕಾಲಕ್ರಮೇಣವಾಗಿ ಮುಚ್ಚಿಹೋಯಿತು. ಹೊಯ್ಸಳೇಶ್ವರ ದೇಗುಲದ ನಿತ್ಯ ಬಳಕೆಗೂ ಈ ನೀರನ್ನು ಬಳಸುತ್ತಿದ್ದರು ಎನ್ನಲಾಗುತ್ತಿದೆ.



## ಹೀಗೆ ಬನ್ನಿ ಹುಲಿಕೆರೆಗೆ

ಹಾಸನ ಜಿಲ್ಲಾಕೇಂದ್ರದಿಂದ 31 ಕಿ.ಮೀ ದೂರದಲ್ಲಿದೆ. ಹಾಸನದಿಂದ ಐತಿಹಾಸಿಕ ತಾಣವಾದ ಹಳೇಬೀಡು ಹೊಯ್ಸಳೇಶ್ವರ ದೇವಸ್ಥಾನಕ್ಕೆ ಬಂದರೆ ಅಲ್ಲಿಂದ ಪುಷ್ಪಗಿರಿ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ (ಹಗರೆ ರಸ್ತೆಯಲ್ಲಿ) ಎರಡು ಕಿ.ಮೀ ಸಾಗಿದರೆ ಹುಲಿಕೆರೆ ಎನ್ನುವ ಗ್ರಾಮ ಎದುರಾಗುತ್ತದೆ. ಅಲ್ಲಿದೆ ಹುಲಿಕೆರೆ. ಅಂದ ಹಾಗೆ ಇಲ್ಲಿಗೆ ಕಾರು, ಬೈಕ್, ಆಟೋ, ಟ್ಯಾಕ್ಸಿ ಮೊದಲಾದವುಗಳ ಮೂಲಕ ತೆರಳಬಹುದು. ಹಳೇಬೀಡು ಪಟ್ಟಣದಿಂದ ಇಲ್ಲಿಗೆ ಸೂಕ್ತ ರಿಕ್ಷಾ ಸೌಲಭ್ಯವೂ ಸಿಗುತ್ತದೆ.

ಹೊಯ್ಸಳರ ಕಾಲದಲ್ಲಿ ಇಂತಹ ಕಲ್ಯಾಣಿಗಳಿಗೆ ಭಾರೀ ಪ್ರಾಧಾನ್ಯತೆ ನೀಡಲಾಗುತಿತ್ತು. ಕೊಳ ನಿರ್ಮಿಸುವಾಗ ಅವರಿಗೊಂದು ಮುಂದಾಲೋಚನೆಯೂ ಇತ್ತು. ನೀರಾವರಿಯ ಕುರಿತು ಆಸ್ಥೆಯೂ ಇತ್ತು. ಆ ಆಸ್ಥೆಯಿಂದಾಗಿಯೇ ಇಂದಿಗೂ ಇಂತಹ ಕೊಳಗಳು ಗ್ರಾಮದ ಅಂತರ್ಜಲ ಮಟ್ಟವನ್ನು ಹಿಗ್ಗಿಸಿದೆ.

ನೀರಿನ ಮಹತ್ವವನ್ನು ಕೂಡ ಈ ಕೊಳಗಳು ಐತಿಹಾಸಿಕ ಕತೆಗಳಷ್ಟೇ ಆಳವಾಗಿ ಹೇಳುತ್ತಿದೆ. ಇದನ್ನೆಲ್ಲವನ್ನು ಕೇಳುವ, ನೋಡುವ, ಅನುಭವಿಸುವ ಮನಸ್ಸು ತಾಳ್ಮೆ ನಮಗಿರಬೇಕಷ್ಟೇ.

ಅಂದು ಹೊಯ್ಸಳರು ಕಟ್ಟಿ ಬೆಳೆಸಿದ ಈ ಹುಲಿಕೆರೆ ಕೊಳದ ಮಹತ್ವವನ್ನು ಇಲಾಖೆಗಳು ಪ್ರವಾಸೋದ್ಯಮ ದೃಷ್ಟಿಯಿಂದ ಮಾತ್ರ ಪರಿಚಯ ಮಾಡಿಕೊಟ್ಟರೆ ಸಾಲದು. ನೀರಾವರಿ ದೃಷ್ಟಿಯಿಂದಲೂ ಇಂತಹ ಕೆರೆಗಳ ಮಹತ್ವವನ್ನು ಪ್ರವಾಸಿಗರಿಗೆ ಸಾರಬೇಕು. ಗ್ರಾಮಗಳ ಅಭಿವೃದ್ಧಿಗೆ ಮೂಲಕೇಂದ್ರವಾಗಿ ಇಂತಹ ಕೆರೆಗಳನ್ನು ಬಳಸಿಕೊಳ್ಳಬೇಕು. ಕೆರೆಗಳು ಮಲಿನವಾಗದಂತೆ ಉಳಿಸಿಕೊಳ್ಳಬೇಕು ಕೂಡ. ಒಟ್ಟಾರೆಯಾಗಿ ನಮ್ಮ ಕನ್ನಡ ನಾಡಿನ ಇಂತದ್ದೊಂದು ಅಪೂರ್ವ ಐತಿಹಾಸಿಕ ಕೊಳವನ್ನು ದೇಶ-ವಿದೇಶದ ಮಂದಿಗಳು ಬೆರಗಿನಿಂದ ನೋಡುವಂತಾಗಿರುವುದು ನಮ್ಮ ಸೌಭಾಗ್ಯ ಮತ್ತು ಹೆಮ್ಮೆ.


Downloaded From:www.kpscvaani.com



**ಕನ್ನಡ ಸಾಮ್ರಾಜ್ಯವನ್ನು ಕಟ್ಟಿದ ಕದಂಬರ ಎರಡನೆ ರಾಜ್ಯಧಾನಿಯಾಗಿದ್ದ ಹಲಸಿಯಲ್ಲಿರುವ ಪ್ರಾಚೀನ ಕಲಾವೈಭವ.**

ಪ್ರಹ್ಲಾದ ಪರ್ವತಿ



# ಹಲಸಿ: ಕದಂಬರ ಶಿಲ್ಪಸಂಪದ

ಪಶ್ಚಿಮಘಟ್ಟಗಳ ಸುಂದರ ಪರ್ವತಶ್ರೇಣಿಯ ಹಸಿರಿನ ಮಧ್ಯ ಪವಡಿಸಿರುವ ಪುಟ್ಟ ಊರು "ಹಲಸಿ". ಇದು ಕದಂಬ ವಾಸ್ತುಶಿಲ್ಪ ದೇವಾಲಯಗಳ ಸಂಕೀರ್ಣದಿಂದ ಪ್ರಾಮುಖ್ಯತೆ ಪಡೆದ ಕರ್ನಾಟಕದ ಅತ್ಯಂತ ಪ್ರಾಚೀನ ಪಟ್ಟಣಗಳಲ್ಲೊಂದು. ಕನ್ನಡ ಸಾಮ್ರಾಜ್ಯವನ್ನು ಕಟ್ಟಿದ ಪ್ರಥಮ ಸಾಮ್ರಾಜ್ಯವಾದ ಕದಂಬರ ಎರಡನೆಯ ರಾಜ್ಯಧಾನಿಯಾಗಿದ್ದ ಈ ಸ್ಥಳ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿದೆ. ಪ್ರಾಚೀನದಲ್ಲಿ 'ಪಲಾಶಿಕಾ', 'ಪಲಾಶಿ', 'ಪಲಸಿಗೆ', 'ಹಲಸಿಗೆ', 'ಹಲಶಿ' ತದನಂತರ ಹಲಸಿ ಎಂಬ ಹೆಸರನ್ನು ಈ ಊರು ಹೊಂದಿರುವುದು ಇತಿಹಾಸದಿಂದ ವಿದಿತವಾಗುತ್ತದೆ.

ಇದು ಆರಂಭಿಕ ಕದಂಬ ರಾಜವಂಶದ ಕೇಂದ್ರವಾಗಿತ್ತು. ಗೋವೆಯ ಕದಂಬರ ಕಾಲದಲ್ಲಿ 'ಹಲಸಿಗೆ–1200' ವಿಭಾಗದ ಪ್ರಮುಖಸ್ಥಳವಾಗಿ ಗುರುತಿಸಿಕೊಂಡಿತ್ತು ಎಂಬುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ಸ್ಥಳದ ಇತಿಹಾಸವು ಕ್ರಿ.ಪೂ. 500 ಕ್ಕೂ ಹಿಂದೆ ಕೊಂಡೊಯ್ಯುತ್ತದೆ. ಬನವಾಸಿ ಕದಂಬರ ಪತನಾ ನಂತರ ಹಲಸಿ' ಮತ್ತೆ ಉಚ್ಛ್ರಾಯ ಸ್ಥಿತಿಗೆ ಏರಿದ್ದು



Downloaded From:www.kpscvaani.com

ಗೋವೆಯ ಕದಂಬರ (980–1025) ಕಾಲದಲ್ಲಿ.

**ವಾಸ್ತುಶಿಲ್ಪದ ಸೌಂದರ್ಯ:**

ಹಲಸಿಯಲ್ಲಿ ಕದಂಬ ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿ ಅನೇಕ ದೇವಾಲಯಗಳಿವೆ. ಕಾಲದ ಪರೀಕ್ಷೆಯಲ್ಲಿ ಕೆಲವು ದೇವಾಲಯಗಳು ಮಾತ್ರ ಸುಸ್ಥಿತಿಯಲ್ಲಿವೆ. ಐತಿಹಾಸಿಕ ಹಾಗೂ ಸೌಂದರ್ಯದ ದೃಷ್ಟಿಯಿಂದ ಭೂವರಾಹಲಕ್ಷ್ಮಿನರಸಿಂಹ ದೇವಾಲಯ ಪ್ರಮುಖವಾದದು. ಕದಂಬ ವಾಸ್ತುಶಿಲ್ಪಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಪರಸ್ಪರ ಮುಖಾಮುಖಿಯಾಗಿರುವ ಈ ದ್ವಿಕೂಟ ದೇವಾಲಯದ ಒಂದು ಗರ್ಭಗೃಹದಲ್ಲಿ ಭೂವರಾಹವಿಗ್ರಹವಿದ್ದು, ಇನ್ನೊಂದರಲ್ಲಿ ಕುಳಿತಭಂಗಿಯ ಶ್ರೀಮನ್ನಾರಾಯಣ ಹಾಗೂ ಮೂಲ ದೇವರಾದ ನರಸಿಂಹ ವಿಗ್ರಹವಿದೆ. ಆರಂಭದಲ್ಲಿ ನಾರಾಯಣ ಹಾಗೂ ನರಸಿಂಹ ದೇವಾಲಯ ಮಾತ್ರ ಇದ್ದು, ನಂತರ ದೇಗುಲವನ್ನು ವಿಸ್ತರಿಸಿ ಭೂವರಾಹಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆಯೆಂದು ತಿಳಿದು ಬರುತ್ತದೆ.

ದೇವಾಲಯವನ್ನು ಎತ್ತರದ ವೇದಿಕೆಯ ಮೇಲೆ ನಿರ್ಮಿಸಲಾಗಿದ್ದು, ಪ್ರವೇಶದ್ವಾರದಲ್ಲಿ ಮೆಟ್ಟಿಲುಗಳಿವೆ. ಈ ಮಂದಿರಕ್ಕೆ ಮುಂಭಾಗದಲ್ಲಿ ಪ್ರವೇಶ ದ್ವಾರವಿರುವುದಿಲ್ಲ. ಎಡ ಹಾಗೂ ಬಲಭಾಗದಲ್ಲಿ ದ್ವಾರವಿರುವುದು ಇಲ್ಲಿಯ ವೈಶಿಷ್ಟವಾಗಿದೆ. ದೇವಾಲಯಕ್ಕೆ ಲಗತ್ತಿಸಲಾದ ಅಂತರಾಳ, ಎರಡು ಮುಖಮಂಟಪಗಳೊಂದಿಗೆ ನವರಂಗ ತೆರೆದುಕೊಳ್ಳುತ್ತದೆ. ನವರಂಗದ ಕೇಂದ್ರ ಛಾವಣಿಯು ಸುಂದರವಾದ ಕಮಲದ ವಿಶಿಷ್ಟ ಶಿಲ್ಪ ವಿನ್ಯಾಸವನ್ನು ಹೊಂದಿದೆ. ಪ್ರದಕ್ಷಿಣಾ ಪಥ ಹಾಗೂ ಕದಂಬ ನಗರ ಶೈಲಿಯ ಸುಂದರ ಗೋಪುರ ಹೊಂದಿದೆ. ದೇಗುಲ ಪ್ರವೇಶಿಸುತ್ತಿದ್ದಂತೆಯೇ ಮುಖ ಮಂಟಪದಲ್ಲಿ ಚೌಕಾಕಾರದ ಬೃಹತ್ ಶಿಲಾಸ್ಥಂಭಗಳಿದ್ದು, ಸಂಕೀರ್ಣ ಕೆತ್ತನೆಯಿಂದ ಕಂಗೊಳಿಸುತ್ತವೆ.

**ಸಂಚಾರ ಮಾರ್ಗ**

ಬೆಳಗಾವಿಯಿಂದ 42 ಕಿ.ಮೀ.ದೂರದಲ್ಲಿರುವ ಹಲಸಿಗೆಗೆ ಖಾನಾಪುರ ಮೂಲಕ ಸರ್ಕಾರಿ ಬಸ್ ಸೌಲಭ್ಯವಿದೆ. ಹುಬ್ಬಳ್ಳಿಯಿಂದ 73 ಕಿ.ಮೀ, ಚೆನ್ನಮ್ಮನ ಕಿತ್ತೂರಿನಿಂದ 26 ಕಿ.ಮೀ, ಖಾನಾಪುದಿಂದ 14ಕಿ.ಮೀ ದೂರದಲ್ಲಿದ್ದು ಉತ್ತಮ ರಸ್ತೆಸಾರಿಗೆ ಸಂಪರ್ಕವಿದೆ. ಹುಬ್ಬಳ್ಳಿ ಹಾಗೂ ಬೆಳಗಾವಿಗೆ ರೈಲು ಹಾಗೂ ವಿಮಾನ ಸಾರಿಗೆ ಸೌಲಭ್ಯವಿದೆ.

**ಮೂಲ ನರಸಿಂಹಸ್ವಾಮಿ:**

ಪೂರ್ವಾಭಿಮುಖವಾಗಿರುವ ಗರ್ಭಗುಡಿಯು ಸುಂದರ ಕೆತ್ತನೆಯ ಬಾಗಿಲವಾಡ ಹೊಂದಿದ್ದು, ಗರ್ಭಗುಡಿಯಲ್ಲಿ ಐದು ಅಡಿ ಎತ್ತರದ, ಪದ್ಮಾಸನದಲ್ಲಿರುವ ಹಸಿರು ಮೊಡಿಯ ಏಕಶಿಲೆಯ ಶ್ರೀನಾರಾಯಣದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಐದನೆಯ ಶತಮಾನದಲ್ಲಿ ಕದಂಬ ಅರಸ ಶಿವಚಿತ್ತನು ಈ ಗುಡಿಯನ್ನು ನಿರ್ಮಿಸಿರುವುದಾಗಿ ಶಾಸನ ತಿಳಿಸುತ್ತದೆ. ಈ ಪ್ರತಿಮೆ ಸುಂದರವಾಗಿದ್ದು, ನೋಡುಗರನ್ನು ವಿಸ್ಮಯಗೊಳಿಸುತ್ತದೆ. ಕೈಗಳಲ್ಲಿ ಶಂಖ-ಚಕ್ರಹಿಡಿದಿರುವ ಯೋಗಿನಾರಾಯಣನು ತನ್ನ ದಿವ್ಯ ಧ್ಯಾನ ಮುದ್ರೆ ರೂಪದಿಂದ ಭಕ್ತರಿಗೆ ದರ್ಶನ ನೀಡುತ್ತಾನೆ. ಈ ಪ್ರತಿಮೆ ಕದಂಬರ ಶ್ರೇಷ್ಠ ವಾಸ್ತುಶಿಲ್ಪಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರೆ ಉತ್ಪ್ರೇಕ್ಷೆಯಾಗದು. ಪ್ರತಿಮೆಯ ಎಡಬದಿಯಲ್ಲಿ ದೇಗುಲದ ಮೂಲದೈವವಾದ ಬಾಲ ನರಸಿಂಹಸ್ವಾಮಿ ವಿಗ್ರಹವಿದೆ. ಈ ನರಸಿಂಹ ವಿಗ್ರಹ ಸ್ವಯಂ ಭೂ ಎಂಬ ಐತಿಹ್ಯವಿದೆ. ಇದಲ್ಲದೇ ಕೇಶವ ಹಾಗೂ ಆಂಜನೇಯ ಮೂರ್ತಿಗಳನ್ನು ಸಹ ಸ್ಥಾಪಿಸಲಾಗಿದೆ.

ಮುಖ್ಯ ಗರ್ಭಗೃಹದ ಎದುರು ಪಶ್ಚಿಮಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾದ ಐದು ಅಡಿ ಎತ್ತರದ ನಿಂತ ಭಂಗಿಯ ಹಸಿರು ಶಿಲೆಯ ಭೂವರಾಹಸ್ವಾಮಿ ವಿಗ್ರಹವು ದೇವಾಲಯದ ಪ್ರಮುಖ ಆಕರ್ಷಣೆ. ಈ ಮೂರ್ತಿಯನ್ನು ಕದಂಬ ಅರಸ ವಿಜಯಾದಿತ್ಯ-ಖಖಖ 1186–87 ರಲ್ಲಿ ಸ್ಥಾಪಿಸಿದ್ದು, ಇಲ್ಲಿ ವಿಷ್ಣುವಿನ ವರಾಹ ಅವತಾರವಿದ್ದು, ವರಾಹಸ್ವಾಮಿ ತನ್ನ ಹೆಗಲ ಮೇಲೆ ಭೂದೇವಿಯನ್ನು ಹೊತ್ತುಕೊಂಡಿದ್ದಾನೆ. ಎಡಗಾಲನ್ನು ಆಮೆಯ (ಕೂರ್ಮ) ಮೇಲೆ ಬಲಗಾಲನ್ನು ಆದಿಶೇಷನ ಮೇಲೆ ಇಟ್ಟು ನಿಂತಿದ್ದಾನೆ. ಭೂವರಾಹ ವಿಗ್ರಹವು ಕುಸರಿ ಕಲೆಯ ಪ್ರಭಾವಳಿ ಹೊಂದಿದ್ದು, ಸೂಕ್ಷ್ಮಾತಿ ಸೂಕ್ಷ್ಮ ಕೆತ್ತನೆಯಿಂದ ಕರ್ನಾಟಕ ಶಿಲ್ಪಕ್ಕೆ ಗೋವೆಯ ಕದಂಬರ ಅಪೂರ್ವ ಕೊಡುಗೆಯನ್ನು ಪರಿಚಯಿಸುತ್ತದೆ. ಈ ಗರ್ಭಗುಡಿಯಲ್ಲಿ ಸೂರ್ಯನಾರಾಯಣ, ಮಹಾಲಕ್ಷ್ಮೀ ವಿಗ್ರಹಗಳು ಸಹ ಇವೆ.



ದೇವಸ್ಥಾನದ ಹೊರ ಆವರಣದಲ್ಲಿ ಸೂಕ್ಷ್ಮ ಕೆತ್ತನೆಯ ಗಣಪತಿ, ಶಿವಲಿಂಗ, ಆದಿಶಕ್ತಿ, ವೀರಭದ್ರೇಶ್ವರ, ವಿಠ್ಠಲ-ರುಕ್ಕಮಾಯಿ ದೇವರಮೂರ್ತಿಗಳು ಕಣ್ಮನಸೆಳೆಯುತ್ತವೆ. ಮೇಲ್ಛಾವಣಿಯ ಸುತ್ತ ಚಪ್ಪಡಿಗಳನ್ನು ಇಳಿಜಾರಾಗಿ ಜೋಡಿಸಲಾಗಿದ್ದು, ಗರ್ಭಗುಡಿಯ ಮೇಲೆ ಚತುರ ಸ್ರಾಕಾರದಲ್ಲಿ ಶಿಲೆಗಳು ಮೆಟ್ಟಿಲು-ಮೆಟ್ಟಿಲಾಗಿ ಪಿರಮಿಡ್ ಆಕೃತಿಯಲ್ಲಿ ಮೇಲೆ ಹೋದಂತೆ ಕದಂಬ ನಾಗರ ಶಿಖರವಿದ್ದು ಮೇಲೆ ಕಳಸವಿದೆ. ಈ ದೇವಾಲಯದ ಪೂರ್ವ ಭಾಗದಲ್ಲಿ ಶಿವಾಲಯವಿರುವ ಗರ್ಭಗುಡಿ ಹಾಗೂ ದೊಡ್ಡಮಂಟಪ ಹೊಂದಿರುವ ಕಲ್ಲೇಶ್ವರ ದೇಗುಲ ಹಾಗೂ ಜಿನಾಲಯವಿರುವ ಕುರುಹುಗಳಿವೆ.

ಐತಿಹಾಸಿಕ ಪ್ರಾಮುಖ್ಯತೆಯ ಹೊರತಾಗಿ, ಹಲಸಿಯ ಈ ದೇವಾಲಯ ತನ್ನ ವಾಸ್ತುಶಿಲ್ಪ ಸೌಂದರ್ಯಕ್ಕಾಗಿ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಭಾರತೀಯ ಪುರಾತತ್ವ ಇಲಾಖೆಯ ಉಸ್ತುವಾರಿಯಲ್ಲಿರುವ ಈ ದೇವಾಲಯದ ಸುತ್ತಲೂ ಉದ್ಯಾನವನ ನಿರ್ಮಿಸಿದ್ದು, ಈ ಹಸಿರು ಹಾಸಿಗೆ ಪ್ರವಾಸಿಗರಲ್ಲಿ ಉಲ್ಲಾಸ-ಉತ್ಸಾಹ ತುಂಬುತ್ತದೆ. ಕದಂಬ ಶೈಲಿಯ ಕಲಾ ನೈಪುಣ್ಯತೆಯಿಂದ ಹೃನ್ಮನ ಸೆಳೆಯುವ ಈ ದೇವಾಲಯವನ್ನು ಕನ್ನಡಿಗರೊಮ್ಮೆ ಕಣ್ತುಂಬಿಕೊಳ್ಳಲೇಬೇಕು.



Downloaded From:www.kpscvaani.com



### ಮೂರು ಕೋಟಿ ದಾಟಿದ

# ಡಿಜಿಟಲ್ ಗ್ರಂಥಾಲಯ ನೋಂದಣಿ

ಇಂದಿನ ಡಿಜಿಟಲೀಕರಣ ಯುಗದಲ್ಲಿ "ಶ್ರೀಸಾಮಾನ್ಯರ ವಿಶ್ವವಿದ್ಯಾಲಯ" ಎಂದು ಕರೆಯಲ್ಪಡುವ ಸಾರ್ವಜನಿಕ ಗ್ರಂಥಾಲಯವು ಇಡೀ ದೇಶದಲ್ಲಿ ಮಾದರಿ ಡಿಜಿಟಲ್ ಗ್ರಂಥಾಲಯ ವ್ಯವಸ್ಥೆ ಹೊಂದಿದ ಮೊದಲ ರಾಜ್ಯವಾಗಿದ್ದು, ಡಿಜಿಟಲ್ ಗ್ರಂಥಾಲಯ ನೋಂದಣಿಯು 3 ಕೋಟಿಗೂ ಹೆಚ್ಚು ದಾಟಿದೆ.

ಡಿಜಿಟಲ್ ಗ್ರಂಥಾಲಯಗಳೆಂದರೆ ಜಗತ್ತಿನ ಎಲ್ಲಾ ವಿಷಯಗಳನ್ನು ತಂತ್ರಜ್ಞಾನದ ಮೂಲಕ ಮತ್ತೆ ಮತ್ತೆ ಪಡೆಯುವ ಜ್ಞಾನದ ನಿರಂತರ ಪ್ರವಾಹ ಎನ್ನಬಹುದು. ಇದು ಸಹಸ್ರಾರು ಓದುಗರು ಒಂದೇ ವಿಷಯವನ್ನು ಏಕಕಾಲದಲ್ಲಿ ವಿಶ್ವದ ಯಾವುದೇ ಮೂಲೆಯಲ್ಲಿ ಬೇಕಾದರೂ ಪಡೆಯುವ ಒಂದು ಅದ್ಭುತ ಕ್ರಿಯೆ.

ಪುಸ್ತಕಗಳನ್ನು ಸಂಗ್ರಹಿಸುವ ಸ್ಥಳವೆ ಗ್ರಂಥಾಲಯ. ಸಾರ್ವಜನಿಕ ಸಮುದಾಯದಲ್ಲಿ ವಿದ್ಯೆ, ಜ್ಞಾನ, ಓದಿನ ಬಗ್ಗೆ ಆಸಕ್ತಿ ಮತ್ತು ಅಭಿರುಚಿ ಬೆಳೆಸಲು ಉದ್ದೇಶಿಸಿ ಸ್ಥಾಪನೆ ಮಾಡಿರುವ ಮುಕ್ತ ಸಾರ್ವಜನಿಕ ವ್ಯವಸ್ಥೆಯೇ ಸಾರ್ವಜನಿಕ ಗ್ರಂಥಾಲಯ.

ಕಾಲ, ದೇಶಗಳ ಮಿತಿಯಿಲ್ಲದೆ, ಸಹಸ್ರಾರು ಮೇಧಾವಿಗಳ ಅನುಭವದ ಸಾರವನ್ನು ಮುಂದಿನ ಪೀಳಿಗೆಗೆ ಕಾಯ್ದಿಟ್ಟು, ಹಂಚಿ ಸ್ಪಂದನಕ್ಕೆ ಗುರಿ ಮಾಡುವ ಸಾಧನಗಳೇ ಗ್ರಂಥಗಳು. ಬಳಸಿದಷ್ಟು ಅಭಿವೃದ್ಧಿ ಹೊಂದುವ ಈ ಅಮೂಲ್ಯ ಆಸ್ತಿ ಮಾನವ ಜನಾಂಗದ ಸೊತ್ತು. ನಮ್ಮ ಸಂಸ್ಕೃತಿಯನ್ನು ಅರ್ಥಪೂರ್ಣ ಪರಂಪರೆಯನ್ನು ಮತ್ತು ಕ್ಷಣ ಕ್ಷಣಕ್ಕೂ ಬೆಳೆಯುತ್ತಿರುವ ಜ್ಞಾನವನ್ನು ಅಳಿಯದಂತೆ ರಕ್ಷಿಸಿಕೊಂಡು ಅಜ್ಞಾನದಿಂದ ಜ್ಞಾನದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವ ಸಾಧನಗಳೇ ಗ್ರಂಥಗಳು.

ವಿಜ್ಞಾನ, ಕಲೆ, ಸಾಹಿತ್ಯ, ಕಾದಂಬರಿ, ಕವನ, ಕಥೆ, ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಮೊದಲ ಪ್ರಕಾರಗಳು ಸಂಬಂಧಿಸಿದ ಪುಸ್ತಕಗಳು ಗ್ರಂಥಾಲಯದಲ್ಲಿರುತ್ತವೆ. ಮನುಷ್ಯನ ಜೀವನದಲ್ಲಿ ಪುಸ್ತಕಗಳು ಬಹಳ ಪ್ರಮುಖ ಪಾತ್ರ ವಹಿಸುತ್ತವೆ. ಜ್ಞಾನಾಭಿವೃದ್ಧಿಗೆ ಗ್ರಂಥಾಲಯ ಪ್ರಮುಖ ಸ್ಥಾನ ಪಡೆಯುತ್ತದೆ. ಓದುಗರು ಎಲ್ಲಾ ಪುಸ್ತಕವನ್ನು ಹಣ ಕೊಟ್ಟು ಖರೀದಿಸಲು ಸಾಧ್ಯವಾಗದೆ ಇರುವುದರಿಂದ ಗ್ರಂಥಾಲಯ ಈ ಕೊರತೆಯನ್ನು ನೀಗಿಸುತ್ತದೆ.



**ರಾಜ್ಯದಲ್ಲಿ ಡಿಜಿಟಲ್ ಗ್ರಂಥಾಲಯಗಳಾಗಿ ಮಾರ್ಪಾಡಾಗಿರುವ ಗ್ರಂಥಾಲಯಗಳಿಗೆ ಮೂರು ಕೋಟಿಗೂ ಹೆಚ್ಚು ಜನರು ನೋಂದಣಿ ಮಾಡಿಕೊಂಡಿದ್ದಾರೆ.**

ಎನ್. ನಾಗರತ್ನಮ್ಮ



Downloaded From:www.kpscvaani.com



## ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯವನ್ನು ಬಳಸುವ ಪ್ರಕ್ರಿಯೆ:

- ಗೂಗಲ್ ಕ್ರೋಮ್ ತೆರೆಯಿರಿ www.karnatakadigitalpubliclibrary.org ಎಂದು ಟೈಪ್ ಮಾಡಿ.
- ಲಾಗಿನ್/ರಿಜಿಸ್ಟರ್ ಬಟನ್ ಆಯ್ಕೆ ಮಾಡಿ.
- "ಈಗ ರಚಿಸಿ" ಎಂಬುದನ್ನು ಕ್ಲಿಕ್ ಮಾಡಿ (ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ)
- ಹೆಸರು, ಮೊಬೈಲ್ ಸಂಖ್ಯೆ ಇಮೇಲ್ ನೀಡಿ (ಐಚ್ಛಿಕ), ಡ್ರಾಪ್ ಡೌನ್ ಪರಿವಿಡಿಯಿಂದ ಗ್ರಂಥಾಲಯವನ್ನು ಆಯ್ಕೆ ಮಾಡಿ (ನೋಂದಣಿ ಪ್ರಕ್ರಿಯೆಗೆ ಗ್ರಂಥಾಲಯವನ್ನು ಆಯ್ಕೆ ಮಾಡಲೇಬೇಕು) ಸೈನ್‌ಅಪ್ ಕ್ಲಿಕ್ ಮಾಡಿ.
- ನಿಮ್ಮ ಮೊಬೈಲ್ ಸಂಖ್ಯೆಯಲ್ಲಿ ಸ್ವೀಕರಿಸಿದ ಒಟಿಪಿಯನ್ನು ನಮೂದಿಸಿ.
- ನಿಮ್ಮ ಪಾಸ್ವರ್ಡ್ (ಕೇವಲ 4 ಅಕ್ಷರಗಳು) ನಮೂದಿಸಿ, ಸೈನ್‌ಅಪ್ ಕ್ಲಿಕ್ ಮಾಡಿ ಈಗ ನೀವು ನಿಮ್ಮ ಮೊಬೈಲ್ ಸಂಖ್ಯೆ ಮತ್ತು ಪಾಸ್ವರ್ಡ್ ಬಳಸಿ ಲಾಗಿನ್ ಮಾಡಬಹುದು.
- 1 ರಿಂದ 6 ರ ವರೆಗಿನ ನೋಂದಣಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಮೊಬೈಲ್ ಆ್ಯಪ್ ನಿಂದಲೂ ಇದೇ ಲಾಗಿನ್ ಮತ್ತು ಪಾಸ್‌ವರ್ಡ್ ಬಳಸಿ ಡಿಜಿಟಲ್ ಲೈಬ್ರರಿಯನ್ನು ಉಪಯೋಗಿಸಬಹುದು.
- ಆ್ಯಪ್ ಹೆಸರು : "e-Sarvajanika Granthalaya"
- ಯಾವುದೇ ಟೈಪಿಂಗ್ ದೋಷವಿದ್ದಲ್ಲಿ ಆ್ಯಪ್‌ನ್ನು ಪ್ರದರ್ಶಿಸಲಾಗವುದಿಲ್ಲ ಅಥವಾ ಲಭ್ಯವಿಲ್ಲ ಎಂದು ಹೇಳುತ್ತದೆ.
- https://play.gogle.com/store/apps,deatils?id=com.mintbook ಈ ಲಿಂಕ್‌ನ್ನು ಬಳಸಿಕೊಂಡು ಕೂಡ ಆ್ಯಪ್‌ನ್ನು ಸುಲಭವಾಗಿ ಪ್ರವೇಶಿಸಬಹುದು.
- ಸಹಾಯದ ಅಗತ್ಯವಿದ್ದಲ್ಲಿ ದಯವಿಟ್ಟು 080–22867358 ಹಾಗೂ 22864990 ಗೆ ಕರೆ ಮಾಡಿ ಅಥವಾ kdpldigilib@gmail.com ಗೆ ಇಮೇಲ್ ಮಾಡಬಹುದು.

ಭಾರತದ ಗ್ರಂಥಾಲಯ ವಿಜ್ಞಾನದ ಪಿತಾಮಹಾರೆಂದೇ ಹೆಸರುವಾಸಿಯಾಗಿರುವ ಡಾ: ಎಸ್. ಆರ್. ರಂಗನಾಥನ್ ಗ್ರಂಥಾಲಯ ವಿಜ್ಞಾನ ಕ್ಷೇತ್ರಕ್ಕೆ ನೀಡದೇ ಇರುವ ಸೇವೆಗಳಿಲ್ಲ. ಗ್ರಂಥಾಲಯ ಆಡಳಿತ ಮತ್ತು ನಿರ್ವಹಣೆ, ವರ್ಗೀಕರಣ, ಸೂಚೀಕರಣ, ನಿರ್ದೇಶೀಕರಣ ಸೇವೆ, ಪ್ರಲೇಖನ ಸೇವೆ, ಗ್ರಂಥಾಲಯ ವಿಜ್ಞಾನದ ಪಂಚಸೂತ್ರಗಳು, ಹೀಗೆ ಅವರು ಗ್ರಾಂಥಾಲಯಕ್ಕೆ ನೀಡಿದ ಕೊಡುಗೆಗಳನ್ನು ದಾಖಲಿಸಬಹುದು.

ಡಾ.ಎಸ್.ಆರ್.ರಂಗನಾಥನ್ ಇವರು ಗ್ರಂಥಾಲಯ ವಿಜ್ಞಾನಕ್ಕೆ ನೀಡಿದ ಅಪಾರ ಕೊಡುಗೆಯ ಸಲುವಾಗಿ, ಅವರ ಜನ್ಮ ದಿನವಾದ ಆಗಸ್ಟ್ 12 ರಂದು "ಗ್ರಂಥಪಾಲಕರ ದಿನಾಚರಣೆ" ಎಂದು ಘೋಷಿಸಿದೆ. ಅದರಂತೆ ಪ್ರತಿ ಆಗಸ್ಟ್ 12ರಂದು ಗ್ರಂಥಪಾಲಕರ ದಿನಾಚರಣೆ ಆಚರಿಸುವುದರ ಜೊತೆಗೆ ಆ ದಿನದಂದು ಗ್ರಾಂಥಾಲಯದಲ್ಲಿ ಉತ್ತಮ ಸೇವೆ ನೀಡಿದ ಗ್ರಂಥಪಾಲಕರಿಗೆ "ಉತ್ತಮ ಗ್ರಂಥಪಾಲಕ" ಪುರಸ್ಕಾರ ನೀಡಿ ಗೌರವಿಸುತ್ತಾ ಬರಲಾಗುತ್ತಿದೆ.

ಓದುಗರ "ಜ್ಞಾನ ಭಂಡಾರ"ವಾದ ಗ್ರಂಥಾಲಯವನ್ನು ಕೋವಿಡ್ ಕಾಣಿಸಿಕೊಂಡ ಬಳಿಕ ಸಾರ್ವಜನಿಕರ ಉಪಯೋಗಕ್ಕೆ ಗ್ರಂಥಗಳ ಡಿಜಿಟಲೀಕರಣಕ್ಕೆ ಆದ್ಯತೆ ನೀಡಲಾಗಿತ್ತು. ಇದರಿಂದಾಗಿ ಹೆಸರು ನೋಂದಣಿ ಹಾಗೂ ಓದುಗರ ಸಂಖ್ಯೆ ಹೆಚ್ಚಳವಾಗತೊಡಗಿತು. ಈವರೆಗೆ 3 ಕೋಟಿ 54 ಲಕ್ಷ 72 ಸಾವಿರದ 966 ಸದಸ್ಯರು ಡಿಜಿಟಲ್ ಗ್ರಂಥಾಲಯದಲ್ಲಿ ನೋಂದಣಿಯಾಗಿದ್ದಾರೆ. 23,55,642 ಇ–ಕಂಟೆಂಟ್‌ಗಳನ್ನು ಸಾರ್ವಜನಿಕರು ಹೊಂದಿದ್ದಾರೆ.


ರಾಜ್ಯಾದ್ಯಂತ ಈ ಯೋಜನೆ ಅಡಿಯಲ್ಲಿ 26 ನಗರ ಕೇಂದ್ರ ಗ್ರಂಥಾಲಯಗಳು, 30 ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಮತ್ತು 216 ತಾಲ್ಲೂಕು ಗ್ರಂಥಾಲಯಗಳು ಸೇರಿದಂತೆ ಒಟ್ಟು 272 ಗ್ರಂಥಾಲಯಗಳಿಗೆ ಮೊದಲ ಹಂತದಲ್ಲಿ ಡಿಜಿಟಲ್ ಗ್ರಂಥಾಲಯ ಸೌಲಭ್ಯವನ್ನು ಒದಗಿಸಲಾಗಿದೆ. ಎರಡನೇ ಹಂತದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 100 ಶಾಖಾ ಗ್ರಂಥಾಲಯಗಳು ಸೇರಿದಂತೆ ಒಟ್ಟು 372 ಗ್ರಂಥಾಲಯಗಳಿಗೆ ಡಿಜಿಟಲ್ ಗ್ರಂಥಾಲಯ ಸೌಲಭ್ಯವನ್ನು ಒದಗಿಸಲಾಗಿದೆ.

18.75 ಲಕ್ಷ ಇ–ವಿಷಯಗಳನ್ನು ಡಿಜಿಟಲ್ ಗ್ರಂಥಾಲಯಕ್ಕೆ ಅಳವಡಿಕೆ ಮಾಡಲಾಗಿದೆ. ಕನ್ನಡ, ಇಂಗ್ಲೀಷ್, ಹಿಂದಿ ಉರ್ದು, ಮರಾಠಿ, ತಮಿಳು ಮತ್ತು ತೆಲುಗು ಭಾಷೆಯ ವಿಷಯಗಳನ್ನು ಅಳವಡಿಸಲಾಗಿದೆ. ರಾಜ್ಯ ಮತ್ತು ಸಿಬಿಎಸ್‌ಸಿ ಪಠ್ಯವನ್ನೂ ಡಿಜಿಟಲ್ ರೂಪದಲ್ಲಿ ಒದಗಿಸಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಕಾರಿಯಾಗುವ ವಿಷಯಗಳೂ ಡಿಜಿಟಲ್ ಗ್ರಂಥಾಲಯದ ಪೋರ್ಟಲ್‌ನಲ್ಲಿ ಸಿಗುತ್ತಿವೆ. ರಾಜ್ಯದ ವಿವಿಧ ಜಿಲ್ಲೆಗಳ ಸರ್ಕಾರಿ ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ 10 ಲಕ್ಷ ವಿದ್ಯಾರ್ಥಿಗಳಿಗೆ ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್ ನೆರವಿನಿಂದ ಕಲಿಕಾ ವಿಷಯಗಳನ್ನು ಒದಗಿಸಲಾಗುತ್ತಿದೆ.

ಒಟ್ಟಿನಲ್ಲಿ ಈ ಡಿಜಿಟಲ್ ಗ್ರಂಥಾಲಯಗಳಿಂದಾಗಿ ಈಗ ಮನೆ ಬಾಗಿಲಿಗೆ ಅನ್ನುವುದಕ್ಕಿಂತ ಕೂತಲ್ಲಿಗೆ ಬೇಕಾದ ಪುಸ್ತಕವನ್ನು ಒದಗಿಸುವುದರಿಂದ ಓದುವ ವಿದ್ಯಾರ್ಥಿಗಳಿಗೆ ಮತ್ತು ಓದುವ ಹವ್ಯಾಸ ಇರುವವರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಟ್ಟಿದೆ.


Downloaded From:www.kpscvaani.com

## ಪದಬಂಧ-48



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ಈತ ಕವಿತೆ ಬರೆಯುವವನು (2)
4. ಬಸವಣ್ಣನವರು ಕೈಲಾಸವೆಂದಿರುವ ಕೆಲಸ ಉಲ್ಟಾಕಾಣುತ್ತಿದೆ (3)
6. ಈತ ರಗಳೆಯ ಕವಿ (4)
7. ಗದಾಯುದ್ಧ ಕಾವ್ಯ ರಚಿಸಿದ ಈತ ಶಕ್ತಿ ಕವಿ ಎಂದೇ ಖ್ಯಾತಿ ಪಡೆದಿದ್ದಾನೆ (2)
8. ಶಿಶುನಾಳ ಶರೀಫರಿಗಿರುವ ಬಿರುದು (7)
11. ಶಿವರಾಮಕಾರಂತರ ಹುಟ್ಟೂರು (2)
13. ಘನತೆಯುಳ್ಳ ವ್ಯಕ್ತಿ (4)
15. ಕಸ್ತೂರಿ ಕಂಪಿನ ಭಾಷೆ (3)
16. ಕೂರಿಸುವಾಗ ಶಿಶು ಕಾಣುತ್ತಿದೆಯಲ್ಲಾ! (2)

### ಮೇಲಿಂದ ಕೆಳಕ್ಕೆ

1. ನಮ್ಮ ಭಾಷೆ ಈ ಸುಗಂಧದ್ರವ್ಯದಂತೆ (3)
2. ಹೂವಿನ ದಳ (3)
3. ಪೇಢಾನಗರಿ ಎಂದೇ ಪ್ರಸಿದ್ಧವಾಗಿರುವ ಊರು (4)
5. ಕರ್ನಾಟಕದ ಕಾಶ್ಮೀರ ಎಂದೇ ಹೆಸರುವಾಸಿಯಾಗಿರುವ ಬಂದರು ನಗರ ಉತ್ತರಕನ್ನಡ ಜಿಲ್ಲೆಯಲ್ಲಿದೆ (4)
6. ದನ ಕಟ್ಟುವ ಜಾಗ (2)
8. ದೇವರಾಜ ಅರಸುರವರು ನಮ್ಮ ಕನ್ನಡ ನಾಡನ್ನು ಹೀಗೆಂದು ಹೆಸರಿಟ್ಟರು (4)
9. ಹರಿಶ್ಚಂದ್ರ ಕಾವ್ಯದ ಕರ್ತೃವಿನ ಹೆಸರು ಉಲ್ಟಾ ಆಗಿದೆ (4)
10. ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
12. ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ (3)
14. ಈ ರೀತಿ ನಮಸ್ಕರಿಸು (3)

### ಉತ್ತರ

**ಎಡದಿಂದ ಬಲಕ್ಕೆ**

1. ಕವಿ 4. ಕಯಕಾ 6. ಹರಿಹರ 7. ರನ್ನ 8. ಕನ್ನಡದಕಬೀರ 11. ಕೋಟ 13. ಘನವಂತ 15. ಕನ್ನಡ 16. ಕೂಸು

**ಮೇಲಿಂದ ಕೆಳಕ್ಕೆ**

1. ಕಸ್ತೂರಿ 2. ಪಕಳೆ 3. ಧಾರವಾಡ 5. ಕಾರವಾರ 6. ಹಟ್ಟಿ 8. ಕರ್ನಾಟಕ 9. ಕವಾಂಘರಾ 10. ಪ್ಲುತ 12. ಕಡಗ 14. ವಂದಿಸು

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಅಕ್ಟೋಬರ್ 2 ರಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಜರುಗಿದ ಗಾಂಧಿ ಸೇವಾ ಪ್ರಶಸ್ತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಅವರು ಅಂದು ಬಿಡುಗಡೆಗೊಳಿಸಿದ ಗಾಂಧಿ ಸೇವಾ ಪುರಸ್ಕೃತರ ಕುರಿತ ಕಿರು ಹೊತ್ತಿಗೆಯನ್ನು ಓದುತ್ತಿರುವುದು.




ಮೈಸೂರು ದಸರಾ ಮೆರವಣಿಗೆಯಲ್ಲಿ ಸಾಗಿದ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸಿದ್ಧಪಡಿಸಿದ್ದ ಸ್ತಬ್ಧಚಿತ್ರ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com